ಆಸಾಂನಿ.__/2019
**DES No. __ /2019**

# ಕರ್ನಾಟಕ ಸರ್ಕಾರ
# GOVERNMENT OF KARNATAKA

# *ವಾರ್ಷಿಕ ಆಡಳಿತ ವರದಿ 2018-19*
# *Annual Administration Report 2018-19*

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ
ಬೆಂಗಳೂರುDirectorate of Economics & Statistics
Bengaluru-560001

*Web:http://des.kar.nic.in*

# ಮುನ್ನುಡಿ

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಸರ್ಕಾರಕ್ಕೆ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ರೂಪಿಸಲು ಅಗತ್ಯವಾದ ಸಾಮಾಜಿಕ ಮತ್ತುಆರ್ಥಿಕ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ನೀಡುವ ಜವಾಬ್ದಾರಿಯುತ ಸಂಸ್ಥೆಯಾಗಿರುತ್ತದೆ. ಈ ನಿರ್ದೇಶನಾಲಯ ಅನೇಕ ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ, ಕ್ರೋಢೀಕರಿಸಿ, ಪ್ರಕಟಣೆಗಳ ರೂಪದಲ್ಲಿ ಹೊರತರುತ್ತಿದೆ. ಈ ಪ್ರಕಟಣೆಗಳು ಯೋಜನಾ ಅನುಷ್ಠಾನಾಧಿಕಾರಿಗಳಿಗೆ, ಆಡಳಿತಗಾರರಿಗೆ, ಸಂಶೋಧಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಉಪಯುಕ್ತಕರ ಮಾಹಿತಿಗಳನ್ನು ಒದಗಿಸುತ್ತಿದೆ.

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಕೆಲವೊಂದು ಮಾಹಿತಿಗಳನ್ನು ನೇರವಾಗಿ ತನ್ನ ಕ್ಷೇತ್ರ ಅಧಿಕಾರಿಗಳಿಂದ ಸಂಗ್ರಹಿಸುತ್ತದೆಯಾದರೂ, ಬಹುತೇಕ ಮಾಹಿತಿಗಳನ್ನು ರಾಜ್ಯದ ವಿವಿಧ ಇಲಾಖೆಗಳಿಂದ ಸಂಗ್ರಹಿಸಲಾಗುತ್ತಿದೆ. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವನ್ನುಇತರೆ ಇಲಾಖೆಗಳಿಗೆ ಸಾಂಖ್ಯಿಕ ಚಟುವಟಿಕೆಗಳ ಬಗ್ಗೆ ನೆರವು ನೀಡಲು "ನೋಡಲ್ಏಜೆನ್ಸಿ" ಯೆಂಬುದಾಗಿ ಗುರುತಿಸಲ್ಪಟ್ಟಿರುತ್ತದೆ.

ಈ ವಾರ್ಷಿಕ ಆಡಳಿತ ವರದಿಯುಪ್ರತಿ ವರ್ಷ ಹೋರತರುವ ಪ್ರಕಟಣೆಯಾಗಿದ್ದು, ಇದನ್ನು ರಾಜ್ಯ ಸರ್ಕಾರದ ಸೂಚನೆಗಳನ್ವಯ ತಯಾರಿಸಲಾಗಿರುತ್ತದೆ. ಈ ಪ್ರಕಟಣೆಯ ಮೂಲ ಉದ್ದೇಶ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು 2018-19ರಲ್ಲಿ ಕೈಗೊಂಡಿರುವ ಸಾಂಖ್ಯಿಕ ಚಟುವಟಿಕೆಗಳನ್ನು ದಾಖಲೀಕರಣ ಮಾಡಿ ಅದನ್ನು ಸಂಬಂಧಪಟ್ಟವರ ಗಮನಕ್ಕೆ ತರುವುದಾಗಿರುತ್ತದೆ. ಈ ವರದಿಯನ್ನುಸರ್ಮಪಕವಾಗಿ ಹೊರತರಲು ಶ್ರಮಿಸಿದ ಪ್ರಕಟಣೆ, ತರಬೇತಿ ಮತ್ತು ಸಮನ್ವಯ ವಿಭಾಗದಜಂಟಿ ನಿರ್ದೇಶಕರಿಗೆ ಹಾಗೂ ಇನ್ನಿತರೆ ಸಾಂಖ್ಯಿಕ ಸಿಬ್ಬಂದಿಯವರಿಗೆ ನನ್ನ ಅಭಿನಂದನೆಗಳು.

ಈ ಪ್ರಕಟಣೆಯನ್ನುಉತ್ತಮ ಪಡಿಸುವ ದಿಕ್ಕಿನಲ್ಲಿ ನೀಡುವ ಸಲಹೆಗಳಿಗೆ ಸದಾ ಸ್ವಾಗತವಿದೆ.

(ಡಾ॥ ಸಿ.ಹೆಚ್.ವಸುಂಧರಾ ದೇವಿ)

ನಿರ್ದೇಶಕರು

ಬೆಂಗಳೂರು.

ದಿನಾಂಕ: 16/12/2019

## ವಿಷಯಾನುಕ್ರಮಣಿಕೆ


| ಕ್ರಮ ಸಂಖ್ಯೆ | ವಿಷಯ. | ಪುಟ ಸಂಖ್ಯೆ |
|---|---|---|
| 1 | ಪೀಠಿಕೆ<br>ಕರ್ನಾಟಕದಲ್ಲಿ ಸಾಂಖ್ಯಿಕ ವ್ಯವಸ್ಥೆ | 1–8 |
| 2 | ಅಧ್ಯಾಯ–1: ದೂರದೃಷ್ಟಿ, ನಿರ್ದಿಷ್ಟ ಪಡಿಸಿದಗುರಿ, ಉದ್ದೇಶ, ಇಲಾಖೆಯಕಾರ್ಯವ್ಯವಸ್ಥೆ ಹಾಗೂ ಕಾರ್ಯ ಮತ್ತು ಚಟುವಟಿಕೆಗಳು | 9–11 |
| 3 | ಅಧ್ಯಾಯ–2: ನಿರ್ದೇಶನಾಲಯದಕಾರ್ಯನಿರ್ವಹಣೆ | 12–38 |
| 4 | ಅಧ್ಯಾಯ–3: ಸಾರ್ವಜನಿಕ ಸಂಸ್ಥೆಗಳು, ಸಂಘಗಳು ಮತ್ತು ಎಸ್‌ಪಿವಿಗಳ ಕಾರ್ಯನಿರ್ವಹಣೆ | 39 |
| 5 | ಅಧ್ಯಾಯ–4: ಮೌಲ್ಯಮಾಪನ ಅಧ್ಯಯನಗಳು | 40 |
| 6 | ಅಧ್ಯಾಯ–5: ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಆಡಳಿತಾತ್ಮಕ ಚಟುವಟಿಕೆಗಳಲ್ಲಿ ಸಾಧನೆ | 41–42 |
| 7 | ಅಧ್ಯಾಯ–6: ಲೆಕ್ಕ ಪರಿಶೋಧನೆಯ ಆಕ್ಷೇಪಣೆಗಳು, ವ್ಯಾಜ್ಯಗಳು, ವಿಧಾನಸಭೆ/ವಿಧಾನ ಪರಿಷತ್ತಿನ ಪ್ರಶ್ನೆಗಳು | 43–44 |
| 8 | ಅನುಬಂಧ– 1<br>ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಕಾರ್ಯವ್ಯವಸ್ಥೆ ನಕ್ಷೆ | 45 |
| 9 | ಅನುಬಂಧ– 2<br>2016–17ನೇ ಸಾಲಿನಲ್ಲಿಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಿಂದ ಹೊರತರಲಾದ ಪ್ರಕಟಣೆಗಳು | 46 |
| 10 | ಅನುಬಂಧ– 3<br>2017–18ನೇ ಸಾಲಿನಲ್ಲಿಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಿಂದ ಹೊರತರಲಾದ ಪ್ರಕಟಣೆಗಳು | 47 |
| 11 | ಅನುಬಂಧ– 4<br>ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಅಧಿಕಾರಿ ಹಾಗೂ ಸಿಬ್ಬಂದಿಯ ಮಂಜೂರಾದ, ಭರ್ತಿಯಾದ ಮತ್ತು ಖಾಲಿಯಿರುವ ಹುದ್ದೆಗಳ ವಿವರಗಳು (ದಿನಾಂಕ 31.03.2018ರ ಅಂತ್ಯಕ್ಕೆ) | 48–49 |

# 1. ಪೀಠಿಕೆ

**1.1.** ವಿವಿಧ ಸಾಮಾಜಿಕ ಆರ್ಥಿಕ ವಿಷಯಗಳ ಬಗ್ಗೆ ಆರ್ಥೈಸುವ ಸಲುವಾಗಿ ಹಾಗೂ ಸ್ಥಿತಿಗತಿಗಳನ್ನು ಅರಿಯುವ ಸಲುವಾಗಿ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸುವ ಕಾರ್ಯವು ಸಂಖ್ಯಾಶಾಸ್ತ್ರಕ್ಕೆ ಸಂಬಂಧಿಸಿದ್ದು ಅನೇಕ ವರ್ಷಗಳಿಂದ ನಡೆಯುತ್ತಿದೆ. ಈ ಸಂಖ್ಯಾಶಾಸ್ತ್ರ ಪದವು ಏಕವಚನ ಹಾಗೂ ಬಹುವಚನದಲ್ಲಿ ಉಪಯೋಗಿಸಲಾಗುತ್ತಿದೆ. ಏಕವಚನದಲ್ಲಿ ಇದು ಸಂಖ್ಯಾ ವಿಜ್ಞಾನಕ್ಕೆ ಸಂಬಂಧಪಟ್ಟಿದ್ದು, ಬಹುವಚನದಲ್ಲಿ ಮಾಹಿತಿಯ ಗುಂಪಿನಿಂದ ಪರಿಮಾಣವನ್ನು ಲೆಕ್ಕಹಾಕುವುದಕ್ಕೆ ಸಂಬಂಧಪಟ್ಟಿರುತ್ತದೆ. ವೈಜ್ಞಾನಿಕ ಕ್ಷೇತ್ರದಲ್ಲಿ ಸಂಖ್ಯಾಶಾಸ್ತ್ರವು ಎಣಿಕೆ ಮಾಡುವ ಕಾರ್ಯಕ್ಕಿಂತಲೂ ಹೆಚ್ಚು ಅರ್ಥಪೂರ್ಣವಾಗಿದೆ. ಸಾರ್ವಜನಿಕ ನೀತಿ ನಿರೂಪಣೆ ರೂಪಿಸಲು ಹಾಗೂ ಉಸ್ತುವಾರಿ ಮಾಡಲು ಸಮರ್ಥ ನಿರ್ಧಾರ ಕೈಗೊಳ್ಳಲು ಉತ್ತಮ ಸಾಂಖ್ಯಿಕ ವ್ಯವಸ್ಥೆಯು ಪ್ರಥಮ ಆದ್ಯತೆಯಾಗಿರುತ್ತದೆ. ಗುಂಪುಗಳ, ವೈಯಕ್ತಿಕ ಮತ್ತು ಪ್ರಯೋಗಗಳ ಬಗೆಗಿನ ಗುಣಾತ್ಮಕ ಹಾಗೂ ಪರಿಮಾಣಾತ್ಮಕ, ವಿಸ್ತಾರವಾದ, ಮಾಹಿತಿಯನ್ನು ಪರಿಣಾಮಕಾರಿಯಾಗಿ ಬಳಸುವಲ್ಲಿ ಸಂಖ್ಯಾಶಾಸ್ತ್ರವು ಒಂದು ಅತೀ ಮಹತ್ವದ ಸಾಧನವಾಗಿರುತ್ತದೆ. ಇಂತಹ ಮಾಹಿತಿಗಳ ಸಂಗ್ರಹಣೆ, ವಿಶ್ಲೇಷಣೆ ಮತ್ತು ಸಮರ್ಥ ಮಂಡನೆಗೆ ಸಂಖ್ಯಾಶಾಸ್ತ್ರವು ಅನಿವಾರ್ಯ ಅವಶ್ಯಕತೆಯಾಗಿರುತ್ತದೆ.

**1.2.** ಭಾರತದಲ್ಲಿ 'ಯೋಜನೆ'ಯ ಶಾಖೆಯು ಪ್ರಾರಂಭವಾದಾಗಿನಿಂದ ಸಾಂಖ್ಯಿಕ ದತ್ತಾಂಶ/ ಮಾಹಿತಿಯ ಅವಶ್ಯಕತೆ ಹೆಚ್ಚಾಗುತ್ತಿದೆ. ಇದರಿಂದ ಕೇಂದ್ರ ಹಾಗೂ ರಾಜ್ಯಗಳಲ್ಲಿ ಸಾಂಖ್ಯಿಕ ವ್ಯವಸ್ಥೆಗಳು ರಚನೆಯಾದವು. ಸಾರ್ವಜನಿಕ ಆಡಳಿತದಲ್ಲಿ ಸಂಖ್ಯಾಶಾಸ್ತ್ರದ ಅವಶ್ಯಕತೆ ಹಾಗೂ ಬಳಕೆಯ ವಿಧಾನಕ್ಕನುಗುಣವಾಗಿ ಮತ್ತು ಸರ್ಕಾರದ ಕಾರ್ಯಚಟುವಟಿಕೆಗಳನ್ವಯ ಆಯಾ ದೇಶದ 'ಸಾಂಖ್ಯಿಕ ವ್ಯವಸ್ಥೆ'ಯು ರಚನೆಯಾಗಿರುತ್ತದೆಂದು ಸಮಂಜಸವಾಗಿ ಹೇಳಲಾಗಿದೆ.

**1.3.** ಮೊಟ್ಟ ಮೊದಲು ಅಂಕಿ ಅಂಶಗಳನ್ನು ಕ್ರಮಬದ್ಧವಾಗಿ ಸಂಗ್ರಹಿಸಲು ಶ್ರೀ ಜಾನ್ ಸ್ಟಾರ್ಚಿರವರ ಶಿಫಾರಸ್ಸನ್ನು (1874) ಆಧರಿಸಿ 1875 ರಲ್ಲಿ ನಾರ್ತ್ ವೆಸ್ಟ್ ಸಂಸ್ಥಾನದಿಂದ (ಈಗಿನ ಉತ್ತರ ಪ್ರದೇಶ) ಕೃಷಿ ಮತ್ತು ವಾಣಿಜ್ಯ ಚಟುವಟಿಕೆಗಳಿಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ಸಂಗ್ರಹಿಸಲು, ಸಾಂಖ್ಯಿಕ ಸಂಸ್ಥೆಯನ್ನು ಪ್ರಾರಂಭಿಸಲಾಯಿತು ಹಾಗೂ ನಿರ್ದೇಶಕರನ್ನು ನೇಮಕ ಮಾಡಲಾಯಿತು. ನಂತರ ಪ್ರತಿ ಸಂಸ್ಥಾನದಲ್ಲೂ ಕೃಷಿ ನಿರ್ದೇಶನಾಲಯ ಪ್ರಾರಂಭಿಸಲು ಮತ್ತು ನಿರ್ದೇಶಕರುಗಳಿಗೆ ನೆರವಾಗಲು ಸಾಂಖ್ಯಿಕ ಅಧಿಕಾರಿಗಳ ಹುದ್ದೆಯನ್ನು ಸೃಜಿಸಲು ಇಂಡಿಯನ್ ಫೈನಾನ್ಸ್ ಕಮೀಷನ್ ಶಿಫಾರಸ್ಸು ಮಾಡಿತು. ಅದರಂತೆ ಕೆಲವು ಸಂಸ್ಥಾನಗಳು ಮತ್ತು ಭಾರತ ಸರ್ಕಾರವು ಕೃಷಿ ಇಲಾಖೆಯನ್ನು ಪ್ರಾರಂಭಿಸಿದ್ದು, ಇವುಗಳು ಕೃಷಿಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ಕ್ರಮವಾಗಿ ಸಂಗ್ರಹಿಸಲು ಪ್ರಾರಂಭಿಸಿದವು. ನಂತರ 1895ರಲ್ಲಿ ವಿದೇಶಿ ವಾಣಿಜ್ಯ ವ್ಯವಹಾರಗಳಿಗೆ ಸಂಬಂಧಿಸಿದ ಕೃಷಿ ಅಂಕಿ ಅಂಶಗಳನ್ನು ಸಂಗ್ರಹಿಸಲು ಅಂಕಿ ಅಂಶಗಳ ಬ್ಯೂರೋವನ್ನು ಭಾರತ ಸರ್ಕಾರ ಸ್ಥಾಪಿಸಿತು. ಈ ಬ್ಯೂರೋದ ಮುಖ್ಯಸ್ಥರು ಅಂಕಿ ಅಂಶದ ಡೈರೆಕ್ಟರ್ ಜನರಲ್ ಆಗಿದ್ದರು. 1905ರಲ್ಲಿ ಆಮದು ಮತ್ತು ರಫ್ತು ಇತ್ಯಾಧಿಗೆ ಸಂಬಂಧಪಟ್ಟ ಸಾಂಖ್ಯಿಕ ಮಾಹಿತಿಯನ್ನು ಸಂಗ್ರಹಿಸಲು ಹಾಗೂ ಪ್ರಕಟಿಸಲು ಡೈರೆಕ್ಟರ್ ಜನರಲ್ ಆಫ್ ಕಮರ್ಷಿಯಲ್ ಇಂಟಲಿಜನ್ಸ್‌ನ್ನು ಪ್ರಾರಂಭಿಸಲಾಯಿತು.

**1.4.** ಅಂಕಿ ಅಂಶಗಳ ಬ್ಯೂರೋವನ್ನು ಡೈರೆಕ್ಟರ್ ಜನರಲ್‌ಗೆ ವರ್ಗಾಯಿಸಲಾಯಿತು. ನಂತರ, 1912ರಲ್ಲಿ ರಾಜಧಾನಿಯನ್ನು ಕಲ್ಕತ್ತದಿಂದ ದೆಹಲಿಗೆ ಬದಲಾಯಿಸಿದ್ದರಿಂದ ಕಮರ್ಷಿಯಲ್ ಇಂಟೆಲಿಜೆನ್ಸ್ ಮತ್ತು ಸಾಂಖ್ಯಿಕ ಇಲಾಖೆಗಳನ್ನು ಎರಡು ಪ್ರತ್ಯೇಕ ಇಲಾಖೆಗಳನ್ನಾಗಿ ಮಾಡಲಾಯಿತು. ಆದರೆ 1922ರಲ್ಲಿ ಎರಡು ಇಲಾಖೆಗಳನ್ನು ಕಮರ್ಷಿಯಲ್ ಇಂಟೆಲಿಜೆನ್ಸ್ ಮತ್ತು ಸಾಂಖ್ಯಿಕ

ನಿರ್ದೇಶನಾಲಯದಲ್ಲಿ ವಿಲೀನಗೊಳಿಸಲಾಯಿತು. ಸರ್.ಎಂ. ವಿಶ್ವೇಶ್ವರಯ್ಯರವರ ನೇತೃತ್ವದ The Indian Economic Enquiry Committee ಯು ವಿವಿಧ ಅಂಕಿ ಅಂಶಗಳ ಸಂಗ್ರಹಣೆಗೆ 1924 ರಲ್ಲಿ ಪ್ರತಿ ಸಂಸ್ಥಾನದಲ್ಲೂ ಸಾಂಖ್ಯಿಕ ಬ್ಯೂರೋ ಸೃಜಿಸುವುದರ ಜೊತೆಗೆ ರಾಷ್ಟ್ರೀಯ ಮಟ್ಟದಲ್ಲಿ ಕೇಂದ್ರೀಯ ಸಾಂಖ್ಯಿಕ ಪ್ರಾಧಿಕಾರವನ್ನು ಸ್ಥಾಪಿಸಿ ವಿವಿಧ ಚಟುವಟಿಕೆಗಳ ಅಂಕಿ ಅಂಶಗಳ ಮಾಹಿತಿಯನ್ನು ಸಂಗ್ರಹಿಸುವ ಹಾಗೂ ಸಮನ್ವಯ ಸಾಧಿಸುವ ಜವಾಬ್ದಾರಿ ವಹಿಸುವಂತೆ ಶಿಫಾರಸ್ಸು ಮಾಡಿತು. ಅಲ್ಲದೆ ಸಮಿತಿಯು ಆಯಾ ಇಲಾಖೆಗಳ ಅವಶ್ಯಕತೆಗೆ ಅನುಗುಣವಾಗಿ ಅಂಕಿ ಅಂಶಗಳನ್ನು ಸಂಗ್ರಹಣೆ ಮಾಡಬೇಕೆಂದೂ ಸಹ ಸಲಹೆ ಮಾಡಿತು. 1931ರಲ್ಲಿ ಕಾರ್ಮಿಕರ ರಾಯಲ್ ಕಮೀಷನ್, ಕಾರ್ಮಿಕರ ಅಂಕಿ ಅಂಶಗಳ ಅವಶ್ಯಕತೆಗೆ ಒತ್ತು ಕೊಟ್ಟು, ಇದಕ್ಕಾಗಿ ಸೂಕ್ತವಾದ ಶಾಸನವನ್ನು ರಚಿಸಬೇಕೆಂದು ಶಿಫಾರಸ್ಸು ಮಾಡಿತು. ಕಮಿಷನ್‌ನ್ನಿನ ಶಿಫಾರಸ್ಸುಗಳ ಮೇರೆಗೆ ಕೌನ್ಸಿಲ್ ಆಫ್ ಅಗ್ರಿಕಲ್ಚರ್ ರೀಸರ್ಚ್ (ಪ್ರಸ್ತುತ ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರ್ ರಿಸರ್ಚ್) ನ್ನು ಸಹ ಸ್ಥಾಪಿಸಲಾಯಿತು.

**1.5.** ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರ್ ರಿಸರ್ಚ್ ಅನ್ನು ಕೃಷಿಗೆ ಸಂಬಂಧಿಸಿದ ಎಲ್ಲಾ ಬಗೆಯ ಅಂಕಿ ಅಂಶಗಳಿಗೆ ನೋಡಲ್ ಏಜನ್ಸಿಯಾಗಿ ಕಾರ್ಯನಿರ್ವಹಿಸಲು ನಿಯೋಜಿಸಲಾಯಿತು. 1933ರಲ್ಲಿ ಆರ್ಥಿಕ ಅಂಕಿ ಅಂಶಗಳ ಮಾಹಿತಿಯ ಸಂಗ್ರಹಣೆ, ವರ್ಗೀಕರಣ ವಿಶ್ಲೇಷಣೆ ಹಾಗೂ ವಿವರಣೆ ಮಾಡುವ ಸಲುವಾಗಿ ಕೇಂದ್ರ ಮಟ್ಟದಲ್ಲಿ ಸಾಂಖ್ಯಿಕ ಸಂಶೋಧನಾ ಬ್ಯೂರೋವನ್ನು ಸ್ಥಾಪಿಸಲಾಯಿತು ಹಾಗೂ ಪ್ರೋ. ಎ.ಎಲ್.ಬೋಲೆ ಮತ್ತು ರಾಬರ್ಟ್‌ಸನ್‌ರವರ ಮಾರ್ಗದರ್ಶನದಲ್ಲಿ ಭಾರತದ ಮೊಟ್ಟ ಮೊದಲ ಆರ್ಥಿಕ ಗಣತಿಯನ್ನು ನಡೆಸಲಾಯಿತು. ಎಲ್ಲಾ ಸಚಿವಾಲಯಗಳ ಅಂಕಿ ಅಂಶಗಳ ಚಟುವಟಿಕೆಗಳಲ್ಲಿ ಸಮನ್ವಯ ಸಾಧಿಸುವ ಸಲುವಾಗಿ ನಿರ್ದೇಶಕರ ನೇತೃತ್ವದಲ್ಲಿ ಕೇಂದ್ರದಲ್ಲಿ ಒಂದು ಖಾಯಂ ಸಂಸ್ಥೆಯನ್ನು ಸ್ಥಾಪಿಸುವಂತೆ ಪ್ರೋ. ಎ.ಎಲ್.ಬೋಲೆ ಯವರ ನೇತೃತ್ವದ ಸಮಿತಿ ಶಿಫಾರಸ್ಸು ಮಾಡಿತು. ಆರ್ಥಿಕ ವಲಯಕ್ಕೆ ಸಂಬಂಧಿಸಿದ ಮಾಹಿತಿಯ ಸಂಗ್ರಹಣೆ ಮತ್ತು ವಿಶ್ಲೇಷಣೆ ಮಾಡುವ ಸಲುವಾಗಿ 1938ರಲ್ಲಿ ಕೇಂದ್ರದಲ್ಲಿ ಆರ್ಥಿಕ ಸಲಹೆಗಾರರ ಕಛೇರಿಯನ್ನು ಸ್ಥಾಪಿಸಲಾಯಿತು ಹಾಗೂ ಸಾಂಖ್ಯಿಕ ಸಂಶೋಧನಾ ಬ್ಯೂರೋವನ್ನು ಆರ್ಥಿಕ ಸಲಹೆಗಾರರ ಕಛೇರಿಯಲ್ಲಿ ವಿಲೀನಗೊಳಿಸಲಾಯಿತು.

ಆದರೆ, 2ನೇ ಮಹಾ ಯುದ್ಧದ ಸಂದರ್ಭದಲ್ಲಿ ವಿವಿಧ ರೀತಿಯ ಅಂಕಿ ಅಂಶಗಳ ಮಾಹಿತಿಯಲ್ಲಿನ ನ್ಯೂನ್ಯತೆಗಳ ಬಗ್ಗೆ ಒತ್ತಿ ಹೇಳಲಾಯಿತು. ಇದರ ಪರಿಣಾಮವಾಗಿ, ಭಾರತ ಸರ್ಕಾರದ ಹೆಚ್ಚಿನ ಸಚಿವಾಲಯಗಳಲ್ಲಿ ಹಾಗೂ ಪ್ರಾಂತೀಯ ಸರ್ಕಾರಗಳಲ್ಲಿ ಸಾಂಖ್ಯಿಕ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು. 1932ರ ಆಸುಪಾಸಿನಲ್ಲಿ ಪ್ರೋ.ಪಿ.ಸಿ. ಮಹಲಾನೋಬೀಸ್ ಅವರು ಕಲ್ಕತ್ತದಲ್ಲಿ ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್‌ನ್ನು ಸ್ಥಾಪಿಸಿದರು. ಇದು ದೇಶದ ಸಾಂಖ್ಯಿಕ ಅಭಿವೃದ್ಧಿ ವ್ಯವಸ್ಥೆಗೆ ಬಹು ಪ್ರಮುಖವಾದ ಕೊಡುಗೆ ನೀಡಿತು. 1942ರಲ್ಲಿ, ಕಾರ್ಮಿಕ ಅಂಕಿ ಅಂಶಗಳ ಅಧಿನಿಯಮಗಳನ್ನು ಜಾರಿಗೆ ತರಲಾಯಿತು. 1946ರಲ್ಲಿ ಕೈಗಾರಿಕಾ ಅಂಕಿ ಅಂಶಗಳ ನಿರ್ದೇಶನಾಲಯದಿಂದ ಮೊದಲ ಕೈಗಾರಿಕಾ ಉತ್ಪಾದಕರ ಗಣತಿಯನ್ನು ನಡೆಸಲಾಯಿತು. 1947ರಲ್ಲಿ ಆರ್ಥಿಕ ಸಲಹೆಗಾರರ ಕಛೇರಿಯು ದೇಶದಲ್ಲಿ ಸಗಟು ಬೆಲೆಯ ಸೂಚ್ಯಂಕವನ್ನು ಪ್ರಕಟಿಸಲು ಪ್ರಾರಂಭಿಸಿತು.

**1.6.** ಭಾರತ ಸ್ವಾತಂತ್ರ್ಯದ ನಂತರ ಮತ್ತು ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳು ವಿಕಸನಗೊಂಡಂತೆ ದೇಶದ ಸಾಂಖ್ಯಿಕ ವ್ಯವಸ್ಥೆಯ ಅಭಿವೃದ್ಧಿಗೆ ಹೆಚ್ಚು ಮಹತ್ವ ಲಭಿಸಿತು. 1948ರಲ್ಲಿ ಭಾರತದ ಜನಗಣತಿ ಅಧಿನಿಯಮ 1948 ಅನ್ನು ಜಾರಿಗೊಳಿಸಲಾಯಿತು ಮತ್ತು ಅದುವರೆಗೆ ತಾತ್ಕಾಲಿಕವಾಗಿದ್ದ ಗಣತಿ ಸಂಸ್ಥೆಯನ್ನು ಖಾಯಂಗೊಳಿಸಲಾಯಿತು. 1949ರಲ್ಲಿ ಪ್ರೋ.ಪಿ.ಸಿ.ಮಹಾಲನೋಬೀಸ್ ರವರ ನೇತೃತ್ವದಲ್ಲಿ ರಾಷ್ಟ್ರೀಯ ಆದಾಯ ಸಮಿತಿ ಸ್ಥಾಪಿಸಲಾಯಿತು, ಹಾಗೂ ಈ ಸಮಿತಿಗೆ ನೆರವು ನೀಡಲು ಕೇಂದ್ರದಲ್ಲಿ

ಒಂದು Nucleous ಸಾಂಖ್ಯಿಕ ಘಟಕವನ್ನು ಸ್ಥಾಪಿಸಲಾಗಿ, ನಂತರ 1951ರಲ್ಲಿ ರಾಷ್ಟ್ರೀಯ ಸಾಂಖ್ಯಿಕ ಸಂಸ್ಥೆ (CSO) ಎಂದು ಅಭಿವೃದ್ಧಿ ಹೊಂದಿತು. 1950ರಲ್ಲಿ ರಾಷ್ಟ್ರೀಯ ಮಾದರಿ ಸಮೀಕ್ಷೆಯನ್ನು ಪ್ರಾರಂಭಿಸಲಾಯಿತು ಹಾಗೂ 1970 ರಲ್ಲಿ ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ (NSSO) ಎಂದು ಪುನರ್ ಸಂಘಟಿಸಲಾಯಿತು. ಕೃಷಿ ಅಂಕಿ ಅಂಶಗಳ ಸಮನ್ವಯ ಸಮಿತಿಯ ಶಿಫಾರಸ್ಸನ್ನು ಆಧರಿಸಿ, 1948 ರಲ್ಲಿ ಭಾರತ ಸರ್ಕಾರದ ಕೃಷಿ ಇಲಾಖೆಯಲ್ಲಿದ್ದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವನ್ನು Streamline ಗೊಳಿಸಲಾಯಿತು. 1954ರಲ್ಲಿ ರಾಷ್ಟ್ರೀಯ ಆದಾಯ ಘಟಕವನ್ನು ರಾಷ್ಟ್ರೀಯ ಸಾಂಖ್ಯಿಕ ಸಂಸ್ಥೆಗೆ ಸೇರ್ಪಡೆಗೊಳಿಸಲಾಯಿತು. ಆ ನಂತರ ಅಲ್ಲಿಯವರೆವಿಗೂ ಮುಖ್ಯ ನೋಡಲ್ ಏಜನ್ಸಿ ಆಗಿದ್ದ ಕಮರ್ಷಿಯಲ್ ಇಂಟಲಿಜೆನ್ಸ್ ನಿರ್ದೇಶನಾಲಯವನ್ನು ರಾಷ್ಟ್ರೀಯ ಸಾಂಖ್ಯಿಕ ಸಂಸ್ಥೆಯಲ್ಲಿ ವಿಲೀನಗೊಳಿಸಿ, ಕೆಲವು ಮುಖ್ಯವಾದ ಸಂಸ್ಥೆಗಳ ಪುನರ್ ರಚನೆ/ಪುನರ್ ನಿರ್ಮಾಣ ಮಾಡಲಾಯಿತು. ಕ್ರಮೇಣ ಭಾರತ ಸರ್ಕಾರದ ಬಹಳಷ್ಟು ಸಚಿವಾಲಯಗಳಲ್ಲಿ ಹಾಗೂ ರಾಜ್ಯಗಳ ಇಲಾಖೆಗಳಲ್ಲಿ ಸಾಂಖ್ಯಿಕ ವಿಭಾಗಗಳನ್ನು ಸ್ಥಾಪಿಸಿ ಬಲಪಡಿಸಲಾಯಿತು. ಈ ಬೆಳವಣಿಗೆಯಲ್ಲಿ ಯೋಜನಾ ಆಯೋಗ, ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಇಂಡಿಯನ್ ಸ್ಟ್ಯಾಸ್ಟಿಕಲ್ ಇನ್ಸ್ಟಿಟ್ಯೂಟ್, ಕಲ್ಕತ್ತ ಇವುಗಳು ಮಹತ್ತರ ಪಾತ್ರವನ್ನು ವಹಿಸಿದವು.

**1.7.** 1947 ಕ್ಕಿಂತ ಮೊದಲು, ರಾಜ್ಯಗಳಲ್ಲಿ ಸಾಂಖ್ಯಿಕ ವ್ಯವಸ್ಥೆ ಹೆಸರಿಗೆ ಮಾತ್ರ ಅಸ್ತಿತ್ವದಲ್ಲಿದ್ದು, ಹೆಸರು ಹೇಳುವಂತಹ ಸಾಂಖ್ಯಿಕ ವ್ಯವಸ್ಥೆಯಾಗಿರಲಿಲ್ಲ. ಯೋಜನಾ ಪದ್ಧತಿ ಮತ್ತು ಭಾರತ ಸರ್ಕಾರದ ಆರ್ಥಿಕ ಸಹಾಯದಿಂದ ರಾಜ್ಯಗಳಲ್ಲಿ ಸಾಂಖ್ಯಿಕ ವ್ಯವಸ್ಥೆ ಸ್ಥಾಪಿಸಲು ಮತ್ತು ಬೆಳವಣಿಗೆಯಾಗಲು ಸಾಧ್ಯವಾಯಿತು.

**1.8.** ರಾಷ್ಟ್ರೀಯ ಸಾಂಖ್ಯಿಕ ಸಂಸ್ಥೆಯು ಯೋಜನಾ ಆಯೋಗದ "ಸಮೀಕ್ಷೆ ಮತ್ತು ಸಾಂಖ್ಯಿಕ ವಿಭಾಗ"ದ ಸೇವೆ ಹಾಗೂ ದೇಶದ ಎಲ್ಲಾ ಸಾಂಖ್ಯಿಕ ಮಾಹಿತಿಯ ನೋಡಲ್ ಏಜನ್ಸಿಯಾಗಿ ರಚನೆಯಾಗಿರುತ್ತದೆ. ರಾಜ್ಯ ಮಟ್ಟದಲ್ಲಿ ಆಯಾ ರಾಜ್ಯಗಳ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯಗಳು ಈ ಕರ್ತವ್ಯವನ್ನು ನಿರ್ವಹಿಸುತ್ತವೆ. ಕೇಂದ್ರೀಯ ಸಾಂಖ್ಯಿಕ ಸಂಸ್ಥೆಯ ಜೊತೆ ಕೇಂದ್ರ ಮಟ್ಟದಲ್ಲಿ ಸಮನ್ವಯದ ಸಲುವಾಗಿ, ಸಾಂಖ್ಯಿಕ ಮಾಹಿತಿಯ ಸಂಗ್ರಹಣೆ, ವರ್ಗೀಕರಣ, ವಿಶ್ಲೇಷಣೆಯನ್ನು ಮಾಡುವ ಜವಾಬ್ದಾರಿಯನ್ನು ಕೇಂದ್ರ ಮತ್ತು ರಾಜ್ಯ ಸಾಂಖ್ಯಿಕ ಸಂಸ್ಥೆಗಳಿಗೆ, ಭಾರತ ಸಂವಿಧಾನದ 'ಕೇಂದ್ರ ಪಟ್ಟಿ', 'ರಾಜ್ಯ ಪಟ್ಟಿ' ಮತ್ತು 'ಸಮವರ್ತಿ ಪಟ್ಟಿ'ಗಳ ಅಧಿಕಾರದ ವ್ಯಾಪ್ತಿಯಲ್ಲಿ ವಿತರಣೆ ಮಾಡಲಾಗಿದೆ. ಆದ್ದರಿಂದ, ಸಾಂಖ್ಯಿಕ ವ್ಯವಸ್ಥೆಯನ್ನು ಸಂಯುಕ್ತ ವ್ಯವಸ್ಥೆ ಎಂದು ವಿವರಿಸಬಹುದಾದರೂ, ವಾಸ್ತವದಲ್ಲಿ ಅದು ಒಂದು ಏಕೀಕೃತ ವ್ಯವಸ್ಥೆಯಾಗಿ ಮಾರ್ಪಟ್ಟಿದೆ. ಏಕೆಂದರೆ ಒಂದೇ ರೀತಿಯಲ್ಲಿ ಅರ್ಥ, ವಿವರಣೆ ಮುಂತಾದುವುಗಳಿಂದ ವ್ಯವಸ್ಥಿತವಾಗಿ ವಿವಿಧ ರಾಜ್ಯ ಹಾಗೂ ಕೇಂದ್ರ ಕಾರ್ಯಕ್ರಮಗಳ ಸಾಮಾಜಿಕ ಮತ್ತು ಆರ್ಥಿಕ ವಿಷಯಗಳ ಬಗ್ಗೆ ಅಂಕಿ ಅಂಶಗಳ ಮಾಹಿತಿ ಸಂಗ್ರಹಣೆ/ವರ್ಗೀಕರಣ ಮತ್ತು ವಿಶ್ಲೇಷಣೆಯನ್ನು ಕೈಗೊಳ್ಳಲಾಗುತ್ತಿದೆ.

**1.9.** ಜುಲೈ 1979 ರಲ್ಲಿ ಭಾರತ ಸರ್ಕಾರವು ರಾಷ್ಟ್ರದ ಸಾಂಖ್ಯಿಕ ವ್ಯವಸ್ಥೆಯನ್ನು ಪರಿಶೀಲಿಸಲು ಮತ್ತು ಪ್ರಸಕ್ತ ವ್ಯವಸ್ಥೆಯ ಮಾಹಿತಿ ಮತ್ತು ಯೋಜನೆಯಲ್ಲಿನ ಅಂತರವನ್ನು ಗುರುತಿಸಲು ಹಾಗೂ ಭವಿಷ್ಯತ್ತಿನಲ್ಲಿ ಯೋಜನೆಯ ಬೆಳವಣಿಗೆಗೆ ಅವಶ್ಯವಿರುವ ಅಂಶಗಳನ್ನು ಶಿಫಾರಸ್ಸು ಮಾಡಲು ಒಂದು ಉನ್ನತಾಧಿಕಾರ ಸಮಿತಿಯನ್ನು ಸ್ಥಾಪಿಸಿತು. ಸಮಿತಿಯು ಜೂನ್ 1980 ರಲ್ಲಿ ವರದಿಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಿ, ರಾಷ್ಟ್ರೀಯ ಸಾಂಖ್ಯಿಕ ವ್ಯವಸ್ಥೆಯ ದಕ್ಷತೆ ಹಾಗೂ ಉಪಯುಕ್ತತೆಗಳನ್ನು ಉತ್ತಮಗೊಳಿಸಲು ಶಿಫಾರಸ್ಸು ಮಾಡಿತು. ವರದಿಯ ಬಹಳಷ್ಟು ಶಿಫಾರಸ್ಸುಗಳನ್ನು ಸರ್ಕಾರವು ಅನುಷ್ಠಾನಗೊಳಿಸಿತು. ರಾಷ್ಟ್ರಮಟ್ಟದಲ್ಲಿ ರಾಷ್ಟ್ರೀಯ ಸಾಂಖ್ಯಿಕ ಸಲಹಾ ಸಮಿತಿಯನ್ನು ರಚಿಸುವುದು ಒಂದು ಪ್ರಮುಖ ಶಿಫಾರಸ್ಸಾಗಿತ್ತು.

**1.10**. ರಾಷ್ಟ್ರದ ಎಲ್ಲಾ ರೀತಿಯ ಅಂಕಿ ಅಂಶಗಳ ಬೆಳವಣಿಗೆಯೊಂದಿಗೆ ಕಾರ್ಯನೀತಿ ರೂಪಿಸುವ ಸಲುವಾಗಿ ಭಾರತ ಸರ್ಕಾರವು ರಾಷ್ಟ್ರೀಯ ಸಾಂಖ್ಯಿಕ ಸಲಹಾ ಸಂಸ್ಥೆಯನ್ನು ಒಂದು ಅಪೆಕ್ಸ್ ಸಮಿತಿಯನ್ನಾಗಿ ಸ್ಥಾಪಿಸಿತು. ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಯು ಕೈಗೊಳ್ಳುವ ಸಾಮಾಜಿಕ ಆರ್ಥಿಕ ಸಮೀಕ್ಷೆಯ ಕಾರ್ಯಕ್ಕೆ ಸಲಹೆ ಹಾಗೂ ಮೇಲ್ವಿಚಾರಣಾ ಕಾರ್ಯವನ್ನು ರಾಷ್ಟ್ರೀಯ ಮಾದರಿ ಸಮಿಕ್ಷಾ ಸಂಸ್ಥೆಯ 'ಆಡಳಿತ ಮಂಡಳಿ'ಗೆ ವಹಿಸಲಾಯಿತು.

**1.11**. ಡಾ॥ ಸಿ.ರಂಗರಾಜನ್ ರವರ ನೇತೃತ್ವದಲ್ಲಿ ಜನವರಿ 2000ರಲ್ಲಿ ರಚಿಸಿದ ಆಯೋಗವು ಸಾಂಖ್ಯಿಕ ವ್ಯವಸ್ಥೆಯನ್ನು ಪರಿಶೀಲಿಸಿ, ದೇಶದ ಅಂಕಿ ಅಂಶಗಳ ವ್ಯಾಪ್ತಿಯನ್ನು ಸಹ ಪರಿಶೀಲಿಸಿತು. ಈ ಅಯೋಗದ ಶಿಫಾರಸ್ಸಿನಂತೆ ರಾಷ್ಟ್ರದ ಎಲ್ಲಾ ಬಗೆಯ ಸಾಂಖ್ಯಿಕ ಚಟುವಟಿಕೆಗಳ ವಿಸ್ತರಣೆ, ಉಸ್ತುವಾರಿ, ಆದ್ಯತೆ, ಗುಣಮಟ್ಟ ಕಾಪಾಡಲು ಮತ್ತು ಈ ಪ್ರಕ್ರಿಯೆಯಲ್ಲಿ ಭಾಗಿಯಾಗಿರುವ ಎಲ್ಲಾ ಸಂಸ್ಥೆಗಳ ಜೊತೆ ಸಮನ್ವಯ ಸಾಧಿಸುವ ಸಲುವಾಗಿ 'ರಾಷ್ಟ್ರೀಯ ಸಾಂಖ್ಯಿಕ ಆಯೋಗ'ವನ್ನು ಸ್ಥಾಪಿಸಲಾಯಿತು

**1.12**. ರಾಷ್ಟ್ರೀಯ ಸಾಂಖ್ಯಿಕ ಆಯೋಗದ ಶಿಫಾರಸ್ಸಿನ ಮೇಲೆ ರಾಷ್ಟ್ರೀಯ ಸಮಾಲೋಚನಾ ಸಭೆಯಲ್ಲಿ ಸಂಬಂಧಿಸಿದ ಭಾಗೀದಾರರ (stakeholders) ಜೊತೆ ಚರ್ಚಿಸಿ ಮಧ್ಯಮಾವಧಿ ದೃಷ್ಟಿಕೋನದಿಂದ ನಿಯಮಗಳ ರೀತಿಗಳನ್ನು ದಾಖಲಿಸಿ ರಾಷ್ಟ್ರೀಯ ಸಾಂಖ್ಯಿಕ ಪದ್ಧತಿಯನ್ನು (NSSP) ರೂಪಿಸಿ, ಇದರ ಅಭಿವೃದ್ಧಿಯು ಯಾವ ರೀತಿ ಬೆಳವಣಿಗೆ ಆಗಬೇಕೆಂದು ಸೂಚಿಸಿರುತ್ತಾರೆ. ಈ ಯೋಜನೆಯಲ್ಲಿ ಭಾಗವಹಿಸುವ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಮಾನವ ಸಂಪನ್ಮೂಲ ಸಾಮರ್ಥ್ಯ ಮತ್ತು ಉತ್ತಮ ರೀತಿಯ ಕೆಲಸ ನಿರ್ವಹಣೆ, ಸರ್ಕಾರದ ಹೆಚ್ಚಿನ ಸಾಂಖ್ಯಿಕ ವಿಷಯಗಳ ಅಂಕಿ ಅಂಶಗಳ ಸಂಯೋಜನೆ, ನಿಖರತೆ, ಕಾಲಮಿತಿಯ ವರದಿ, ಹೆಚ್ಚಾಗುವುದೆಂದು ಯೋಜಿಸಲಾಗಿದೆ. ಈ ಯೋಜನೆಯು ರಾಷ್ಟ್ರೀಯ ಸಾಮಾಜಿಕ ಆರ್ಥಿಕ ಅಂಕಿ ಅಂಶಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಮತ್ತು ಸೂಚಿಗಳನ್ನು (Indicators) ತಯಾರಿಸುವಲ್ಲಿ ಮತ್ತು 20 ಮುಖ್ಯ ಕ್ಷೇತ್ರಗಳ ಅಂಕಿ ಅಂಶಗಳನ್ನು ಅಭಿವೃದ್ಧಿಪಡಿಸುವಲ್ಲಿ, ರಾಜ್ಯ ಯೋಜನೆಗೆ ಬೇಕಾದ ಮಾಹಿತಿಯನ್ನು ಸಂಗ್ರಹಿಸುವುದರಲ್ಲಿ ಮತ್ತು ನಿಯಮ (policy) ಗಳನ್ನು ತರುವುದರಲ್ಲಿ ಮಹತ್ತರ ಪಾತ್ರವಹಿಸುತ್ತದೆ.

## 2. ಕರ್ನಾಟಕದಲ್ಲಿ ಸಾಂಖ್ಯಿಕ ವ್ಯವಸ್ಥೆ

**2.1.** ಕರ್ನಾಟಕದಲ್ಲಿ 1944ರಲ್ಲಿ ಮೈಸೂರು ಅರಸರ ಸಂಸ್ಥಾನದಿಂದ ಸಾಂಖ್ಯಿಕ ಇಲಾಖೆಯನ್ನು ಸ್ಥಾಪಿಸಿದ್ದು, ತದನಂತರ ಈಗಿರುವ ರೀತಿಯಲ್ಲಿ ಇಲಾಖೆಯು ಅಭಿವೃದ್ಧಿಯಾಗಿರುತ್ತದೆ. 1949ರಲ್ಲಿ ಅಂಕಿ ಅಂಶಗಳ ನಿರ್ದೇಶನಾಲಯವೆಂದು ರೂಪುಗೊಂಡಿದ್ದು, ಆರ್ಥಿಕ ಅಭಿವೃದ್ಧಿ ಮತ್ತು ಯೋಜನೆ ಆಯುಕ್ತರು, ಪದನಿಮಿತ್ತ ನಿರ್ದೇಶಕರಾಗಿದ್ದರು. ಆದರೆ ಸಂದರ್ಭಕ್ಕನುಸಾರ ಹಾಗೂ ಹೆಚ್ಚಿನ ಕೆಲಸದ ಒತ್ತಡದಿಂದ ಪುನ: ಯೋಜನೆ ಮತ್ತು ಸಾಂಖ್ಯಿಕ ಇಲಾಖೆಗಳೆಂದು ವಿಂಗಡಿಸಲಾಯಿತು. 1954ರಲ್ಲಿ ಸಾಂಖ್ಯಿಕ ಇಲಾಖೆಯು ಕೃಷಿ ಇಲಾಖೆಯ ಆಡಳಿತಕ್ಕೆ ಒಳಪಟ್ಟಿದ್ದು ರಾಜ್ಯ ಸಾಂಖ್ಯಿಕ ಅಧಿಕಾರಿಯನ್ನು ಪದನಿಮಿತ್ತ ನಿರ್ದೇಶಕರೆಂದು ನಿಯೋಜಿಸಲಾಗಿತ್ತು.

**2.2.** ಅಭಿವೃದ್ಧಿ ಕಾರ್ಯಕ್ರಮಗಳ ವಿಸ್ತರಣಾ ಯುಗದಲ್ಲಿ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವ ದಿಸೆಯಲ್ಲಿ ಅಂಕಿ ಅಂಶಗಳು ಅಳತೆಗೋಲು ಎಂದು ಪರಿಗಣಿಸಿ, ಕೃಷಿ, ಸಾರ್ವಜನಿಕ ಆರೋಗ್ಯ ಮತ್ತು ಸಚಿವಾಲಯದ ಆಡಳಿತ ಹಾಗೂ ಗುಪ್ತಚರ ವಿಭಾಗಗಳ ಎಲ್ಲಾ ಸಾಂಖ್ಯಿಕ ಕಾರ್ಯಗಳನ್ನು ಒಂದುಗೂಡಿಸಿ ಒಂದು ಪ್ರತ್ಯೇಕ ಇಲಾಖೆ ರಚಿಸಬೇಕೆಂದು ಮನಗಂಡ ಸರ್ಕಾರ 1955ರಲ್ಲಿ ರಾಜ್ಯ ಪುನರ್ ವಿಂಗಡಣೆಯ ದೃಷ್ಟಿಯಿಂದ ಬೀದರ್ ಮತ್ತು ಕೊಡಗು ಜಿಲ್ಲೆಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಜಿಲ್ಲೆಗಳಲ್ಲೂ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಹುದ್ದೆಯನ್ನು ಸೃಜಿಸಿ, ರಾಜ್ಯ ಸಾಂಖ್ಯಿಕ ಅಧಿಕಾರಿಯನ್ನು **'ಸಾಂಖ್ಯಿಕ ನಿರ್ದೇಶಕ'** ರೆಂದು ಮರು ನಾಮಕರಣ ಮಾಡಲಾಯಿತು ಹಾಗೂ ಬೀದರ್ ಮತ್ತು ಕೊಡಗು ಜಿಲ್ಲೆಗಳಲ್ಲಿ 1965ರಲ್ಲಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಹುದ್ದೆಯನ್ನು ಸೃಜಿಸಲಾಯಿತು.

**2.3.** ಕೆಲಸದ ಒತ್ತಡ ಮತ್ತು ವೈವಿಧ್ಯತೆ ಹೆಚ್ಚಿದಂತೆ, ಹಿರಿಯ ಅಧಿಕಾರಿಗಳಾದ ಉಪ ನಿರ್ದೇಶಕರ ಹುದ್ದೆಗಳನ್ನು 1964ರಲ್ಲಿ ಸೃಜಿಸಲಾಯಿತು. 1966ರಲ್ಲಿ ಅಂಕಿ ಅಂಶಗಳ ನಿರ್ದೇಶಕರನ್ನು ಮಹಾ ನೋಂದಣಾಧಿಕಾರಿ ಎಂದು ನಿಯೋಜನೆ ಮಾಡಲಾಯಿತು. ತದನಂತರ ಕರ್ನಾಟಕದ ಮುಖ್ಯ ನೋಂದಣಾಧಿಕಾರಿಗಳು, ಜನನ ಮತ್ತು ಮರಣ ಎಂದು ನಾಮಾಂಕಿತಗೊಳಿಸಲಾಯಿತು. ಇದರನ್ವಯ ಸಂಬಂಧಪಟ್ಟ ಕೆಲಸವನ್ನು ಆರೋಗ್ಯ ಮತ್ತು ಕುಟುಂಬ ಯೋಜನೆ ಸೇವೆಗಳು ಇಲಾಖೆಯಿಂದ ವರ್ಗಾಯಿಸಲಾಯಿತು. ಹೆಚ್ಚಿನ ಜವಾಬ್ದಾರಿ ಮತ್ತು ಮಹತ್ವವನ್ನು ಗುರುತಿಸಿ, 1968ರಲ್ಲಿ ಇಲಾಖೆಯ ಹೆಸರನ್ನು ಆರ್ಥಿಕ ಮತ್ತು ಸಾಂಖ್ಯಿಕ ಬ್ಯೂರೋ ಎಂದು ಪುನ: ಮಾರ್ಪಡಿಸಲಾಯಿತು. 1969ರಲ್ಲಿ ಬ್ಯೂರೋವನ್ನು ಮುಖ್ಯ ತಾಂತ್ರಿಕ ಇಲಾಖೆಯೆಂದು ಅಧಿಸೂಚಿಸಲಾಯಿತು. ತದನಂತರ 1970ರಲ್ಲಿ ಮತ್ತೆ ಹಿರಿಯ ಹುದ್ದೆಗಳಾದ ಜಂಟಿ ನಿರ್ದೇಶಕರ ಹುದ್ದೆಗಳನ್ನು ಸೃಜಿಸಲಾಯಿತು.

ಮೊಟ್ಟ ಮೊದಲು ಕೃಷಿಗಣತಿ ಕಾರ್ಯಕ್ರಮವನ್ನು ಇಲಾಖೆಗೆ ವಹಿಸಿ, ನಿರ್ದೇಶಕರನ್ನು ಪದನಿಮಿತ್ತ ರಾಜ್ಯ ಕೃಷಿಗಣತಿ ಆಯುಕ್ತರನ್ನಾಗಿ ನಿಯೋಜಿಸಲಾಯಿತು. ಈ ಸಂದರ್ಭದಲ್ಲಿ ಗಣಕ ಕೇಂದ್ರವನ್ನು ಪ್ರಾರಂಭಿಸಿದ್ದು, ನಂತರ ಸ್ವತಂತ್ರವಾಗಿ ಸರ್ಕಾರಿ ಗಣಕ ಕೇಂದ್ರವಾಗಿ ರೂಪುಗೊಂಡಿರುತ್ತದೆ. 1973ರಲ್ಲಿ ರಾಜ್ಯಾದಾಯ ಘಟಕ ಮತ್ತು ಆರ್ಥಿಕ ಅಧ್ಯಯನ ವಿಭಾಗಗಳನ್ನು ಪ್ರಾರಂಭಿಸಲಾಯಿತು ಹಾಗೂ 1977ರಲ್ಲಿ ಮೊಟ್ಟಮೊದಲ ಆರ್ಥಿಕ ಗಣತಿಯನ್ನು ಕೇಂದ್ರೀಯ ಸಾಂಖ್ಯಿಕ ಸಂಸ್ಥೆಯ ಜೊತೆಗೂಡಿ ಕೈಗೊಳ್ಳಲಾಯಿತು.

**2.4.** ಇಲಾಖೆಯ ಬಹಳ ಪ್ರಮುಖ ಕಾರ್ಯಗಳಾದ ಕೃಷಿಗಣತಿ, ಆರ್ಥಿಕಗಣತಿ, ಕೈಗಾರಿಕೆ ಸಿಬ್ಬಂದಿಗಳ ಸೂಚ್ಯಂಕ ಮತ್ತು ಇತರ ಪ್ರಮುಖ ಅಂಕಿ ಅಂಶಗಳ ಕಾರ್ಯಗಳ ಗಣಕ ಕೇಂದ್ರವನ್ನು

ಸ್ಥಾಪಿಸಲಾಯಿತು. ಅಂದಿನಿಂದ ವಿಸ್ತೃತ ಮಾಹಿತಿಯನ್ನು ಕ್ರೋಢೀಕರಿಸಲು 1981ರಲ್ಲಿ PCs-AT/XT, Pentiums ಅಳವಡಿಸಿ ಆಗಿಂದಾಗ್ಗೆ ಆಂತರಿಕ ಗಣಕ ಕೇಂದ್ರವನ್ನು ಬಲಪಡಿಸಲಾಗಿದೆ.

**2.5**. ವೈಜ್ಞಾನಿಕ ರೀತಿಯಲ್ಲಿ ಸಮಗ್ರ ಅಂಕಿ ಅಂಶಗಳ ಮಾಹಿತಿಯನ್ನು ತಯಾರಿಸುವ ಉದ್ದೇಶದಿಂದ 1970ರಲ್ಲಿ ಕರ್ನಾಟಕ ಸಾಂಖ್ಯಿಕ ಸೇವೆಯನ್ನು ಪ್ರಾರಂಭಿಸಲು ಸರ್ಕಾರವು ನಿರ್ಧರಿಸಿದ್ದು, ವಾಸ್ತವಿಕವಾಗಿ, ಈ ಸೇವೆಯನ್ನು 1972 ರಲ್ಲಿ ಪ್ರಾರಂಭಿಸಲಾಯಿತು. ನಂತರ, 1989ರಲ್ಲಿ ಈ ಸೇವೆಯನ್ನು ಕರ್ನಾಟಕ ಆರ್ಥಿಕ ಮತ್ತು ಸಾಂಖ್ಯಿಕ ಸೇವೆ ಎಂದು ಪುನ: ನಾಮಕರಣ ಮಾಡಲಾಯಿತು. ಈ ಕ್ರಮದಡಿಯಲ್ಲಿ, ಬೇರೆ ಇಲಾಖೆಯ ಸಾಂಖ್ಯಿಕ ವಿಷಯಕ್ಕೆ ಸಂಬಂಧಿಸಿದ ಸಾಂಖ್ಯಿಕ ನಿರೀಕ್ಷಕರು ಮತ್ತು ಮೇಲ್ಮಟ್ಟದ ಹುದ್ದೆಗಳನ್ನು ನಿರ್ದೇಶನಾಲಯದಲ್ಲಿ encadre ಮಾಡಿ, ನಂತರ ಸದರಿ ಹುದ್ದೆಗಳನ್ನು ನಿರ್ದೇಶನಾಲಯದಿಂದ ನಿಯೋಜನೆ ಮೇಲೆ ಭರ್ತಿ ಮಾಡುವಂತೆ ನಿರ್ದೇಶನ ನೀಡಲಾಯಿತು. ಪ್ರಾರಂಭಿಕ ಹಂತದಲ್ಲಿ ಅಂಕಿ ಅಂಶಗಳ ಸೇವೆಯು ಕೇವಲ ಏಳು ದೊಡ್ಡ ಇಲಾಖೆಗಳಿಗೆ ಸೀಮಿತಗೊಂಡಿದ್ದು, ನಂತರ 1977ರಲ್ಲಿ ಅದು 27 ಇಲಾಖೆಗಳಿಗೆ ವಿಸ್ತರಿಸಲಾಯಿತು. ಅಂಕಿಅಂಶ ಮಹತ್ವವನ್ನು ವಿಕಸನ ಮಾಡುವ ದಿಸೆಯಲ್ಲಿ ಬ್ಯೂರೋ ನಿರ್ವಹಿಸಬೇಕಾಗಿರುವ ಪಾತ್ರವನ್ನು ನಿರ್ಧರಿಸಿ, 1982ರಲ್ಲಿ ರಾಜ್ಯದ ಎಲ್ಲಾ ಅಂಕಿ ಅಂಶಗಳ ಚಟುವಟಿಕೆಗಳಿಗೆ 'ಸಮನ್ವಯ ಸಂಸ್ಥೆ' (ನೋಡಲ್ ಏಜನ್ಸಿ) ಎಂದು ಅಧಿಸೂಚಿಸಲಾಯಿತು. 1984ರಲ್ಲಿ ಬ್ಯೂರೋವನ್ನು ಮತ್ತೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಎಂದು ಪುನರ್ ನಾಮಕರಣ ಮಾಡಲಾಯಿತು.

**2.6**. ಸಾಂಖ್ಯಿಕ ವ್ಯವಸ್ಥೆಯಲ್ಲಿರುವ ನ್ಯೂನತೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲು ಹಾಗೂ ಇದರ ಕ್ರಮಬದ್ಧ ಸುಧಾರಣೆಗೆ ಶಿಫಾರಸ್ಸುಗಳನ್ನು ಮಾಡಲು ಭಾರತ ಸರ್ಕಾರವು 2000ರ ಇಸವಿಯಲ್ಲಿ ರಾಷ್ಟ್ರೀಯ ಸಾಂಖ್ಯಿಕ ಆಯೋಗದ ಅಧ್ಯಕ್ಷರಾಗಿ ಡಾ॥ ಸಿ.ರಂಗರಾಜನ್ ರವರನ್ನು ನೇಮಿಸಿ ರಾಜ್ಯ ಸಾಂಖ್ಯಿಕ ವ್ಯವಸ್ಥೆಯು ಭಾರತೀಯ ಸಾಂಖ್ಯಿಕ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿರುವುದರಿಂದ ರಾಷ್ಟ್ರೀಯ ಪದ್ಧತಿಯನ್ನು ಸುಧಾರಿಸಲು ರಾಜ್ಯ ಸಾಂಖ್ಯಿಕ ವ್ಯವಸ್ಥೆಯನ್ನು ಸುಧಾರಿಸುವುದು ಬಹಳ ಪ್ರಮುಖವಾಗಿರುತ್ತದೆ. ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಮಟ್ಟಗಳಲ್ಲಿ ನೀತಿ ನಿರೂಪಣೆಗಳು ಮತ್ತು ಯೋಜನೆಗಳನ್ನು ರೂಪಿಸಲು ಹಾಗೂ ಹಲವಾರು ವಿಷಯಗಳಿಗೆ ನಿರ್ಧಾರಗಳನ್ನು ಕೈಗೊಳ್ಳಲು ಅವಶ್ಯವಿರುವ, ವಿಫುಲ, ಸಮಂಜಸವಾದ, ನಂಬಲರ್ಹವಾದ ಹಾಗೂ ಕಾಲಮಿತಿಯುಳ್ಳ ಅಂಕಿ ಅಂಶಗಳನ್ನು ನೀಡುವ ಬಗ್ಗೆ ಆಯೋಗವು ಪರಿಶೀಲಿಸಿ 2001ರಲ್ಲಿ ಶಿಫಾರಸ್ಸುಗಳನ್ನೊಳಗೊಂಡ ವರದಿಯನ್ನು ಸಲ್ಲಿಸಲಾಯಿತು. ಸಾಂಖ್ಯಿಕ ವ್ಯವಸ್ಥೆಯಲ್ಲಿನ ಹಲವಾರು ನ್ಯೂನತೆಗಳು ಮತ್ತು ದತ್ತಾಂಶದಲ್ಲಿನ ವ್ಯತ್ಯಾಸಗಳ ಕುರಿತು ಆಯೋಗವು ಪಟ್ಟಿಮಾಡಿತು. ಈ ಪದ್ಧತಿಯಲ್ಲಿ ಗುರುತಿಸಲಾಗಿರುವ ನಿಷ್ಕರ್ಷಕ ನ್ಯೂನತೆಗಳು ಈ ಕೆಳಕಂಡಂತಿವೆ.

(1) ಅಗತ್ಯವಾದ ಮಾಹಿತಿಗಳ ಲಭ್ಯತೆಯಲ್ಲಿ ಕೊರತೆ.
(2) ಪ್ರಕಟಣೆ ಹೊರತರುವುದರಲ್ಲಿ ವಿಳಂಬ.
(3) ಪ್ರಕಟಣೆಯ ಮಾಹಿತಿಯನ್ನು ಆಗಾಗೆ ಪರಿಷ್ಕರಿಸುವುದು.
(4) ಪ್ರತ್ಯೇಕ ಮೂಲಗಳಿಂದ ಸಂಗ್ರಹಣೆಯಾದ ಅಧಿಕೃತ ಅಂಕಿಅಂಶಗಳಲ್ಲಿ ಹೆಚ್ಚು ವ್ಯತ್ಯಾಸವಿರುವುದು.
(5) ಅಂಕಿಅಂಶಗಳ ಪದ್ಧತಿಯಲ್ಲಿ ಪಾರದರ್ಶಕತೆ ಇಲ್ಲದೆ ಇರುವುದು.

ಮೇಲ್ಕಂಡಂತೆ ವಿಷಯಕ್ಕನುಗುಣವಾಗಿ ಸಮಿತಿಯು ವ್ಯಾಪಕವಾದ ಶಿಫಾರಸ್ಸುಗಳನ್ನು ಹಾಗೂ ಪರಿಹಾರ ಕ್ರಮಗಳನ್ನು ಸೂಚಿಸಿದೆ. ಅದುದರಿಂದ, ಪ್ರಸ್ತುತ ವಿಕೇಂದ್ರೀಕೃತ ಪದ್ಧತಿಯಲ್ಲಿ ಸಾಂಖ್ಯಿಕ ವ್ಯವಸ್ಥೆಯನ್ನು ಬಲವರ್ಧನೆ ನಿಟ್ಟಿನಲ್ಲಿ ಮಾಹಿತಿ ಸಂಗ್ರಹಣೆ ವಿಶ್ಲೇಷಣೆ ಮತ್ತು ಮಾಹಿತಿ ಪ್ರಸರಣ

ಕೈಗೊಳ್ಳಲು ಸಮಂಜಸವಾದ ಮತ್ತು ಸ್ಥಿರವಾದ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಪಡಿಸುವುದು ಉದ್ದೇಶವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸಾಂಖ್ಯಿಕ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ವಿಶ್ವ ಬ್ಯಾಂಕ್ ನೆರವಿನಿಂದ ಕೇಂದ್ರ ಪುರಸ್ಕೃತ ಯೋಜನೆಯಾದ 'ಭಾರತೀಯ ಸಾಂಖ್ಯಿಕ ಬಲವರ್ಧನೆ ಯೋಜನೆ'ಯನ್ನು ರೂಪಿಸಲಾಯಿತು. ಸದರಿ ಯೋಜನೆಯು ರಾಜ್ಯ ಮಟ್ಟದಲ್ಲಿ ಮಾಹಿತಿ ಸಂಗ್ರಹಣೆ, ಸಮಂಜಸವಾದ ಹಾಗೂ ನಿಖರವಾದ ಕಛೇರಿ ಅಂಕಿ ಅಂಶಗಳನ್ನು ಸಂಗ್ರಹಿಸಲು ಸಂಕಲನಾ ಹಾಗೂ ಪ್ರಚುರ ಪಡಿಸಲು ಅಗತ್ಯವಾದ ಸಾಮರ್ಥ್ಯವನ್ನು ಹೊಂದಲು ಈ ಯೋಜನೆಯು ಸಹಾಯಕವಾಗಿದೆ ಹಾಗೂ ಯೋಜನೆ ಹಾಗೂ ನೀತಿ ನಿರೂಪಣೆಗಳನ್ನು ರಾಜ್ಯ ಹಾಗೂ ಸ್ಥಳೀಯ ಮಟ್ಟದಲ್ಲಿ ರೂಪಿಸಲು ಮತ್ತು ರಾಷ್ಟ್ರೀಯ ಮಟ್ಟದ ಅಗತ್ಯವಿರುವ ಮಾಹಿತಿಯನ್ನು ನೀಡುವ ಎರಡು ಉದ್ದೇಶಗಳು ಈ ಯೋಜನೆಯಿಂದ ಸಾಕಾರವಾಗುತ್ತದೆ.

**2.7.** ಕರ್ನಾಟಕ ಸರ್ಕಾರವು ಭಾರತ ಸಾಂಖ್ಯಿಕ ಬಲವರ್ಧನೆ ಯೋಜನೆ (ISSSP) ಯಲ್ಲಿ ಭಾಗವಹಿಸಲು ಸಮ್ಮತಿಸಿ 20 ಪ್ರಮುಖ ಕ್ಷೇತ್ರಗಳನ್ನು ಸುಧಾರಿಸಲು ಗುರುತಿಸಿ ರಾಜ್ಯ ಸಾಂಖ್ಯಿಕ ಕಾರ್ಯ ಯೋಜನೆಯನ್ನು (KSSSP) ರೂಪಿಸಲಾಯಿತು. ಪೂರ್ಣ ಪ್ರಮಾಣವಾಗಿ ರಾಜ್ಯ ಸಾಂಖ್ಯಿಕ ವ್ಯವಸ್ಥೆಯಲ್ಲಿ ಬಲ ಹಾಗೂ ದುರ್ಬಲತೆಯನ್ನು ಗುರುತಿಸಿ 20 ಪ್ರಮುಖ ಸಾಂಖ್ಯಿಕ ಚಟುವಟಿಕೆಗಳನ್ನು ಸಮರ್ಪಕ ಪೂರ್ಣ ಪ್ರಮಾಣದಲ್ಲಿ ಕ್ರಮಬದ್ಧವಾಗಿ ನೀಡುವ ಸಾಧ್ಯತೆಯ ಬಗ್ಗೆ ಪರಿಶೀಲಸಿ ಈ ಕಾರ್ಯ ತಾಂತ್ರಿಕ (KSSSP) ಯೋಜನೆಯನ್ನು ಜಾರಿಗೊಳಿಸಲಾಯಿತು. ರಾಜ್ಯ ಸಾಂಖ್ಯಿಕ ಯೋಜನೆಯ ಪ್ರಮುಖ ಉದ್ದೇಶಗಳು ಈ ಕೆಳಕಂಡಂತಿವೆ.

1) ಪರಿಣಾಮಕಾರಿಯಾಗಿ ಯೋಜನೆಗಳಗೆ ಮೇಲ್ವಿಚಾರಣೆ ನಡೆಸಲು ಮತ್ತು ಮೌಲ್ಯ ಮಾಪನ ಮಾಡುವುದಕ್ಕಾಗಿ ಸಾಂಖ್ಯಿಕ ಬಲವರ್ಧನೆಯನ್ನು ಕೈಗೊಳ್ಳುವುದು.
2) ಸಾಮರ್ಥ್ಯವುಳ್ಳ ಸರಿಯಾದ ಮಾನವ ಸಂಪನ್ಮೂಲವನ್ನು ಸೂಕ್ತ ಸ್ಥಳದಲ್ಲಿ ನೇಮಿಸುವುದು.
3) ಮಾಹಿತಿ ತಂತ್ರಜ್ಞಾನ ಸೇವೆಯನ್ನು ಒದಗಿಸುವುದು, ಸಂಶೋಧನೆ, ತರಬೇತಿ ಮತ್ತು ಇತರೆ ಆಧಾರಿತ ಸೇವೆಗಳ ಸಾಮರ್ಥ್ಯವನ್ನು ಹೆಚ್ಚಿಸುವುದು.
4) ತಂತ್ರಜ್ಞಾನವಿರುವ ಮಾಹಿತಿಗಳನ್ನು ಕಲೆಹಾಕುವುದು, ತಾಳೆ ನೋಡುವುದು, ಪರಿಶೀಲಿಸುವುದು, ಸಂಗ್ರಹಣೆ, ಪ್ರಕಟಣೆ ಮತ್ತು ವಿತರಣೆ ಮಾಡುವುದು.
5) ಸುಸಂಬದ್ಧವಿರುವ ನಿಯಮಗಳು ಮತ್ತು ಗರಿಷ್ಠ ಗುಣಮಟ್ಟವಿರುವ ಅಂಕಿಅಂಶಗಳ ಸಂಗ್ರಹಣೆ, ಬಳಕೆ, ಪ್ರಕಟಣೆ ಮತ್ತು ವಿತರಣೆ.
6) ನಿಖರವಾದ ಸಕಾಲಿಕ ವಿಶ್ವಾಸಾರ್ಹ ಮತ್ತು ನಂಬಲರ್ಹ ಅಂಕಿಅಂಶಗಳನ್ನು ಅಭಿವೃದ್ಧಿ ಪಡಿಸುವುದು.
7) ಇತರೆ ಸಂಬಂಧಿಸಿದ ಮಾಹಿತಿಗಳ ಇಲಾಖೆಯ ಸ್ಪಷ್ಟೀಕರಣ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಜೊತೆ ತಯಾರಿಸಿ ಹೊಂದಾಣಿಕೆ ಮತ್ತು ಸ್ಪಷ್ಟೀಕರಿಸುವುದು.

**2.8.** ಯೋಜನೆಯ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರವು ಅನುಮೋದಿಸಿದೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಅಧಿಕಾರಯುಕ್ತ ಉನ್ನತಮಟ್ಟದ ಚಾಲನಾ ಸಮಿತಿಯನ್ನು ರಚಿಸಲಾಗಿದೆ. ಕರ್ನಾಟಕ ರಾಜ್ಯ ಸಾಂಖ್ಯಿಕ ಅಭಿವೃದ್ಧಿ ಸಂಸ್ಥೆಯನ್ನು ಸಾಂಖ್ಯಿಕ ವಿಷಯಗಳ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೇಮಕಮಾಡಿದೆ. ಸಂಘಗಳ ನೋಂದಣಿ ಅಧಿನಿಯಮ 1960ರ ಅಡಿಯಲ್ಲಿ ಕರ್ನಾಟಕ ಸಾಂಖ್ಯಿಕ ಅಭಿವೃದ್ಧಿ ಏಜೆನ್ಸಿ ನೊಂದಣಿಯಾಗಿದೆ.

**2.9.** "ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆ"ಯನ್ನು ಕೃಷಿ ಇಲಾಖೆಯು 2016–17ನೇ ಸಾಲಿನಿಂದ ಅಧಿಸೂಚನೆ ಹೊರಡಿಸಿ ಅನುಷ್ಠಾನಗೊಳಿಸಿದೆ. ಈ

ಯೋಜನೆಯ ಮುಖ್ಯ ಉದ್ದೇಶವು ಬೆಳೆ ಕಟಾವು ಪ್ರಯೋಗಗಳ ಗುಣಮಟ್ಟ ಹಾಗೂ ಇಳುವರಿ ದತ್ತಾಂಶದ ನಿಖರತೆಯನ್ನು ಸುಧಾರಿಸಲು ಮತ್ತು ವಿಶ್ವಾಸನೀಯತೆಯನ್ನು ಮೊಬೈಲ್ ಆಪ್ ತಂತ್ರಾಂಶದ ಮೂಲಕ ಮಾಹಿತಿಯನ್ನು ನಿಖರವಾಗಿ ಅಂದಾಜಿಸಬಹುದು.

ಈ ಸಂಬಂಧ ಕರ್ನಾಟಕ ಸರ್ಕಾರವು ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಳ್ಳಲು ಮೊಬೈಲ್ ಆಪ್ ತಂತ್ರಾಂಶವನ್ನು ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಮತ್ತು NIC ಸಹಯೋಗದೊಂದಿಗೆ ಅಭಿವೃದ್ಧಿ ಪಡಿಸಿದೆ. ಬೆಳೆ ಕಟಾವು ಪ್ರಯೋಗಗಳ ವಿಧಿವಿಧಾನವನ್ನು ಅನುಸರಿಸಿ, ಬೆಳೆವಾರು ಇಳುವರಿಯ ಮಾಹಿತಿಯನ್ನು ಮೊಬೈಲ್ ಆ್ಯಪ್‌ನ ಮುಖಾಂತರ ಅಪ್‌ಲೋಡ್ ಮಾಡಲಾಗುತ್ತಿದೆ.

# ಅಧ್ಯಾಯ – 1

## ದೂರದೃಷ್ಟಿ, ನಿರ್ದಿಷ್ಟಪಡಿಸಿದ ಗುರಿ, ಉದ್ದೇಶ ಮತ್ತು ಇಲಾಖೆಯ ಕಾರ್ಯವ್ಯವಸ್ಥೆ

**ದೂರದೃಷ್ಟಿ:**

ಮಾಹಿತಿ ಸಂಗ್ರಹಣೆ, ವಿಶ್ಲೇಷಣೆ ಹಾಗೂ ಪ್ರಸಾರದ ಸಮಂಜಸ ಹಾಗೂ ಸುಬದ್ಧತೆಯ ಪದ್ಧತಿಯನ್ನು ಅಭಿವೃದ್ಧಿಪಡಿಸುವುದು ಮತ್ತು ರಾಷ್ಟ್ರೀಯ ಮಟ್ಟದಿಂದ ಹಿಡಿದು ಉಪ ಜಿಲ್ಲಾ ಮಟ್ಟದವರೆವಿಗಿನ ಎಲ್ಲಾ ದಂತ್ತಾಂಶಗಳನ್ನು ಅವಶ್ಯಕತೆಗಳಿಗನುಗುಣವಾಗಿ ಹಾಗೂ ಸದರಿ ದಂತ್ತಾಂಶವು ಎಲ್ಲಾ ಕಾಲಾವಧಿಗಳಿಗೆ ಹೊಲಿಕೆಯಾಗುವುದನ್ನು ದೃಢಪಡಿಸಿಕೊಳ್ಳುವುದು.

**ನಿರ್ದಿಷ್ಟಪಡಿಸಿದ ಗುರಿ:**

ರಾಜ್ಯದ ಸಾಂಖ್ಯಿಕ ವ್ಯವಸ್ಥೆಯನ್ನು ಅಭಿವೃದ್ಧಿ, ನಿಯಂತ್ರಣ ಮತ್ತು ಸರ್ಕಾರದ ಸೇವಾ ಪ್ರಕಾರ್ಯಗಳಲ್ಲಿ ಸಾಧನವಾಗುವಂತೆ ಮಾಡುವುದು. ತನ್ಮೂಲಕ ರಾಜ್ಯದ ಒಳಗೂ ಹಾಗೂ ಹೊರಗೂ ಉಪಯೋಗಿಸುವ ಅಂಕಿ ಅಂಶಗಳಲ್ಲಿ ವಿಶ್ವಾಸಾರ್ಹತೆ, ಸಮಗ್ರತೆ ಮತ್ತು ಪರಿಪೂರ್ಣತೆಯನ್ನು ಹೆಚ್ಚಿಸುವುದು ಮತ್ತು ನಿಗದಿತ ಸಮಯದೊಳಗೆ ಒದಗಿಸುವ ಕ್ರಮಕೈಗೊಳ್ಳುವುದು.

**ಉದ್ದೇಶ:**

ಸರ್ಕಾರದ ಒಳಗೂ ಹಾಗೂ ಹೊರಗೂ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುವ, ಸಂಶೋಧನೆಯನ್ನು ಪ್ರೇರೇಪಿಸುವ ಹಾಗೂ ಜನಜೀವನಕ್ಕೆ ಸಂಬಂಧಿಸಿದ ಸ್ಥಿತಿಗತಿಗಳ ಕುರಿತು ಚರ್ಚೆಯನ್ನು ಪ್ರಚೋದಿಸುವ ವಿಶ್ವಾಸಾರ್ಹ, ನಂಬಲರ್ಹ ಹಾಗೂ ಕಾಲಮಿತಿಯ ಸಾಮಾಜಿಕ ಮತ್ತು ಆರ್ಥಿಕ ಅಂಕಿ ಅಂಶಗಳನ್ನು ವ್ಯವಸ್ಥಿತವಾಗಿ ಒದಗಿಸುವುದು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಉದ್ದೇಶವಾಗಿದೆ.

**ಇಲಾಖೆಯ ಕಾರ್ಯವ್ಯವಸ್ಥೆ**

ಕರ್ನಾಟಕದಲ್ಲಿ ಸಾಂಖ್ಯಿಕ ವ್ಯವಸ್ಥೆಯು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು ಸರ್ಕಾರದ ವಿವಿಧ ಇಲಾಖೆಗಳ ಸಾಂಖ್ಯಿಕ ವಿಭಾಗಗಳನ್ನೊಳಗೊಂಡಿರುತ್ತದೆ. ನಿರ್ದೇಶನಾಲಯದ ಕೇಂದ್ರ ಕಛೇರಿಯು ಬೆಂಗಳೂರಿನಲ್ಲಿದ್ದು, ನಿರ್ದೇಶಕರು ಇಲಾಖಾ ಮುಖ್ಯಸ್ಥರಾಗಿರುತ್ತಾರೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಸರ್ಕಾರದ ಆದೇಶ ಸಂಖ್ಯೆ:ಪಿಡಿ/133/ಎಸ್‌ಎಂಸಿ/2013 ಬೆಂಗಳೂರು. ದಿನಾಂಕ 25–9–2013 ರಲ್ಲಿ ರಾಜ್ಯದಲ್ಲಿ ಜನನ ಮರಣ ನೋಂದಣಿಗೆ ಸಂಬಂಧಿಸಿದಂತೆ ಪೂರ್ಣಾವಧಿ ಮುಖ್ಯ ನೋಂದಣಾಧಿಕಾರಿಗಳನ್ನು ನೇಮಕ ಮಾಡುವ ಸಲುವಾಗಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿ ಮುಖ್ಯ ನೋಂದಣಾಧಿಕಾರಿಗಳ ಹುದ್ದೆಯನ್ನು ಸೃಜಿಸಿ ಆದೇಶಿಸಲಾಗಿದೆ.

ಆಡಳಿತಾತ್ಮಕ ಅನುಕೂಲಕ್ಕಾಗಿ ನಿರ್ದೇಶನಾಲಯದ ಕಾರ್ಯನಿರ್ವಹಿಸಲು ಅಪರ ನಿರ್ದೇಶಕರು, ಜನನ–ಮರಣಗಳ ಮುಖ್ಯ ನೋಂದಣಾಧಿಕಾರಿಗಳ ನೇತೃತ್ವದಲ್ಲಿ 1 ವಿಭಾಗವು ಕಾರ್ಯನಿರ್ವಹಿಸುತ್ತಿದ್ದು, ಜಂಟಿ ನಿರ್ದೇಶಕರ ನೇತೃತ್ವದಲ್ಲಿ 5 ತಾಂತ್ರಿಕ ವಿಭಾಗಗಳಿದ್ದು, ಹೆಚ್ಚುವರಿಯಾಗಿ ಆಡಳಿತ ಮತ್ತು ಲೆಕ್ಕ ಶಾಖೆಯಲ್ಲಿ ಪ್ರತ್ಯೇಕ ವಿಭಾಗವಿರುತ್ತದೆ. ಈ ವಿಭಾಗವನ್ನು ಜಂಟಿ ನಿರ್ದೇಶಕರು(ಆಡಳಿತಾಧಿಕಾರಿಗಳು) ಕಾರ್ಯನಿರ್ವಹಿಸುತ್ತಿರುತ್ತಾರೆ.

**ತಾಂತ್ರಿಕ ವಿಭಾಗಗಳು :**

1. ಕೃಷಿ ಅಂಕಿ ಅಂಶಗಳ ವಿಭಾಗ (ಎಜಿಎಸ್)
2. ಬೆಳೆ ವಿಮಾ ವಿಭಾಗ (ಸಿಐಎಸ್)
3. ಕೃಷಿ ಗಣತಿ, ಮಳೆ ಮತ್ತು ಗಣಕ ವಿಭಾಗ (ಎಆರ್‌ಸಿ)
4. ನಾಗರೀಕ ನೋಂದಣಿ, ರಾಷ್ಟ್ರೀಯ ಮಾದರಿ ಸಮೀಕ್ಷೆ ಮತ್ತು ಸ್ಥಳೀಯ ಸಂಸ್ಥೆಗಳ ಅಂಕಿ ಅಂಶಗಳು ವಿಭಾಗ (ಸಿಎನ್‌ಎಲ್)
5. ರಾಜ್ಯಾದಾಯ, ಕೈಗಾರಿಕೆ ಮತ್ತು ಬೆಲೆಗಳು ವಿಭಾಗ (ಎಸ್‌ಐಪಿ)
6. ಪ್ರಕಟಣೆ, ತರಬೇತಿ ಮತ್ತು ಸಮನ್ವಯ ವಿಭಾಗ (ಪಿಟಿಸಿ)

ಪ್ರತಿಯೊಂದು ವಿಭಾಗದ ಮುಖ್ಯಸ್ಥರು ಜಂಟಿ ನಿರ್ದೇಶಕರಾಗಿದ್ದು, ವಿಭಾಗವನ್ನು ವಿವಿಧ ಶಾಖೆಗಳಾಗಿ ವಿಂಗಡಿಸಲಾಗಿದೆ. ಸಾಮಾನ್ಯವಾಗಿ 2 ಅಥವಾ 3 ಶಾಖೆಗಳಿಗೆ ಒಬ್ಬ ಉಪ ನಿರ್ದೇಶಕರು ಅಥವಾ ಸಹಾಯಕ ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ. ಒಟ್ಟು 22 ತಾಂತ್ರಿಕ ಶಾಖೆಗಳಿರುತ್ತವೆ. ವಿಭಾಗದ ಕೆಲಸಗಳಿಗನುಗುಣವಾಗಿ ತಾಂತ್ರಿಕ ವಿಭಾಗಗಳಲ್ಲಿ ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು/ಸಹಾಯಕ ಸಾಂಖ್ಯಿಕ ಅಧಿಕಾರಿ/ಸಾಂಖ್ಯಿಕ ನಿರೀಕ್ಷಕರು/ಗಣತಿದಾರರು ನೆರವಾಗುತ್ತಾರೆ. ಆಡಳಿತ ಮತ್ತು ಲೆಕ್ಕ ವಿಭಾಗದ ಆಡಳಿತಾಧಿಕಾರಿಗಳಿಗೆ, ಪತ್ರಾಂಕಿತ ವ್ಯವಸ್ಥಾಪಕರು, ಅಧೀಕ್ಷಕರು, ಮೊದಲನೆಯ ದರ್ಜೆಯ ಸಹಾಯಕರು ಮತ್ತು ಎರಡನೇ ದರ್ಜೆಯ ಸಹಾಯಕರು ನೆರವಾಗುತ್ತಾರೆ.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯಿದ್ದು, ಉಪ ನಿರ್ದೇಶಕರ ಹುದ್ದೆಯಲ್ಲಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು (ಜಿಸಂಸಂ) ತಾಂತ್ರಿಕ ಕೆಲಸಗಳಿಗೆ ಜಿಲ್ಲಾ ಕೇಂದ್ರ ಕಛೇರಿಯಲ್ಲಿ, ಸಹಾಯಕ ನಿರ್ದೇಶಕರು, ಸಹಾಯಕ ಸಾಂಖ್ಯಿಕ ಅಧಿಕಾರಿಗಳು, ಸಾಂಖ್ಯಿಕ ನಿರೀಕ್ಷಕರು ಮತ್ತು ಒಬ್ಬ ಗಣತಿದಾರರು ನೆರವಾಗುತ್ತಾರೆ. ಜಿಲ್ಲೆಯ ಗಾತ್ರಕ್ಕೆ ಅನುಗುಣವಾಗಿ ಪ್ರತಿ ಜಿಲ್ಲೆಯ ಸಿಬ್ಬಂದಿಯ ಸಂಖ್ಯೆಯು ವ್ಯತ್ಯಾಸವಾಗುತ್ತದೆ. ದಿನನಿತ್ಯದ ಆಡಳಿತದ ಕೆಲಸಗಳಿಗೆ ಲಿಪಿಕ ವರ್ಗದ ಸಿಬ್ಬಂದಿಯವರು ನೆರವಾಗುತ್ತಾರೆ. ತಾಲ್ಲೂಕು ಮಟ್ಟದಲ್ಲಿ ಒಬ ಸಾಂಖ್ಯಿಕ ನಿರೀಕ್ಷಕರು ಮತ್ತು ಒಬ್ಬ ಗಣತಿದಾರರನ್ನು ತಾಲ್ಲೂಕು ಅಂಕಿ ಅಂಶ ಕಾರ್ಯವನ್ನು ನಿರ್ವಹಿಸಲು ನಿಯೋಜಿಸಲಾಗಿದ್ದು, ಜಿ.ಸಂ.ಸಂ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತಾರೆ ಹಾಗೂ ದಿನನಿತ್ಯದ ಕಾರ್ಯಗಳಿಗೆ ತಹಶೀಲ್ದಾರರ ಅಧೀನದಲ್ಲಿರುತ್ತಾರೆ.

ಇತರೆ ಇಲಾಖೆಗಳಲ್ಲಿ ಅಂಕಿಅಂಶಗಳ ವಿಭಾಗವಿದ್ದು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಧಿಕಾರಿಗಳು ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಆಯಾಯಾ ಇಲಾಖೆಯ ಸಾಂಖ್ಯಿಕ ಮಾಹಿತಿಯ ಅವಶ್ಯಕತೆಗೆ ತಕ್ಕಂತೆ ಅಂಕಿಅಂಶಗಳ ಉಸ್ತುವಾರಿಯನ್ನು ನಿರ್ವಹಿಸುತ್ತಾರೆ.

**ಇಲಾಖೆಯ ಕಾರ್ಯ ಮತ್ತು ಚಟುವಟಿಕೆಗಳು**

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ರಾಜ್ಯ ಸರ್ಕಾರವು ಕಾರ್ಯಕ್ರಮಗಳನ್ನು ರೂಪಿಸಲು ಮತ್ತು ಕಾರ್ಯ ರೀತಿಯನ್ನು ಜಾರಿಗೊಳಿಸಲು ಅಗತ್ಯವಾದ ಮಾಹಿತಿಯನ್ನು ನೀಡುವ ಜವಾಬ್ದಾರಿ ಸಂಸ್ಥೆಯಾಗಿರುತ್ತದೆ. ವಿವಿಧ ಸಾಮಾಜಿಕ–ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಅಂಕಿ ಅಂಶಗಳ ಮಾಹಿತಿಯನ್ನು ಕಾಲಕಾಲಕ್ಕೆ ಸಂಗ್ರಹಿಸಿ, ವರ್ಗೀಕರಿಸಿ, ವಿಶ್ಲೇಷಣೆ ಮತ್ತು ಪ್ರಕಟಣೆ ಮಾಡಲಾಗುತ್ತಿದೆ.

ಆದರೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಹಲವು ಮಾಹಿತಿಯನ್ನು ನೇರವಾಗಿ ತನ್ನ ಅಧೀನದಲ್ಲಿರುವ ಕಛೇರಿಗಳಿಂದ ಹಾಗೂ ಬಹುಪಾಲು ಅಂಕಿ ಅಂಶಗಳ ಮಾಹಿತಿಯನ್ನು ಇತರೆ ಇಲಾಖೆಗಳಿಂದ ಸಂಗ್ರಹಿಸುತ್ತದೆ. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಮುಖ್ಯ ಕಾರ್ಯಕ್ರಮಗಳು ಈ ಕೆಳಕಂಡಂತಿವೆ.

1. ವ್ಯವಸ್ಥಿತ ರೀತಿಯಲ್ಲಿ ರಾಜ್ಯ ಹಾಗೂ ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳ ವಿವಿಧ ಸಾಮಾಜಿಕ ಆರ್ಥಿಕ ವಿಷಯಗಳ ಬಗ್ಗೆ ಅಂಕಿ ಅಂಶ ಸಂಗ್ರಹಣೆ, ವರ್ಗೀಕರಣ, ಕೋಷ್ಠಕೀಕರಣ ಮತ್ತು ವಿಶ್ಲೇಷಣೆ ಹಾಗೂ ಮಂಡನೆ ಮತ್ತು ನಿಯಮಿತವಾಗಿ ಪ್ರಕಟಣೆಗಳ ಮೂಲಕ ಮಾಹಿತಿ ಪ್ರಸಾರ.
2. ಸಾಮಾಜಿಕ ಆರ್ಥಿಕ ಅಭಿವೃದ್ಧಿಯ ವಿವಿಧ ಅಂಶಗಳ ಕುರಿತು ಮಾದರಿ ಸಮೀಕ್ಷೆಗಳು ಹಾಗೂ ಇತರೆ ಮಧ್ಯಂತರ ಕ್ಷೇತ್ರ ವಿಚಾರಣೆಗಳು ಮುಂತಾದವುಗಳನ್ನು ನಡೆಸುವುದು.
3. ಅಂಕಿ ಅಂಶಗಳ ಚಟುವಟಿಕೆಗಳ ಬಗ್ಗೆ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಜೊತೆ ಸಮನ್ವಯ ಹಾಗೂ ತಾಂತ್ರಿಕ ನೆರವು ನೀಡಲಾಗುತ್ತದೆ.
4. ಭಾರತ ಸರ್ಕಾರ ಹಾಗೂ ಇತರೆ ರಾಜ್ಯ ಸರ್ಕಾರಗಳ ಸಾಂಖ್ಯಿಕ ಸಂಸ್ಥೆಗಳ ಜೊತೆ ಸಂಪರ್ಕವಿಟ್ಟುಕೊಳ್ಳುವುದು. ಜೊತೆಗೆ ಸಾಮಾಜಿಕ–ಆರ್ಥಿಕ ವಲಯಕ್ಕೆ ಸಂಬಂಧಿಸಿದ ಸಾಂಖ್ಯಿಕ ಮಾಹಿತಿಯನ್ನು ನೇರವಾಗಿ ಇತರೆ ಇಲಾಖೆಗಳಿಂದ ನಿಯಮಿತವಾಗಿ ಸಂಗ್ರಹಿಸುವುದು ಮತ್ತು ಸಜ್ಜುಗೊಳಿಸುವುದು.
5. ಸಾಂಖ್ಯಿಕ ಸಿಬ್ಬಂದಿಗಳಿಗೆ ತರಬೇತಿ ನೀಡುವುದು.

**ನೋಡಲ್ ಏಜೆನ್ಸಿ**

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವನ್ನು ರಾಜ್ಯದ ಎಲ್ಲಾ ಸಾಂಖ್ಯಿಕ ವಿಷಯಗಳಿಗೆ ಸಂಬಂಧಿಸಿದಂತೆ, "ನೋಡಲ್ ಏಜೆನ್ಸಿ" ಯನ್ನಾಗಿ ಸರ್ಕಾರಿ ಆದೇಶ ಸಂಖ್ಯೆ ಪಿಡಿ 183 ಎಸ್‌ಎಂಸಿ 2010, ದಿನಾಂಕ 25–01–2011 ರಲ್ಲಿ ನೇಮಿಸಲಾಗಿದೆ.

ನೋಡಲ್ ಏಜೆನ್ಸಿಯಾಗಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಪ್ರಮುಖ ಚಟುವಟಿಕೆಗಳು ಈ ಕೆಳಕಂಡಂತಿವೆ.

- ಇಲಾಖೆಗಳ ಅವಶ್ಯಕತೆಗನುಗುಣವಾಗಿ ಅಂಕಿ–ಅಂಶಗಳ ಸಂಗ್ರಹಣೆಗೆ ಒತ್ತು ನೀಡುವುದು.
- ಕಾರ್ಯವಿಧಾನವನ್ನು ನಮೂನೆಗಳನ್ನು ಅವಧಿಯನ್ನು, ವೇಳಾಪಟ್ಟಿಯನ್ನು, ವಿವಿಧ ಹಂತಗಳ ಹಾಗೂ ಮಾದರಿಯ ತಃಖ್ತೀಕರಣ, ಅಂತಿಮ ವರದಿ/ಪ್ರಕಟಣೆ, ಇತ್ಯಾದಿ ವಿಷಯ ವಸ್ತುಗಳನ್ನು ನಿಗದಿಪಡಿಸುವುದು.
- ಇಲಾಖೆಗಳು ತಾವು ಸಂಗ್ರಹಿಸಿದ ಅಂಕಿ–ಅಂಶಗಳ ವಿಶ್ಲೇಷಣೆಯನ್ನು ಕೈಗೊಳ್ಳುವಂತೆ ಕಡ್ಡಾಯಗೊಳಿಸುವುದು.
- ಈ ವಾರ್ಷಿಕ ಆಡಳಿತ ವರದಿಗಳು ಅಂಕಿ–ಅಂಶಗಳ ವಿಶ್ಲೇಷಣೆಯನ್ನು ಹೊಂದಿರುವಂತೆ ಖಾತ್ರಿಪಡಿಸುವುದು.
- ತಾಂತ್ರಿಕ ಮತ್ತು ಅಂಕಗಣಿತದ ತಪ್ಪುಗಳಿಂದ ಹಾಗೂ ಸರಿಯಿಲ್ಲದಿರುವಿಕೆಯಿಂದ ಮತ್ತು ಅಸಂಬದ್ಧತೆಯಿಂದ ಮುಕ್ತವಾದ ಒಂದೇ ತೆರನಾದ ಅಂಕಿ–ಅಂಶಗಳನ್ನು ಎಲ್ಲ ಮಟ್ಟಗಳಲ್ಲಿ ನಿರ್ವಹಿಸಲು ಇಲಾಖೆಗಳಿಗೆ ಸಲಹೆ ನೀಡುವುದು.
- ಇಲಾಖೆಗಳ ನಡುವಣ ಒಂದೇ ತೆರನಾದ ಅಂಕಿ–ಅಂಶಗಳ ಸಂಗ್ರಹಣೆಯ ಪುನರಾವರ್ತನೆ ಕಾರ್ಯವನ್ನು ಕಡಿಮೆಗೊಳಿಸುವ/ತೊಡೆದುಹಾಕುವ ಕ್ರಮವನ್ನು ಖಾತ್ರಿಪಡಿಸಬೇಕು.
- ಅಂಕಿ–ಅಂಶಗಳ ಅಧಿನಿಯಮ 2008 ಹಾಗೂ ನಿಯಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು.

# ಅಧ್ಯಾಯ – 2

## ನಿರ್ದೇಶನಾಲಯದ ಸಾಧನೆಯ ವಿವರಣೆ

I. 2018–19ನೇ ಸಾಲಿನಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು 11 ಕಾರ್ಯಕ್ರಮಗಳಲ್ಲಿ 8 ರಾಜ್ಯವಲಯ ಕಾರ್ಯಕ್ರಮಗಳು, 3 ಕೇಂದ್ರವಲಯ/ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳು ಜಾರಿಯಲ್ಲಿರುತ್ತವೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಇಲಾಖೆಯ ವಿಭಾಗಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. 2018–19ನೇ ಸಾಲಿನಲ್ಲಿ ಇಲಾಖೆಯು ಸಾಧಿಸಿದ ಪ್ರಗತಿಯನ್ನು ವಿಭಾಗವಾರು ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

**ಕೃಷಿ ಗಣತಿ, ಮಳೆ ಮತ್ತು ಗಣಕ ವಿಭಾಗ:**

(ಅ) **ರಾಜ್ಯವಲಯದ ಅಭಿವೃದ್ಧಿ ಕಾರ್ಯಕ್ರಮಗಳ ಆಯ್ದ ಯೋಜನೆಗಳ ಮಾದರಿ ಸಮೀಕ್ಷೆ**

**(ಆ) ಲೆಕ್ಕ ಶೀರ್ಷಿಕೆ:– 3454–02–205–0–17(059).**

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಅಭಿವೃದ್ಧಿ ಕಾರ್ಯಕ್ರಮಗಳ ಆಯ್ದ ಯೋಜನೆಗಳ ಕುರಿತು ಮಾದರಿ ಸಮೀಕ್ಷೆಯನ್ನು 1992–93 ರಿಂದ ನಿರ್ವಹಿಸುತ್ತಿದೆ. ಆದರೆ 2007–08ನೇ ಸಾಲಿನಿಂದ ಆಯವ್ಯಯದಲ್ಲಿ ಈ ಯೋಜನೆಗಳಿಗೆ ಲೆಕ್ಕ ಶೀರ್ಷಿಕೆ ಆರಂಭವಾಗಿರುತ್ತದೆ. 4 ಅಥವಾ 5 ಅಭಿವೃದ್ಧಿ ಕಾರ್ಯಕ್ರಮಗಳು ಅನುಷ್ಠಾನದಲ್ಲಿ ಆಗುವ ನ್ಯೂನತೆ, ಯೋಜನೆಗಳಿಂದ ಫಲಾನುಭವಿಗಳಿಗಾದ ಉಪಯೋಗ ಲೋಪದೋಷಗಳನ್ನು ಸರಿಪಡಿಸುವ ಬಗ್ಗೆ ಸೂಚನೆಗಳನ್ನೊಳಗೊಂಡು ಆಯ್ಕೆ ಮಾಡಲಾದ ಫಲಾನುಭವಿಗಳು ಸೂಕ್ತವೆ, ಎಂಬುದನ್ನು ಕುರಿತು ಸರ್ಕಾರಕ್ಕೆ /ಸಂಬಂಧಿಸಿದ ಇಲಾಖೆಗೆ ತಿಳಿಸುವುದೇ ಇದರ ಮುಖ್ಯ ಉದ್ದೇಶವಾಗಿರುತ್ತದೆ. 2018–19ನೇ ಸಾಲಿಗೆ ರೂ 10.00 ಲಕ್ಷಗಳನ್ನು ಈ ಯೋಜನೆಗೆ ನಿಗದಿಪಡಿಸಲಾಗಿದೆ. ಹಣಕಾಸು ವಿವರಣೆಯನ್ನು ಈ ಕೆಳಗೆ ನೀಡಲಾಗಿದೆ.

| **2016-17 ಲೆಕ್ಕ** | | **2017-18 ಪರಿಷ್ಕೃತ ಅಂದಾಜು** | | **2018-19 ಆಯವ್ಯಯ ಅಂದಾಜು *** | |
|---|---|---|---|---|---|
| **ಅಂದಾಜು** | **ವೆಚ್ಚ** | **ಅಂದಾಜು** | **ವೆಚ್ಚ** | **ಅಂದಾಜು** | **ವೆಚ್ಚ** |
| (1) | (2) | (3) | (4) | (5) | (6) |
| 20.00 | 17.93 | 20.00 | 19.99 | 10.00 | 10.00 |

**ರೂ.10.00 ಲಕ್ಷಗಳನ್ನು ಕೆಎಸ್‌ಎಸ್‌ಡಿಪಿ ಯೋಜನೆಯಡಿ ಹೆಚ್ಚುವರಿಯಾಗಿ ಒದಗಿಸಲಾಗಿರುತ್ತದೆ.**

2018–19ನೇ ಸಾಲಿನಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಇತರೆ ಕಾರ್ಯಕ್ರಮಗಳ ಮಾದರಿ ಸಮೀಕ್ಷೆಗಾಗಿ ರೂ.10.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು, ಪೂರ್ತಿ ಅನುದಾನ ವೆಚ್ಚವಾಗಿರುತ್ತದೆ.

18ನೇ ಸುತ್ತಿನ ಮಾದರಿ ಸಮೀಕ್ಷೆಯಡಿ ಈ ಕಾರ್ಯಕ್ರಮದಲ್ಲಿ 4 ಯೋಜನೆಗಳ ಮಾದರಿ ಸಮೀಕ್ಷೆಯನ್ನು ಪೂರ್ಣಗೊಳಿಸಲಾಗಿದೆ. ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

- 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್ ವಿತರಣೆ
- ಪಶುಭಾಗ್ಯ ಯೋಜನೆ
- ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ
- ವಿಕಲಚೇತನರ ಮಾಸಾಶನ

ಈ ಮೇಲ್ಕಂಡ 4 ಯೋಜನೆಗಳ ಮಾದರಿ ಸಮೀಕ್ಷೆಯ ಅಧ್ಯಯನವನ್ನು ಪೂರ್ಣಗೊಳಿಸಿ, ವರದಿಯನ್ನು ತಯಾರಿಸಿ ಸಂಬಂಧಪಟ್ಟ ಇಲಾಖೆಗಳಿಗೆ ಸೂಕ್ತ ಕ್ರಮ ಹಾಗೂ ಅನುಷ್ಠಾನಕ್ಕಾಗಿ ಕಳುಹಿಸಿಕೊಡಲಾಗಿದೆ.

**ಕೃಷಿ ಗಣತಿ**

**ಲೆಕ್ಕ ಶೀರ್ಷಿಕೆ: 3454–02–205–03**

**ಉದ್ದೇಶ:** ರಾಜ್ಯದಲ್ಲಿ ಕೃಷಿಗಣತಿಯನ್ನು ಪ್ರತಿ 5 ವರ್ಷಗಳಿಗೊಮ್ಮೆ ಕೈಗೊಳ್ಳಲಾಗುತ್ತದೆ. ರಾಜ್ಯದಲ್ಲಿನ ಭೂ ಹಿಡುವಳಿಗಳ ಸಂಖ್ಯೆ, ವಿಸ್ತೀರ್ಣ, ಭೂ ರಚನೆ ಹಾಗೂ ಇವುಗಳ ಹಿಡುವಳಿಗಳ ಲಕ್ಷಣಗಳ ಮಾಹಿತಿಯನ್ನು ಸಂಗ್ರಹಿಸುವುದು. ಇದರ ಜೊತೆಗೆ ಸಕಾಲಿಕ ವರದಿ ಯೋಜನೆಯಲ್ಲಿ ಆಯ್ಕೆಯಾದ ಎಲ್ಲಾ ಗ್ರಾಮಗಳಲ್ಲಿ ಭೂಬಳಕೆ ವಿವರಗಳು, ನೀರಾವರಿಯಾದ ಕ್ಷೇತ್ರ ಮತ್ತು ವಿವಿಧ ಬೆಳೆಗಳ ವಿಸ್ತೀರ್ಣದ ಮಾಹಿತಿಯನ್ನು ಸಂಗ್ರಹಿಸುವುದು. ಇನ್‌ಪುಟ್ ಸಮೀಕ್ಷೆಯನ್ನು ಕೃಷಿಗಣತಿಯ ಅನುಸರಣಾ ಸಮೀಕ್ಷೆಯಾಗಿ ಕೈಗೊಳ್ಳಲಾಗುತ್ತದೆ. ಇದರಲ್ಲಿ ಹಿಡುವಳಿದಾರರ ವರ್ಗಾಂತರಕ್ಕನುಗುಣವಾಗಿ, ಸಾಗುವಳಿದಾರರು ಬಳಸುವ ಪರಿಕರಗಳಾದಂತಹ ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರಗಳು, ಸಾವಯವ ಮತ್ತು ಹಸಿರು ಗೊಬ್ಬರಗಳು, ಕೀಟನಾಶಕಗಳು, ಕೃಷಿ ಉಪಕರಣಗಳ ಬಳಕೆ ಹಾಗೂ ಸಾಗುವಳಿದಾರರು ಪಡೆದ ಕೃಷಿ ಸಾಲಗಳ ವಿವರ ಮುಂತಾದ ಮಾಹಿತಿಯನ್ನು ಕಲೆ ಹಾಕುವುದು.

2018–19ನೇ ಸಾಲಿಗೆ ರೂ 170.00 ಲಕ್ಷಗಳನ್ನು ನಿಗದಿಪಡಿಸಲಾಗಿದ್ದು ಇದರಲ್ಲಿ ರೂ 160.37 ಲಕ್ಷಗಳನ್ನು ವೆಚ್ಚಮಾಡಲಾಗಿದೆ. ಹಣಕಾಸು ವಿವರಣೆಯನ್ನು ಈ ಕೆಳಗೆ ನೀಡಲಾಗಿದೆ.

| ಬಂಡವಾಳ 2016-17 | | ರಾಜಸ್ವ 2017-18 | | ವೆಚ್ಚ 2018-19 | |
|---|---|---|---|---|---|
| ಅಂದಾಜು | ವೆಚ್ಚ | ಅಂದಾಜು | ವೆಚ್ಚ | ಅಂದಾಜು | ವೆಚ್ಚ |
| (1) | (2) | (3) | (4) | (5) | (6) |
| 130.00 | 84.21 | 163.00 | 106.02 | 170.00 | 160.37 |

**ಭೌತಿಕ ಸಾಧನೆ:**

10ನೇ ಕೃಷಿಗಣತಿ 2015–16ರ ಮೊದಲ ಮತ್ತು ಎರಡನೇ ಹಂತದ ಕಾರ್ಯಗಳು ಪೂರ್ಣಗೊಂಡಿರುತ್ತದೆ. ಮೊದಲ ಹಂತದ ಕರಡು ವರದಿಯನ್ನು ತಯಾರಿಸಲಾಗಿರುತ್ತದೆ ಮತ್ತು ಎರಡನೇ ಹಂತದ ತ:ಖ್ತೆಗಳು ಹಾಗೂ ವರದಿ ತಯಾರಿಕೆ ಕೆಲಸಗಳು ಪ್ರಗತಿಯಲ್ಲಿರುತ್ತವೆ. ಕೃಷಿಗಣತಿಯ ಮೂರನೇ ಹಂತವಾದ ಇನ್‌ಪುಟ್ ಸಮೀಕ್ಷೆಗೆ ಸಂಬಂಧಿಸಿದಂತೆ, ಭಾರತ ಸರ್ಕಾರದವರು ತಾತ್ಕಾಲಿಕ ತ:ಖ್ತೆಗಳನ್ನು ಕಳುಹಿಸಿದ್ದು, ತ:ಖ್ತೆಗಳ ಪರಿಶೀಲನೆ ಕಾರ್ಯ ಪ್ರಗತಿಯಲ್ಲಿರುತ್ತದೆ.

**ಮಳೆ ವರದಿ ಅಂಕಿ ಅಂಶಗಳು:**

ಮಳೆ ಮಾಹಿತಿಯನ್ನು ಸಂಗ್ರಹಿಸಿ ಪ್ರತಿದಿನ, ಪ್ರತಿ ವಾರ, ಪ್ರತಿ ಮಾಹೆ ಮತ್ತು ವಾರ್ಷಿಕವಾಗಿ ವಿಶ್ಲೇಷಣೆಯನ್ನು ಮಾಡಲಾಗುತ್ತಿದೆ. ರಾಜ್ಯದ 176 ತಾಲ್ಲೂಕುಗಳಲ್ಲಿ 1299 ಮಳೆಮಾಪನ ಕೇಂದ್ರಗಳಿದ್ದು, ಈ ಪೈಕಿ 1163 ಮಳೆಮಾಪನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಮಳೆ ಮಾಹಿತಿಯು 1890 ರಿಂದ ಇಲ್ಲಿಯವರೆಗೂ ನಿರ್ದೇಶನಾಲಯದಲ್ಲಿ ಲಭ್ಯವಿರುತ್ತದೆ. ಪ್ರತಿ ದಿನವೂ ಮಳೆ ದಾಖಲು ಮಾಡುವವರು

ಮಳೆಯ ಮಾಹಿತಿಯನ್ನು ಸಂಗ್ರಹಿಸಿ ತಾಲ್ಲೂಕು ಕಛೇರಿ ಮೂಲಕ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಗೆ ಕಳುಹಿಸಿಕೊಡುತ್ತಾರೆ.

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಈ ಮಾಹಿತಿಯನ್ನು ಕೇಂದ್ರ ಕಛೇರಿಗೆ ಕಳುಹಿಸಿಕೊಡುತ್ತಾರೆ. ಕೇಂದ್ರ ಕಛೇರಿಯ ಈ ವಿಭಾಗದಲ್ಲಿ ಪ್ರತಿದಿನದ, ವಾರದ, ಮಾಸಿಕ ಮತ್ತು ವಾರ್ಷಿಕ ವರದಿಗಳನ್ನು ತಯಾರಿಸಿ ಸಂಬಂಧಿಸಿದವರಿಗೆ ಕಳುಹಿಸಿಕೊಡಲಾಗುತ್ತಿದೆ. ಪ್ರಗತಿ ವರದಿಗಳನ್ನು ಈ ಕೆಳಗೆ ನೀಡಲಾಗಿದೆ.

- 2018 ರ ವಾರ್ಷಿಕ ಮಳೆ ವರದಿ ತಯಾರಿಸಿ ಪ್ರಕಟಿಸಲಾಗಿದೆ.
- 2018 ನೇ ಜನವರಿಯಿಂದ ಡಿಸೆಂಬರ್‌ವರೆಗೆ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಸ್ಥಾಪಿಸಿರುವ ಮಳೆ ಮಾಪನ ಕೇಂದ್ರಗಳ ಮಾಸಿಕ ಮಳೆ ವರದಿಯನ್ನು ವರ್ಷದ ಎಲ್ಲಾ 12 ತಿಂಗಳುಗಳಲ್ಲಿ ತಯಾರಿಸಿ ಪ್ರಕಟಿಸಲಾಗಿದೆ.
- ಮಳೆ ಋತುವಿನ ಅವಧಿಯಲ್ಲಿ ಅಂದರೆ 2018ನೇ ಜೂನ್ 1 ರಿಂದ ಡಿಸೆಂಬರ್ 31 2018ರ ಅಂತ್ಯದವರೆಗೆ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಸ್ಥಾಪಿಸಿರುವ ಮಳೆ ಮಾಪನ ಕೇಂದ್ರಗಳ ದಿನಂಪ್ರತಿ ಮಳೆ ವರದಿಯನ್ನು ತಯಾರಿಸಿ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಪ್ರಧಾನ ಕಾರ್ಯದರ್ಶಿಗಳು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಪ್ರಧಾನ ಕಾರ್ಯದರ್ಶಿಗಳು, ಕೃಷಿ ಮತ್ತು ತೋಟಗಾರಿಕೆ, ಕಾರ್ಯದರ್ಶಿಗಳು ವಿಪತ್ತು ನಿರ್ವಹಣೆ ಕಂದಾಯ ಇಲಾಖೆ ಇವರಿಗೆ ಸಲ್ಲಿಸಲಾಗಿದೆ.
- ಅಲ್ಲದೆ ಮಾನ್ಯ ಮುಖ್ಯಮಂತ್ರಿಯವರ, ಆಪ್ತ ಕಾರ್ಯದರ್ಶಿಗಳು, ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರುಗಳ ಮತ್ತು ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು/ಆಪ್ತಸಹಾಯಕರಿಗೆ ವರದಿಯ ಪ್ರತಿಯನ್ನು ಸಲ್ಲಿಸಲಾಗಿರುತ್ತದೆ.
- 2018ರ ನೈರುತ್ಯ ಮುಂಗಾರಿನ (ಜೂನ್–ಸೆಪ್ಟಂಬರ್) ಮಳೆಯ ಪ್ರಗತಿಯ ವಿಶೇಷ ವರದಿಯನ್ನು ಅಕ್ಟೋಬರ್– 2018ರಲ್ಲಿ ಸಿದ್ದಪಡಿಸಿ ಸಲ್ಲಿಸಲಾಗಿದೆ.

## ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ(ಕೆಎಸ್‌ಎಸ್‌ಡಿಎ)

a) **ಯೋಜನೆಯ ಹೆಸರು**: ಕೇಂದ್ರ ಪುರಸ್ಕೃತ ಯೋಜನೆ– ಭಾರತ ಸಾಂಖ್ಯಿಕ ಬಲವರ್ಧನೆ ಯೋಜನೆ(ISSP)

b) **ಆಯವ್ಯಯ ಶೀರ್ಷಿಕೆ: 3454–02–205–0–18–103**

ಕೇಂದ್ರ ಮತ್ತು ರಾಜ್ಯದ ಪಾಲಿನ ಅನುಪಾತವು ನಿಶ್ಚಳವಾಗಿರುವುದಿಲ್ಲ. ಆವರ್ತಕ ವೆಚ್ಚವನ್ನು ರಾಜ್ಯ ಸರ್ಕಾರವು ಮತ್ತು ಆವರ್ತೇತರ ವೆಚ್ಚವನ್ನು ಕೇಂದ್ರ ಸರ್ಕಾರವು ಭರಿಸುತ್ತದೆ. ಆದರೆ ಕಟ್ಟಡ ನಿರ್ಮಾಣ ಚಟುವಟಿಕೆಗಳಿಗೆ ಕೇಂದ್ರ ಮತ್ತು ರಾಜ್ಯದ ಪಾಲು ಶೇಕಡ 75:25 ರಂತಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ತಯಾರಿಸಲಾದ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯನ್ನು ಇದೇ ಮಾದರಿಯಲ್ಲಿ ಹಂಚಿಕೆ ಮಾಡಲಾಗಿದೆ.

ಈ ಯೋಜನೆಯ ಉದ್ದೇಶವು ರಾಜ್ಯದ ಸಾಂಖ್ಯಿಕ ವ್ಯವಸ್ಥೆಯಲ್ಲಿ ಸುಧಾರಣೆ ತರುವುದು ಹಾಗೂ ವಿಕೇಂದ್ರೀಕೃತ ವ್ಯವಸ್ಥೆಯ ರಚನೆಯೊಳಗೆ, ಸರ್ಕಾರದ ಒಳಗೆ ಹಾಗೂ ಹೊರಗೆ ನಿರ್ಧಾರಗಳನ್ನು ಕೈಗೊಳ್ಳಲು ಪೂರಕವಾದ, ಸಂಶೋಧನೆಗಳನ್ನು ಪ್ರಚೋದಿಸುವ ಮತ್ತು ಜನಜೀವನದ ಮೇಲೆ ಪರಿಣಾಮ ಬೀರುವ ವಿಷಯಗಳಲ್ಲಿ ತಿಳಿವಳಿಕೆಯುಕ್ತ ಚರ್ಚೆಗಳನ್ನು ಪ್ರೋತ್ಸಾಹಿಸಲು, ವಿಶ್ವಾಸನೀಯ, ಸಕಾಲಿಕ ಹಾಗೂ ನಂಬಲರ್ಹವಾದ ಸಾಮಾಜಿಕ ಮತ್ತು ಆರ್ಥಿಕ ಅಂಕಿ ಅಂಶಗಳನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ. ರಾಷ್ಟ್ರೀಯ ಕನಿಷ್ಠ

ಮಟ್ಟವನ್ನು ಕಾಯ್ದುಕೊಂಡು ಸಾಂಖ್ಯಿಕ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ, ಸಾಕಷ್ಟು ಪ್ರಮಾಣದಲ್ಲಿ ಮತ್ತು ವ್ಯವಸ್ಥಿತವಾಗಿ ಕೈಗೊಳ್ಳುವ ಸಲುವಾಗಿ, ಈ ಯೋಜನೆಯಡಿ 20 ಪ್ರಮುಖ ಸಾಂಖ್ಯಿಕ ಚಟುವಟಿಕೆಗಳಿಗೆ ಒತ್ತುನೀಡಲಾಗಿದೆ.

**ಯೋಜನೆಯ ಫಲಿತಾಂಶ ಮತ್ತು ಅಂದಾಜು ಫಲಾನುಭವಿಗಳು:**

i) ರಾಜ್ಯದ ಸಾಂಖ್ಯಿಕ ವ್ಯವಸ್ಥೆಯಲ್ಲಿನ ಸುಧಾರಣೆ

ii) 30 ಇತರೆ ಇಲಾಖೆ ಮತ್ತು 30 ಜಿಲ್ಲಾ ಪಂಚಾಯತಿಗಳು

iii) 20 ಪ್ರಮುಖ ಸಾಂಖ್ಯಿಕ ಚಟುವಟಿಕೆಗಳು

c) **ಹಣಕಾಸು: ಪರಿಷ್ಕೃತ ಅಂದಾಜುಗಳು**

**(ರೂ.ಲಕ್ಷಗಳಲ್ಲಿ)**

| ಪರಿಷ್ಕೃತ ಅಂದಾಜು 2016–17 | | | ಆಯವ್ಯಯ ಅಂದಾಜು 2017–18 | | | ಆಯವ್ಯಯ ಅಂದಾಜು 2018–19 | | |
|---|---|---|---|---|---|---|---|---|
| ಬಂಡವಾಳ | ರಾಜಸ್ವ | ಒಟ್ಟು | ಬಂಡವಾಳ | ರಾಜಸ್ವ | ಒಟ್ಟು | ಬಂಡವಾಳ | ರಾಜಸ್ವ | ಒಟ್ಟು |
| (1) | (2) | (3) | (4) | (5) | (6) | (7) | (8) | (9) |
| 0.00 | 0.00 | 0.00 | 0.00 | 0.00 | 0.00 | 0.00 | 181.00 | 181.00 |

d) **ವೆಚ್ಚ:**

**(ರೂ.ಲಕ್ಷಗಳಲ್ಲಿ)**

| ಲೆಕ್ಕ 2016–17 | | | ಲೆಕ್ಕ 2017–18 | | | ಲೆಕ್ಕ 2018–19 (ಮಾರ್ಚ್–2019 ರ ಅಂತ್ಯಕ್ಕೆ ಇದ್ದಂತೆ) | | |
|---|---|---|---|---|---|---|---|---|
| ಬಂಡವಾಳ | ರಾಜಸ್ವ | ಒಟ್ಟು | ಬಂಡವಾಳ | ರಾಜಸ್ವ | ಒಟ್ಟು | ಬಂಡವಾಳ | ರಾಜಸ್ವ | ಒಟ್ಟು |
| (1) | (2) | (3) | (4) | (5) | (6) | (7) | (8) | (9) |
| 149.99 | 278.96 | 428.95 | – | 53.04 | 53.04 | 0.00 | 197.21 | 197.21 |

ಟಿಪ್ಪಣಿ:– 2018–19ನೇ ಸಾಲಿಗೆ ಈ ಕಾರ್ಯಕ್ರಮಕ್ಕೆ ರೂ.181.00 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ಕೇಂದ್ರ ಸರ್ಕಾರದಿಂದ ಒದಗಿಸಲಾದ ಅನುದಾನದಿಂದ 2018–19ನೇ ಸಾಲಿಗೆ ರೂ.53.77 ಲಕ್ಷ ಲಭ್ಯವಿದ್ದಿತ್ತು. ಒಟ್ಟಾರೆ 2018–19ನೇ ಸಾಲಿಗೆ ರೂ.234.77 ಲಕ್ಷಗಳನ್ನು (ರಾಜ್ಯ ಅನುದಾನ ರೂ.143.44 ಲಕ್ಷ + ಕೇಂದ್ರ ಸರ್ಕಾರದ ಅನುದಾನ ಪ್ರಾರಂಭಿಕ ಶುಲ್ಕ ರೂ.53.77 ಲಕ್ಷ) ವೆಚ್ಚ ಮಾಡಲಾಗಿದೆ.

ರಾಜ್ಯ ಸರ್ಕಾರವು ಈ ಕಾರ್ಯಕ್ರಮವನ್ನು 2018–19ನೇ ಸಾಲಿಗೆ ವಿಸ್ತರಿಸಿ ರೂ.181.00 ಲಕ್ಷಗಳ ಆಯವ್ಯಯವನ್ನು ಒದಗಿಸಿದ್ದು, ಈ ಪೈಕಿ ರೂ.143.44 ಲಕ್ಷಗಳನ್ನು ವೆಚ್ಚಮಾಡಲಾಗಿದೆ.

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯಡಿ(KSSSP) 2018–19ನೇ ಸಾಲಿನಲ್ಲಿ ಸಾಧಿಸಿದ ಪ್ರಮುಖ ಸಾಧನೆಯ ವಿವರಗಳು ಈ ಕೆಳಕಂಡಂತಿವೆ.

- ದಿನಾಂಕ: 29.06.2018 ರಂದು ಕೇಂದ್ರ ಕಛೇರಿ ಹಾಗೂ ರಾಜ್ಯದ ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯಲ್ಲಿ ಪ್ರೊ.ಮಹಾಲನೋಬೀಸ್ ಅವರ ಜನ್ಮ ದಿನವನ್ನು 12ನೇ ಸಾಂಖ್ಯಿಕ ದಿನಾಚರಣೆಯನ್ನಾಗಿ ಕೆಎಸ್‌ಎಸ್‌ಡಿಎ ವತಿಯಿಂದ ಆಚರಿಸಲಾಯಿತು.
- ಇ–ಜನ್ಮ ತಂತ್ರಾಂಶ ನಿರ್ವಹಣೆಗಾಗಿ ದಿನಾಂಕ:14.06.2018 ರಿಂದ 07.01.2019 ರವರೆಗೆ NICSI ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಒಬ್ಬರು ಪ್ರೋಗ್ರಾಮರ್‌ನ್ನು ನೀಡಲಾಗಿದೆ.

- ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕೇಂದ್ರ ಕಛೇರಿಗೆ ಮತ್ತು ರಾಜ್ಯದ ವಿವಿಧ 17 ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಕಿಯೊನಿಕ್ಸ್ ಮುಖಾಂತರ Data Entry Operators ಗಳನ್ನು ನೀಡಲಾಗಿದೆ.
- Worksoft ನಿರ್ವಹಣೆಗಾಗಿ ಎನ್‌ಐಸಿ ಬೆಂಗಳೂರು ಇವರಿಗೆ ಒಬ್ಬರು Computer programmer ನ್ನು ಹೊರಗುತ್ತಿಗೆ ಆಧಾರದ ಮೇಲೆ ಕಿಯೊನಿಕ್ಸ್ ಮುಖಾಂತರ ನೀಡಲಾಗಿದೆ.
- ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಪ್ರಮುಖ ಚಟುವಟಿಕೆಗಳನ್ನು ಸಾರ್ವಜನಿಕರ ಗಮನಕ್ಕೆ ತರಲು 2018ನೇ ಸಾಲಿನಲ್ಲಿ ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಒಂದು ಮಳಿಗೆಯನ್ನು ಏರ್ಪಡಿಸಲಾಯಿತು.
- ದಿನಾಂಕ: 10.01.2019 ರಂದು ಜನನ ಮರಣ ನೋಂದಣಿಯ ನಿಯಮಗಳು ಮತ್ತು ಇ–ಜನ್ಮ ತಂತ್ರಾಂಶ ನಿರ್ವಹಣೆ ಕುರಿತು ರಾಜ್ಯ ಮಟ್ಟದ ತರಬೇತಿಯನ್ನು ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಹಾಗೂ ಅವರ ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗಿದೆ.
- ಮರಣ ಕಾರಣ ವೈದ್ಯಕೀಯ ಪ್ರಮಾಣ ಪತ್ರದಲ್ಲಿ ಮರಣ ಕಾರಣ ನಮೂದಿಸುವ ಕುರಿತು ರಾಜ್ಯದ ಮೈಸೂರು, ಬೆಂಗಳೂರು, ಬೆಳಗಾವಿ ಮತ್ತು ಕಲಬುರ್ಗಿ ವಿಭಾಗಗಳಲ್ಲಿ ಬರುವ ಜಿಲ್ಲೆಗಳ ವೈದ್ಯರುಗಳಿಗೆ ತರಬೇತಿಯನ್ನು ನೀಡಲಾಗಿರುತ್ತದೆ.
- ಜನನ ಮರಣ ನೋಂದಣಿ ನಿಯಮಗಳು ಹಾಗೂ ಇ–ಜನ್ಮ ತಂತ್ರಾಂಶ ನಿರ್ವಹಣೆ ಕುರಿತು – ಜಿಲ್ಲಾ ಮಟ್ಟದಲ್ಲಿ ಇ–ಜನ್ಮ ತಂತ್ರಾಂಶವನ್ನು ನಿರ್ವಹಣೆ ಮಾಡುತ್ತಿರುವ ಸಿಬ್ಬಂದಿಗಳು ಹಾಗೂ ರಿಜಿಸ್ಟ್ರಾರ್‌ಗಳಿಗೆ ತರಬೇತಿಯನ್ನು ನೀಡಲಾಗಿದೆ.
- 9 ಕೇಂದ್ರಗಳಲ್ಲಿ ನಡೆಸಲಾದ ಸಾಮಾನ್ಯ ಕೌಟುಂಬಿಕ ಆದಾಯ ಮತ್ತು ವೆಚ್ಚ ಸಮೀಕ್ಷೆಯನ್ನು (Family Budget Survey) ಪೂರ್ಣಗೊಳಿಸಲಾಯಿತು.
- ಬೆಳೆ ಕಟಾವು ಪ್ರಯೋಗಗಳನ್ನು ಮೊಬೈಲ್ ಆ್ಯಪ್ ಮೂಲಕ ಕೈಗೊಳ್ಳುವ ಕುರಿತು ಸಿದ್ಧಪಡಿಸಲಾದ ಕೈಪಿಡಿಯನ್ನು 15000 ಪ್ರತಿಗಳಲ್ಲಿ ಮುದ್ರಿಸಿ ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಗೆ ಕಳುಹಿಸಿಕೊಡಲಾಯಿತು.
- 18ನೇ ಸುತ್ತಿನ ಮಾದರಿ ಸಮೀಕ್ಷೆಯನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು ಕೆಎಸ್‌ಎಸ್‌ಡಿಎ ವತಿಯಿಂದ ಜಂಟಿಯಾಗಿ ಹಮ್ಮಿಕೊಳ್ಳಲಾಗಿತ್ತು.

**ವೇತನ ಕಾರ್ಯಕ್ರಮಗಳು:**

**ಹೆಸರು**: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ

**ಆಯವ್ಯಯ ಶೀರ್ಷಿಕೆ: 3454–02–205–0–01**

2018–19ನೇ ಸಾಲಿಗೆ ರೂ 3055.85 ಲಕ್ಷಗಳನ್ನು ನಿಗಧಿಪಡಿಸಲಾಗಿದ್ದು ಇದರಲ್ಲಿ ರೂ 3216.30 ಲಕ್ಷಗಳನ್ನು ವೆಚ್ಚಮಾಡಲಾಗಿದೆ. ಹಣಕಾಸು ವಿವರಣೆಯನ್ನು ಈ ಕೆಳಗೆ ನೀಡಲಾಗಿದೆ.

| ಬಂಡವಾಳ 2016-17 | ರಾಜಸ್ವ 2017-18 | ವೆಚ್ಚ 2018-19 | |
|---|---|---|---|
| ಅಂದಾಜು | ವೆಚ್ಚ | ಅಂದಾಜು | ವೆಚ್ಚ |
| (1) | (2) | (3) | (4) |
| 2354.35 | 2836.00 | 3216.30 | 3055.85 |

2018–19ನೇ ಸಾಲಿನಲ್ಲಿ ಹೆಚ್ಚುವರಿ ವೆಚ್ಚವಾದ ರೂ.206.85 ಲಕ್ಷಗಳು ಅಧಿಕಾರಿ/ಸಿಬ್ಬದಿಯವರ ಹೆಚ್ಚಾದ ವೇತನದ ಬಾಪ್ತಿಗೆ ವೆಚ್ಚಮಾಡಲಾಗಿದೆ.

**ಬೆಳೆ ವಿಮಾ ಯೋಜನೆ:**

ಕರ್ನಾಟಕ ರಾಜ್ಯದಲ್ಲಿ ಬೆಳೆಯುವ ಆಹಾರ ಮತ್ತು ಆಹಾರೇತರ ಬೆಳೆಗಳ ಸರಾಸರಿ ಇಳುವರಿಯನ್ನು ಋತುವಾರು ಅಂದಾಜಿಸುವುದು ಬೆಳೆ ವಿಮಾ ಯೋಜನೆ ವಿಭಾಗದ ಮುಖ್ಯ ಕಾರ್ಯವಾಗಿರುತ್ತದೆ. ಈ ವಿಭಾಗವು ಗ್ರಾಮಪಂಚಾಯಿತಿವಾರು, ಹೋಬಳಿವಾರು, ತಾಲ್ಲೂಕುವಾರು ಹಾಗೂ ಜಿಲ್ಲಾವಾರು ಸರಾಸರಿ ಇಳುವರಿಯನ್ನು ಅಂದಾಜಿಸುತ್ತದೆ. ಬೆಳೆ ವಿಮಾ ಯೋಜನಾ ವಿಭಾಗದ ಅಂಕಿಅಂಶಗಳನ್ನು (ಸರಾಸರಿ ಇಳುವರಿ) ಮುಖ್ಯವಾಗಿ ಕೃಷಿ ವಿಮಾ ಕಂಪನಿಗಳು (ರೈತರ ವಿಮೆ ಹಣವನ್ನು ನಿರ್ಧರಿಸುವುದಕ್ಕೆ) ಹಾಗೂ ಕೃಷಿ ಇಲಾಖೆ ಕರ್ನಾಟಕ ಸರ್ಕಾರವರು ಉಪಯೋಗಿಸುತ್ತಾರೆ.

**ಆಯವ್ಯಯ ಶೀರ್ಷಿಕೆ:** 3454-02-111-0-02

2018–19 ನೇ ಸಾಲಿಗೆ ರೂ 150.00 ಲಕ್ಷಗಳನ್ನು ನಿಗದಿಪಡಿಸಲಾಗಿದ್ದು ಇದರಲ್ಲಿ ರೂ.113.43 ಲಕ್ಷಗಳನ್ನು ವೆಚ್ಚಮಾಡಲಾಗಿದೆ. ಹಣಕಾಸು ವಿವರಣೆಯನ್ನು ಈ ಕೆಳಗೆ ನೀಡಲಾಗಿದೆ.

| **ಬಂಡವಾಳ 2016-17** | **ರಾಜಸ್ವ 2017-18** | **ವೆಚ್ಚ 2018-19** | |
|---|---|---|---|
| **ಅಂದಾಜು** | **ವೆಚ್ಚ** | **ಅಂದಾಜು** | **ವೆಚ್ಚ** |
| 104.46 | 150.00 | 150.00 | 113.43 |

**ಕೃಷಿ ವಿಮಾ ಯೋಜನೆಯಡಿ ಬೆಳೆವಾರು ಸಂಖ್ಯೆಯನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.**

| ವರ್ಷ | ಬೆಳೆ | | |
|---|---|---|---|
| | ಮುಂಗಾರು | ಹಿಂಗಾರು | ಬೇಸಿಗೆ |
| 2016–17 | 40 | 22 | 7 |
| 2017–18 | 40 | 22 | 6 |
| 2018–19 | 36 | 22 | 6 |

**ಋತುವಾರು ಬೆಳೆ ಕಟಾವು ಪ್ರಯೋಗಗಳ ವಿವರವನ್ನು 2017–18 ಮತ್ತು 2018–19ನೇ ಸಾಲಿಗೆ ಈ ಕೆಳಕಂಡಂತಿದೆ.**

| ಹಂಗಾಮು | ಬೆಳೆ ಕಟಾವು ಪ್ರಯೋಗಗಳ ಸಂಖ್ಯೆ | | | | | |
|---|---|---|---|---|---|---|
| | 2017–18 | | | 2018–19 | | |
| | ಯೋಜಿತ | ನಿರ್ವಹಿಸಿದ | ಶೇಕಡ | ಯೋಜಿತ | ನಿರ್ವಹಿಸಿದ | ಶೇಕಡ |
| ಮುಂಗಾರು/ವಾರ್ಷಿಕ | 87030 | 72565 | 83.38 | 86334 | 69257 | 80.21 |
| ಹಿಂಗಾರು | 42108 | 30495 | 72.42 | 42268 | 30012 | 71.00 |
| ಬೇಸಿಗೆ | 10558 | 6592 | 62.43 | 10406 | 5445 | 52.32 |
| ಒಟ್ಟು | 139696 | 109652 | 78.49 | 139008 | 104714 | 75.32 |

**2017–18 ಹಾಗೂ 2018–19ರ (ಮುಂಗಾರು) ಇಲಾಖಾವಾರು ಬೆಳೆ ಕಟಾವು ಪ್ರಯೋಗಗಳ ಮೇಲ್ವಿಚಾರಣೆ ಕೈಗೊಂಡ ವಿವರ ಈ ಕೆಳಕಂಡಂತಿದೆ.**

| ಇಲಾಖೆ | 2017–18 | | | 2018–19 (ಮುಂಗಾರು) | | |
|---|---|---|---|---|---|---|
| | ಪ್ರಯೋಗಗಳ ಸಂಖ್ಯೆ | | ಶೇಕಡಾವಾರು | ಪ್ರಯೋಗಗಳ ಸಂಖ್ಯೆ | | ಶೇಕಡಾವಾರು |
| | ಮೇಲ್ವಿಚಾರಣೆಗೆ ಹಂಚಿಕೆಯಾದ ಪ್ರಯೋಗಗಳು | ಮೇಲ್ವಿಚಾರಣೆ ಕೈಗೊಂಡ ಪ್ರಯೋಗಗಳು | ಮೇಲ್ವಿಚಾರಣೆ ಮಾಡಿದ ಪ್ರಯೋಗಗಳು | ಮೇಲ್ವಿಚಾರಣೆಗೆ ಹಂಚಿಕೆಯಾದ ಪ್ರಯೋಗಗಳು | ಮೇಲ್ವಿಚಾರಣೆ ಕೈಗೊಂಡ ಪ್ರಯೋಗಗಳು | ಮೇಲ್ವಿಚಾರಣೆ ಮಾಡಿದ ಪ್ರಯೋಗಗಳು |
| ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ | 23223 | 7004 | 30.16 | 14616 | 4185 | 28.63 |
| ಕಂದಾಯ | 18467 | 5526 | 29.92 | 11211 | 3371 | 30.07 |
| ಗ್ರಾಮೀಣಾಭಿವೃದ್ಧಿ | 8395 | 2982 | 35.52 | 4692 | 1439 | 30.67 |
| ಕೃಷಿ ಮತ್ತು ತೋಟಗಾರಿಕೆ | 16862 | 4974 | 29.50 | 9196 | 2518 | 27.38 |
| ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ | 900 | 900 | 100 | 620 | 482 | 77.74 |
| ಒಟ್ಟು | 67847 | 21386 | 31.52 | 40335 | 11995 | 29.74 |

ಮಾಹಿತಿ: ಎನ್.ಐ.ಸಿ. ಸಿ.ಸಿ.ಇ ಸಂರಂಕ್ಷಣೆ ತಂತ್ರಾಂಶ ಮತ್ತು ಕೃ.ಅಂ.ಅಂ ವಿಭಾಗ

**"ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆ"**

ಕೇಂದ್ರ ಸರ್ಕಾರವು ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ದೇಶದಾದ್ಯಂತ ಈ ಯೋಜನೆಯನ್ನು ಘೋಷಿಸಿರುತ್ತಾರೆ. ನೈಸರ್ಗಿಕ ವಿಕೋಪಗಳು, ಕೀಟಗಳ ಮತ್ತು ರೋಗಗಳ ಬಾಧೆಯಿಂದ ಬೆಳೆಗಳು ವೈಫಲ್ಯವಾದ ಸಂದರ್ಭದಲ್ಲಿ ರೈತರಿಗೆ ವಿಮಾ ರಕ್ಷಣೆ ಹಾಗೂ ಆರ್ಥಿಕ ಬೆಂಬಲ ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. "ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆ"ಯ ಮಾರ್ಗಸೂಚಿಯಂತೆ ಕರ್ನಾಟಕ ರಾಜ್ಯದಲ್ಲಿ ಅಧಿಸೂಚಿತ ಬೆಳೆಗಳವಾರು, ಅಧಿಸೂಚಿತ ವಿಮಾ ಘಟಕಗಳವಾರು, ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಳ್ಳಲು ಮೊಬೈಲ್ ಆ್ಯಪ್ ತಂತ್ರಾಂಶವನ್ನು ಕೃಷಿ ಇಲಾಖೆರವರು ಅಭಿವೃದ್ಧಿಪಡಿಸಲಾಗಿದೆ.

ಮೊಬೈಲ್ ಆ್ಯಪ್ ತಂತ್ರಾಂಶದ ಮೂಲಕ ಬೆಳೆ ಕಟಾವು ಪ್ರಯೋಗಗಳ ಗುಣಮಟ್ಟ ಹಾಗೂ ಇಳುವರಿ ದತ್ತಾಂಶದ ನಿಖರತೆಯನ್ನು ಸುಧಾರಿಸಲು ಮತ್ತು ವಿಶ್ವಾಸನೀಯತೆ ಹಾಗೂ ಸಮಯಪಾಲನೆಯನ್ನು ಸುಧಾರಿಸಲು ಅನುಕೂಲವಾಗುತ್ತದೆ.

ಅದರಂತೆ ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಳ್ಳುವ ಕೃಷಿ, ತೋಟಗಾರಿಕೆ, ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಮೂಲ ಕಾರ್ಯಕರ್ತರು ಮೊಬೈಲ್ ಆ್ಯಪ್ ತಂತ್ರಾಂಶವನ್ನು ಬಳಸಿ ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಂಡು, ಬಂದಂತಹ ಇಳುವರಿ ಹಾಗೂ ಇತರೆ ಮಾಹಿತಿಯನ್ನು ಮೊಬೈಲ್ ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡುವ ಮೂಲಕ ನಿಯಮಾನುಸಾರ ವಿಮಾ ಘಟಕವಾರು ಸರಾಸರಿ ಇಳುವರಿಯನ್ನು ಸಂರಕ್ಷಣಾ ಪೋರ್ಟಲ್‌ಗೆ ಅಪ್‌ಲೋಡ್ ಮಾಡುವ ಮೂಲಕ ಬೆಳೆ ನಷ್ಟ ಪರಿಹಾರವನ್ನು ರೈತರಿಗೆ ಶೀಘ್ರವಾಗಿ ದೊರಕಿಸಿಕೊಡುವುದು ಸರ್ಕಾರದ ಮುಖ್ಯ ಉದ್ದೇಶವಾಗಿದೆ.

**ಕೃಷಿ ಅಂಕಿ ಅಂಶಗಳ ವಿಭಾಗ:**

ಋತುವಾರು ಕೃಷಿ ಅಂಕಿ ಅಂಶಗಳನ್ನು ಸಂಗ್ರಹಿಸುವುದು ಈ ಶಾಖೆಯ ಮುಖ್ಯವಾದ ಕರ್ತವ್ಯವಾಗಿದ್ದು, ಈ ಕೆಳಕಂಡ ವರದಿಗಳನ್ನು ತಯಾರಿಸಲಾಗುತ್ತಿದೆ.

- ಪ್ರಮುಖ ಕೃಷಿ ಬೆಳೆಗಳ ವಿಸ್ತೀರ್ಣ, ಉತ್ಪಾದನೆ ಮತ್ತು ಇಳುವರಿಗೆ ಸಂಬಂಧಿಸಿದಂತೆ ಮುಂಗಡ ಅಂದಾಜು ವರದಿ.
- ಪ್ರಮುಖ ಕೃಷಿ ಬೆಳೆಗಳ ವಿಸ್ತೀರ್ಣ, ಉತ್ಪಾದನೆ ಮತ್ತು ಇಳುವರಿಯ ಪೂರ್ಣ ಪರಿಷ್ಕೃತ ಅಂದಾಜುಗಳ ವರದಿ
- ಋತುವಾರು ಬೆಳೆ ಕ್ಷೇತ್ರ ಮರುಹೊಂದಾಣಿಕೆ ವರದಿ
- ವಾರ್ಷಿಕ ಋತು ಮತ್ತು ಬೆಳೆಗಳ ಅಂಕಿ ಅಂಶಗಳ ವರದಿ
- ರೈತ ಸಂಪರ್ಕ ಪದ್ದತಿ

**ಮುಂಗಡ ಅಂದಾಜು ವರದಿಗಳು:**

ನಿರ್ದೇಶನಾಲಯವು ಕೃಷಿ ವರ್ಷದ ಎಲ್ಲಾ ಮೂರು ಋತುಗಳಲ್ಲಿ ಬಿತ್ತಲಾದ ಮತ್ತು ಕಟಾವು ಮಾಡಲಾದ ಪ್ರಮುಖ ಬೆಳೆಗಳ ವಿಸ್ತೀರ್ಣ, ಉತ್ಪಾದನೆ ಮತ್ತು ಇಳುವರಿಯನ್ನು ನಾಲ್ಕು ಮುಂಗಡ ಅಂದಾಜು ವರದಿಗಳಲ್ಲಿ ಮತ್ತು ಅಂತಿಮ ಅಂದಾಜು ವರದಿಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಇದು ನಿರ್ದೇಶನಾಲಯದ ಹೊಣೆಗಾರಿಕೆಯಾಗಿದ್ದು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಂದ ಸ್ವೀಕೃತವಾದ ಜಿಲ್ಲಾವಾರು ಅಂಕಿ ಅಂಶಗಳು ಇದಕ್ಕೆ ಆಧಾರವಾಗಿರುತ್ತವೆ ಹಾಗೂ ಈ ಅಂದಾಜುಗಳನ್ನು ಅಂತಿಮಗೊಳಿಸುವುದಕ್ಕೆ ಮುಂಚಿತವಾಗಿ ಕೃಷಿ ಕ್ಷೇತ್ರಾಧಿಕಾರಿಗಳೊಡನೆ ಸಮಾಲೋಚಿಸಲಾಗುತ್ತದೆ.

ಪ್ರಥಮ ಮುಂಗಡ ಅಂದಾಜು ವರದಿಯಲ್ಲಿ ಮುಂಗಾರು ಹಂಗಾಮಿನ ಬೆಳೆಗಳನ್ನು ಮಾತ್ರ ಅಂದಾಜಿಸುವುದಾಗಿದ್ದು, ಈ ಅಂಕಿ ಅಂಶಗಳು ಬೆಳೆ, ಹವಾಮಾನ ಉಸ್ತುವಾರಿ ಸಮಿತಿ ಸಭೆಗಳ ನಡವಳಿಗಳ ಮೇಲೆ ಆಧಾರಿತವಾಗಿರುತ್ತವೆ. ಹಾಗೂ ಪ್ರಮುಖ ಜಲಾಶಯಗಳ ನೀರಿನ ಲಭ್ಯತೆ, ಮಳೆ, ಉಷ್ಣಾಂಶ ಮತ್ತು ನೀರಾವರಿ ಇತ್ಯಾದಿಗಳ ಮೇಲೆ ಅವಲಂಬಿತವಾಗಿರುತ್ತದೆ.

ಎರಡನೇ ಮುಂಗಡ ಅಂದಾಜು ವರದಿ ಮತ್ತು ನಂತರದ ವರದಿಗಳು ಮುಂಗಾರು, ಹಿಂಗಾರು ಮತ್ತು ಬೇಸಿಗೆ ಋತುಗಳಲ್ಲಿ ಬೆಳೆಯುವ ಬೆಳೆಗಳ ಅಂದಾಜು ಅಂಕಿ ಅಂಶಗಳನ್ನು ಒಳಗೊಂಡಿರುತ್ತದೆ. ಸದರಿ ವರದಿಗಳಿಗೆ ಮೇಲೆ ತಿಳಿಸಿರುವ ಅಂಶಗಳೊಂದಿಗೆ ಲಭ್ಯವಿರುವ ಮರುಹೊಂದಾಣಿಕೆ ವರದಿಯ ಕ್ಷೇತ್ರ, ಬೆಳೆ ಕಟಾವು ಪ್ರಯೋಗಗಳ ಫಲಿತಾಂಶಗಳ ಇಳುವರಿ ಪರಿಗಣಿಸಿ ಹಾಗೂ ಕೃಷಿ ಇಲಾಖೆಯ ಅಂಕಿ ಅಂಶಗಳೊಂದಿಗೆ ಮರುಹೊಂದಾಣಿಕೆಗೊಳಿಸಿ ಸಿದ್ಧಪಡಿಸಲಾಗುತ್ತದೆ. 2018–19ನೇ ಸಾಲಿನ ಪ್ರಥಮ ಮುಂಗಡ ಅಂದಾಜು ವರದಿಯನ್ನು ಆಗಸ್ಟ್ 2018 ರಲ್ಲಿ ಭಾರತ ಸರ್ಕಾರಕ್ಕೆ ಕಳುಹಿಸಲಾಗಿದೆ. 2018–19ನೇ ಸಾಲಿನ ಎರಡನೇ ಮುಂಗಡ ಅಂದಾಜು ವರದಿಯನ್ನು ಸಿದ್ಧಪಡಿಸಿ ಜನವರಿ 2019 ರಲ್ಲಿ ಭಾರತ ಸರ್ಕಾರಕ್ಕೆ ಕಳುಹಿಸಲಾಗಿದೆ.

2018–19ನೇ ಸಾಲಿನ ಮೂರು ಮತ್ತು ನಾಲ್ಕನೆ ಮುಂಗಡ ಅಂದಾಜು ವರದಿಗಳನ್ನು ಕ್ರಮವಾಗಿ 2019ರ ಏಪ್ರಿಲ್ ಮತ್ತು ಜುಲೈ ತಿಂಗಳುಗಳಲ್ಲಿ ಕಳುಹಿಸಲಾಗಿರುತ್ತದೆ.

ನಾಲ್ಕನೇ ಮುಂಗಡ ಅಂದಾಜು ವರದಿಗಳನ್ನು ಕಳುಹಿಸಿದ ನಂತರ ಅಂತಿಮ ಅಂದಾಜು ವರದಿಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ. 2017–18ರ ಅಂತಿಮ ಅಂದಾಜು ವರದಿಯನ್ನು ಅಕ್ಟೋಬರ್ 2018 ರಲ್ಲಿ ಭಾರತ ಸರ್ಕಾರಕ್ಕೆ ಕಳುಹಿಸಲಾಗಿದೆ. ಈ ಅಂದಾಜುಗಳನ್ನು ಸಿದ್ಧಪಡಿಸುವಲ್ಲಿ ಉಂಟಾಗುವ ತೊಂದರೆಗಳನ್ನು ನಿವಾರಿಸುವುದಕ್ಕಾಗಿ ರಾಜ್ಯ ಸರ್ಕಾರವು ಒಂದು ಉನ್ನತಾಧಿಕಾರ

ಸಮಿತಿಯನ್ನು ರಚಿಸಿದ್ದು, 2017–18 ರ ಅಂತಿಮ ಅಂದಾಜು ವರದಿಯನ್ನು ಸಮಿತಿಯು ಜುಲೈ 2019 ರಲ್ಲಿ ಪರಿಶೀಲಿಸಿದೆ. ಪ್ರಮುಖ ಆಹಾರ ಧಾನ್ಯಗಳು, ಎಣ್ಣೆ ಕಾಳುಗಳು, ಕಬ್ಬು (ಹೆಚ್) ಮತ್ತು ಹತ್ತಿ ಬೆಳೆಗಳ ಉತ್ಪಾದನೆಯ 2017–18ರ ಅಂತಿಮ ಅಂದಾಜು ವರದಿಯನ್ನು ಹಾಗೂ 2018–19ನೇ ಸಾಲಿನ 4ನೇ ಅಂತಿಮ ಅಂದಾಜು ವರದಿಯನ್ನು ಈ ಕೆಳಗೆ ಕೋಷ್ಟಕದಲ್ಲಿ ನೀಡಲಾಗಿದೆ.

**ಕರ್ನಾಟಕ ರಾಜ್ಯದ ಒಟ್ಟು ಆಹಾರ ಧಾನ್ಯಗಳ ಉತ್ಪಾದನೆ**

| ಕ್ರ. ಸಂ | ಬೆಳೆಗಳು | ಉತ್ಪಾದನೆ (ಲಕ್ಷ ಟನ್)ಗಳಲ್ಲಿ | |
|---|---|---|---|
| | | **2017-18 *** | **2018-19 **** |
| 1 | ಏಕದಳ ಧಾನ್ಯಗಳು | 119.60 | 91.71 |
| 2 | ದ್ವಿದಳ ಧಾನ್ಯಗಳು | 22.12 | 18.58 |
| 3 | ಒಟ್ಟು ಆಹಾರ ಧಾನ್ಯಗಳು | 141.72 | 110.29 |
| 4 | ಎಣ್ಣೆ ಕಾಳುಗಳು | 12.79 | 9.17 |
| 5 | ಕಬ್ಬು (ಹೆಚ್) | 374.61 | 471.52 |
| 6 | ಹತ್ತಿ # | 18.44 | 14.30 |

* ಅಂತಿಮ ಅಂದಾಜು ವರದಿಯಂತೆ, ** ನಾಲ್ಕನೇ ಮುಂಗಡ ಅಂದಾಜು ವರದಿಯಂತೆ

# ಹತ್ತಿ ಉತ್ಪಾದನೆಯು ಲಕ್ಷ ಬೇಲ್ಸ್‌ಗಳಲ್ಲಿ ಲಿಂಟ್ ರೂಪದಲ್ಲಿರುತ್ತದೆ(1 ಬೆಲ್=170ಕೆ.ಜಿಗಳು).

**ಬೆಳೆ ಕ್ಷೇತ್ರ ಮರುಹೊಂದಾಣಿಕೆ ವರದಿ:**

ಗ್ರಾಮ/ಹೋಬಳಿ/ತಾಲ್ಲೂಕು/ಜಿಲ್ಲಾಮಟ್ಟದಲ್ಲಿ ಬೆಳೆ ಪ್ರದೇಶವನ್ನು ಮರುಹೊಂದಾಣಿಕೆ ಮಾಡುವ ಸಲುವಾಗಿ 2005–06 ರಿಂದ ಬೆಳೆ ಕ್ಷೇತ್ರ ಮರುಹೊಂದಾಣಿಕೆ ಪದ್ಧತಿಯು ಜಾರಿಯಲ್ಲಿರುತ್ತದೆ. ಈ ಪದ್ಧತಿಯಲ್ಲಿ ಸಂಬಂಧಪಟ್ಟ ಇಲಾಖೆಗಳಾದ ಕಂದಾಯ ಕೃಷಿ, ತೋಟಗಾರಿಕೆ, ಜಲ ಸಂಪನ್ಮೂಲ ಮತ್ತು ಕಬ್ಬು ನಿರ್ದೇಶನಾಲಯ ಇಲಾಖೆಗಳ ಅಧಿಕಾರಿಗಳ ಸಮ್ಮುಖದಲ್ಲಿ ವರ್ಷದ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಋತುಗಳ ಬೆಳೆ ಕ್ಷೇತ್ರ ಮರುಹೊಂದಾಣಿಕೆ ಮಾಡಲಾಗುವುದು. 2017–18ನೇ ಸಾಲಿನ ಮೂರು ಋತುಗಳ ಮರುಹೊಂದಾಣಿಕೆ ವರದಿಗಳನ್ನು ಸಿದ್ದಡಿಸಲಾಗಿದ್ದು, 2018–19ನೇ ಸಾಲಿನ ಬೇಸಿಗೆ ಹಂಗಾಮಿನ ವರದಿಯನ್ನು ಸಿದ್ಧಪಡಿಸುವ ಕಾರ್ಯ ಪ್ರಗತಿಯಲ್ಲಿದೆ.

**ವಾರ್ಷಿಕ ಋತು ಮತ್ತು ಬೆಳೆ ಅಂಕಿ ಅಂಶಗಳ ವರದಿ:**

ಕಂದಾಯ ದಾಖಲೆ 'ಪಹಣಿ' ಆಧಾರದ ಮೇಲೆ ವಾರ್ಷಿಕ ಋತು ಮತ್ತು ಬೆಳೆಗಳ ಅಂಕಿ ಅಂಶಗಳ ವರದಿಯನ್ನು ಸಿದ್ಧಪಡಿಸಲಾಗುತ್ತದೆ. ಭೂ ವರ್ಗೀಕರಣ ಪ್ರದೇಶ, ನೀರಾವರಿ ಮೂಲವಾರು ಪ್ರದೇಶ, ನೀರಾವರಿಯಾದ ಬೆಳೆಗಳ ಪ್ರದೇಶ, ಋತುವಾರು, ತಳಿವಾರು ಬಿತ್ತನೆಯಾಗಿರುವ ಪ್ರದೇಶಗಳ ಮಾಹಿತಿಯನ್ನು ಒದಗಿಸುವುದು ಇದರ ಮೂಲ ಉದ್ದೇಶವಾಗಿರುತ್ತದೆ. 2017–18ನೇ ಸಾಲಿನ ವಾರ್ಷಿಕ ಋತು ಮತ್ತು ಬೆಳೆಗಳ ಅಂಕಿ ಅಂಶಗಳ ವರದಿ ಸಿದ್ಧಪಡಿಸಿ ಭಾರತ ಸರ್ಕಾರಕ್ಕೆ ಕಳುಹಿಸಲಾಗಿದೆ. 2018–19ನೇ ಸಾಲಿನ ವಾರ್ಷಿಕ ಋತು ಮತ್ತು ಬೆಳೆಗಳ ಅಂಕಿ ಅಂಶಗಳ ವರದಿಯನ್ನು ಸಿದ್ಧಪಡಿಸುವ ಕಾರ್ಯ ಪ್ರಗತಿಯಲ್ಲಿದೆ.

**ಪೂರ್ಣ ಪರಿಷ್ಕೃತ ಅಂದಾಜು:**

ರಾಜ್ಯದ ಪ್ರಮುಖ ಬೆಳೆಗಳ ಕ್ಷೇತ್ರ, ಇಳುವರಿ ಹಾಗೂ ಉತ್ಪಾದನಾ ಅಂದಾಜುಗಳನ್ನು ಸಿದ್ಧಪಡಿಸುವ ಕಾರ್ಯ 1955 ರಿಂದ ಜಾರಿಯಲ್ಲಿದ್ದು, 2015–16ನೇ ಸಾಲಿನ ಪೂರ್ಣ ಪರಿಷ್ಕೃತ ಅಂದಾಜು ವರದಿಯನ್ನು ಸಿದ್ಧಪಡಿಸಿ ಪ್ರಕಟಿಸಲಾಗಿದೆ. ಈ ವರದಿಯಲ್ಲಿ 61 ಪ್ರಮುಖ ಬೆಳೆಗಳ ವಿವರಗಳು ಲಭ್ಯವಿರುತ್ತದೆ. 2016–17ರ ವರದಿಯನ್ನು ಸಿದ್ಧಪಡಿಸುವ ಕಾರ್ಯ ಪ್ರಗತಿಯಲ್ಲಿದೆ.

**ರೈತ ಸಂಪರ್ಕ ಪದ್ಧತಿ:**

ಬೆಳೆ ಅಂದಾಜು ಸಮೀಕ್ಷೆಯಲ್ಲಿ ಒಳಗೊಳ್ಳದ 20 ಬೆಳೆಗಳಲ್ಲಿ, 17 ಬೆಳೆಗಳಿಗೆ ರೈತ ಸಂಪರ್ಕದ ಮುಖಾಂತರ (Oral Enquiry Method) ಇಳುವರಿಯನ್ನು ಅಂದಾಜಿಸಲು ಸಮೀಕ್ಷೆ ಕೈಗೊಳ್ಳಲಾಗಿದೆ. 2016–17ನೇ ಸಾಲಿನ ವರದಿಯನ್ನು ಸಿದ್ಧಪಡಿಸಲಾಗಿದೆ, 2017–18ನೇ ಸಾಲಿನ ಕಾರ್ಯವು ಪ್ರಗತಿಯಲ್ಲಿದೆ.

**ಪ್ರಮುಖ ಬೆಳೆಗಳ ಸಕಾಲಿಕ ವರದಿ ಯೋಜನೆ – ಕೇಂದ್ರ ವಲಯ ಯೋಜನೆ.**

**ಆಯವ್ಯಯ ಶೀರ್ಷಿಕೆ** : 3454–02–205–0–04

ಕೃಷಿ ಅಂಕಿ ಅಂಶಗಳ ಗುಣಮಟ್ಟ, ವಿಶ್ವಾಸನೀಯತೆ ಹಾಗೂ ಸಮಯಪಾಲನೆಯನ್ನು ಸುಧಾರಿಸುವ ಸಲುವಾಗಿ ಮತ್ತು ಬಿತ್ತನೆ ಹಾಗೂ ಸುಗ್ಗಿಯ ಕಾಲದ ಮಧ್ಯದಲ್ಲಿ ಪ್ರಮುಖ ಬೆಳೆಗಳ ಉತ್ಪಾದನೆಯ ಅಂದಾಜುಗಳ ವಿವರಗಳನ್ನು ಪಡೆಯುವಲ್ಲಿ ಆಗುವ ವಿಳಂಬವನ್ನು ಕಡಿಮೆ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಈ ಯೋಜನೆಯಲ್ಲಿ ಮುಖ್ಯ ಬೆಳೆಗಳಾದ ಭತ್ತ, ಜೋಳ, ಸಜ್ಜೆ, ಮೆಕ್ಕೆಜೋಳ, ರಾಗಿ, ಗೋಧಿ, ತೊಗರಿ, ಕಡಲೆ, ಕಬ್ಬು, ಹತ್ತಿ, ನೆಲಗಡಲೆ, ಎಳ್ಳು, ಸೂರ್ಯಕಾಂತಿ, ಕುಸುಬೆ ಮತ್ತು ಅಗಸೆ ಬೆಳೆಗಳ ವಿಸ್ತೀರ್ಣವನ್ನು ಅಂದಾಜು ಮಾಡಲಾಗುತ್ತದೆ.

2018–19ನೇ ಸಾಲಿಗೆ ರೂ 574.61 ಲಕ್ಷಗಳನ್ನು ನಿಗದಿಪಡಿಸಲಾಗಿದ್ದು ಇದರಲ್ಲಿ ರೂ 418.79 ಲಕ್ಷಗಳನ್ನು ವೆಚ್ಚಮಾಡಲಾಗಿದೆ. ಹಣಕಾಸು ವಿವರಣೆಯನ್ನು ಈ ಕೆಳಗೆ ನೀಡಲಾಗಿದೆ.

| ಬಂಡವಾಳ 2016-17 | ರಾಜಸ್ವ 2017-18 | ವೆಚ್ಚ 2018-19 | |
|---|---|---|---|
| (1) | (2) | (3) | (4) |
| ಅಂದಾಜು | ವೆಚ್ಚ | ಅಂದಾಜು | ವೆಚ್ಚ |
| 304.76 | 430.00 | 574.61 | 418.79 |

- 2018–19ನೇ ಸಾಲಿನಲ್ಲಿ ಒಟ್ಟು 5856 ಗ್ರಾಮಗಳನ್ನು ಆರಿಸಲಾಗಿದೆ. ಸಕಾಲದಲ್ಲಿ ಬೆಳೆಗಳ ಎಣಿಕೆ ನಡೆಸಿ, ಮುಂಗಾರು ಋತುವಿನಲ್ಲಿ 5856 ಗ್ರಾಮಗಳ ಫಸಲು ಘೋಷ್ವಾರೆಗಳನ್ನು ಸ್ವೀಕರಿಸಲಾಗಿದೆ.
- 2018–19ನೇ ಸಾಲಿನ ಮುಂಗಾರು ಋತುವಿನ ಅಂದಾಜು ವಿಸ್ತೀರ್ಣ ವರದಿಯನ್ನು ತಯಾರಿಸಿ ಭಾರತ ಸರ್ಕಾರಕ್ಕೆ ಕಳುಹಿಸಿದೆ.
- 2017–18ನೇ ಸಾಲಿನ "ಕರ್ನಾಟಕ ರಾಜ್ಯದ ಮುಖ್ಯ ಬೆಳೆಗಳ ಅಂದಾಜು ವಿಸ್ತೀರ್ಣ ವರದಿ"ಯನ್ನು ತಯಾರಿಸಲಾಗಿದೆ.

**ಬೆಳೆ ಅಂಕಿ ಅಂಶಗಳ ಅಭಿವೃದ್ಧಿ – ಕೇಂದ್ರ ವಲಯ ಯೋಜನೆ**

**ಆಯವ್ಯಯ ಶೀರ್ಷಿಕೆ** : 3454–02–205–0–05

ಬೆಳೆ ಕ್ಷೇತ್ರ ಎಣಿಕೆ ಮತ್ತು ಬೆಳೆ ಕಟಾವು ಪ್ರಯೋಗಗಳನ್ನು ಕ್ರಮಬದ್ಧವಾಗಿ ನಡೆಸುವ ಬಗ್ಗೆ ತನಿಖೆಗಳನ್ನು ಕೈಗೊಂಡು ಕೃಷಿ ಅಂಕಿ ಅಂಶಗಳ ಬಗ್ಗೆ ಸಂಗ್ರಹಿಸುವ ಮಾಹಿತಿಯ ಗುಣಮಟ್ಟವನ್ನು ಸುಧಾರಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

ಪ್ರತಿ ಸಾಲಿನಲ್ಲಿ ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ತಮ್ಮ ತಾಂತ್ರಿಕ ಸಿಬ್ಬಂದಿಯಿಂದ ಪ್ರತಿ ಋತುವಿಗೆ ಕೇಂದ್ರ ಮಾದರಿ ಮತ್ತು ರಾಜ್ಯ ಮಾದರಿ ಗ್ರಾಮಗಳು ಎಂದು ಪ್ರತ್ಯೇಕವಾಗಿ ಆರಿಸಿ, ಈ ಆರಿಸಿದ ಗ್ರಾಮಗಳ ಮೇಲ್ವಿಚಾರಣಾ ಕಾರ್ಯಗಳನ್ನು ನಡೆಸಬೇಕಾಗಿರುತ್ತದೆ ಹಾಗೂ ಈ ಪದ್ಧತಿಯ ಶಾಶ್ವತ ಅಭಿವೃದ್ಧಿಗಾಗಿ ಕೆಳಕಂಡ ಪರಿಹಾರೋಪಾಯ ಕ್ರಮಗಳನ್ನು ಕೈಗೊಳ್ಳುವಂತೆ ಸಲಹೆ ನೀಡುತ್ತದೆ.

- ಗ್ರಾಮಲೆಕ್ಕಿಗರು ಬೆಳೆ ತನಿಖೆಯನ್ನು ಸಂಬಂಧಿಸಿದ ಗ್ರಾಮಗಳಲ್ಲಿ ಆಯಾ ಋತುಗಳಲ್ಲಿ ಕೈಗೊಂಡಿದ್ದಾರೆಯೆ ಎಂಬ ಕುರಿತು ?
- ಗ್ರಾಮಲೆಕ್ಕಿಗರು ಸಿದ್ಧಪಡಿಸಿರುವ ಬೆಳೆ ಘೋಷ್ವಾರೆಯು ಪಹಣಿ ಪುಸ್ತಕದಲ್ಲಿ ದಾಖಲಾಗಿರುವುದಕ್ಕೆ ಸರಿಹೊಂದುತ್ತದೆಯೇ?
- ಬೆಳೆ ಅಂದಾಜು ಸಮೀಕ್ಷೆ ಕಾರ್ಯದ ಮೂಲ ಕಾರ್ಯಕರ್ತರು ನಿಗದಿತ ಮಾರ್ಗಸೂಚಿಗಳಂತೆ ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಂಡಿದ್ದಾರೆಯೆ? ಎಂಬ ಕುರಿತು ಮೇಲ್ವಿಚಾರಣೆ ನಡೆಸುವ ಕಾರ್ಯಕ್ರಮ ಇದಾಗಿರುತ್ತದೆ.

2018–19ನೇ ಸಾಲಿಗೆ ರೂ 69.00 ಲಕ್ಷಗಳನ್ನು ನಿಗಧಿಪಡಿಸಲಾಗಿದ್ದು ಇದರಲ್ಲಿ ರೂ 66.87 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಹಣಕಾಸು ವಿವರಣೆಯನ್ನು ಈ ಕೆಳಗೆ ನೀಡಲಾಗಿದೆ.

| ಬಂಡವಾಳ 2016-17 | ರಾಜಸ್ವ 2017-18 | ವೆಚ್ಚ 2018-19 | |
|---|---|---|---|
| ಅಂದಾಜು | ವೆಚ್ಚ | ಅಂದಾಜು | ವೆಚ್ಚ |
| (1) | (2) | (3) | (4) |
| 49.93 | 303.00 | 93.14 | 66.87 |

**ಭೌತಿಕ ಸಾಧನೆ:**

- 2018–19ನೇ ಸಾಲಿಗೆ ಮುಂಗಾರು ಋತುವಿನ ಬೆಳೆ ಕ್ಷೇತ್ರ ಕಾರ್ಯ ಮುಗಿದಿದ್ದು, 300 ಗ್ರಾಮಗಳಿಗೆ 296 ಅನುಸೂಚಿಗಳು (ಎ.ಎಸ್ 1.0) ಸ್ವೀಕೃತವಾಗಿರುತ್ತದೆ.
- ಬೆಳೆ ಕ್ಷೇತ್ರ ಒಗ್ಗೂಡುವಿಕೆ (ಎ.ಎಸ್ 1.1) 300 ಗ್ರಾಮಗಳು ಆಯ್ಕೆಯಾಗಿದ್ದು, 285 (ಎ.ಎಸ್ 1.1) ಅನುಸೂಚಿಗಳು ಬಂದಿರುತ್ತದೆ.
- ಹಿಂಗಾರು ಋತುವಿನ ಬೆಳೆ ಕ್ಷೇತ್ರ ಕಾರ್ಯ ಮುಗಿದಿದ್ದು, 300 ಗ್ರಾಮಗಳಿಗೆ 249 ಅನುಸೂಚಿಗಳು (ಎ.ಎಸ್ 1.0) ಸ್ವೀಕೃತವಾಗಿರುತ್ತದೆ. ಮತ್ತು ಬೆಳೆ ಕ್ಷೇತ್ರ ಒಗ್ಗೂಡುವಿಕೆ 300 ಗ್ರಾಮಗಳಿಗೆ 204 (ಎ.ಎಸ್ 1.1) ಅನುಸೂಚಿಗಳು ಬಂದಿರುತ್ತದೆ.
- 620 (ಎ.ಎಸ್ 2.0) ಬೆಳೆ ಕಟಾವು ಪ್ರಯೋಗಗಳಲ್ಲಿ ಮುಂಗಾರು ಋತುವಿಗೆ 514 ಪ್ರಯೋಗಗಳು, ಹಿಂಗಾರು ಋತುವಿಗೆ ಒಟ್ಟು ಪ್ರಯೋಗಗಳಿಗೆ 78 ಪ್ರಯೋಗಗಳು ಕಟಾವು ಹಂತದಲ್ಲಿ ಮೇಲ್ವಿಚಾರಣೆಯಾಗಿ ವರದಿ ಬಂದಿರುತ್ತದೆ.

## ಹಣ್ಣು, ತರಕಾರಿ ಮತ್ತು ಉಪಬೆಳೆಗಳ ಅಂದಾಜು ಸಮೀಕ್ಷೆ

**ಆಯವ್ಯಯ ಶೀರ್ಷಿಕೆ :** 3454–02–205–0–08

ರಾಜ್ಯದಲ್ಲಿ ಬೆಳೆಯಲಾಗುವ ಆಯ್ದ ಪ್ರಮುಖ ಹಣ್ಣು ಮತ್ತು ತರಕಾರಿ ಬೆಳೆಗಳ ಕ್ಷೇತ್ರ, ಉತ್ಪಾದನೆ ಹಾಗೂ ಇಳುವರಿ ವಿವರಗಳನ್ನು ಅಂದಾಜಿಸುವುದು ಈ ಯೋಜನೆಯ ಮುಖ್ಯ ಉದ್ದೇಶ. ಈ ಸಮೀಕ್ಷೆಯು ಹಣ್ಣಿನ ಬೆಳೆಗಳಾದ ಮಾವು, ಬಾಳೆ, ದ್ರಾಕ್ಷಿ, ಸೀಬೆ, ಸಪೋಟ, ನಿಂಬೆ ಮತ್ತು ದಾಳಿಂಬೆಗಳನ್ನು ಒಳಗೊಂಡಿರುತ್ತದೆ. ಸಮೀಕ್ಷೆಯಡಿ ತೆಗೆದುಕೊಂಡ ಬೆಳೆಗಳ ಕ್ಷೇತ್ರ, ಇಳುವರಿ ಮತ್ತು ಉತ್ಪಾದನೆಗಳನ್ನು ಅಂದಾಜಿಸುವುದು.

2018–19ನೇ ಸಾಲಿಗೆ ರೂ 310.00 ಲಕ್ಷಗಳನ್ನು ನಿಗದಿಪಡಿಸಲಾಗಿದ್ದು, ಇದರಲ್ಲಿ ರೂ 322.22 ಲಕ್ಷಗಳನ್ನು ವೆಚ್ಚಮಾಡಲಾಗಿದೆ. ಹಣಕಾಸು ವಿವರಣೆಯನ್ನು ಈ ಕೆಳಗೆ ನೀಡಲಾಗಿದೆ.

| ಬಂಡವಾಳ 2016-17 | ರಾಜಸ್ವ 2017-18 | ವೆಚ್ಚ 2018-19 | |
|---|---|---|---|
| (1) | (2) | (3) | (4) |
| ಅಂದಾಜು | ವೆಚ್ಚ | ಅಂದಾಜು | ವೆಚ್ಚ |
| 202.98 | 286.00 | 405.08 | 322.22 |

- ಸಾಧನೆ: 2018–19ನೇ ಸಾಲಿನಲ್ಲಿ 1252 ಗ್ರಾಮಗಳನ್ನು ಹಣ್ಣು ಬೆಳೆಗಳ ಕ್ಷೇತ್ರ ಗಣತಿ ಮತ್ತು ಇಳುವರಿ ಅಂದಾಜು ಸಮೀಕ್ಷೆಗೆ ಆಯ್ಕೆ ಮಾಡಲಾಗಿದೆ.

ಇಲ್ಲಿಯವರೆಗೆ ಪ್ರಸ್ತುತ ಹಣ್ಣಿನ ಬೆಳೆಗಳ 1140 ಕ್ಷೇತ್ರ ಗಣತಿ ಹಾಗೂ 610 ಇಳುವರಿ ಸಮೀಕ್ಷೆಯ ನಮೂನೆಗಳು ಸ್ವೀಕೃತವಾಗಿರುತ್ತದೆ.

**ರಾಜ್ಯಾದಾಯ ಅಂದಾಜುಗಳು ಕೈಗಾರಿಕೆ ಮತ್ತು ಬೆಲೆ, ಕಂಬಳ ಸೂಚ್ಯಂಕ:**

**ರಾಜ್ಯ ಆದಾಯ**

**ರಾಜ್ಯಾದಾಯ ಅಂದಾಜುಗಳು:**

ರಾಜ್ಯಾದಾಯ ಅಂದಾಜುಗಳು ಹಾಗೂ ರಾಜ್ಯ ತಲಾವಾರು ಆದಾಯ ಅಂದಾಜುಗಳ ಸೂಚಿಯು ರಾಜ್ಯದ ಆರ್ಥಿಕ ಸ್ಥಿತಿಯನ್ನು ಪ್ರತಿನಿಧಿಸುತ್ತದೆ. ಇದು ರಾಜ್ಯದ ಒಟ್ಟು ಉತ್ಪನ್ನ ಅಂದರೆ ಉತ್ಪನ್ನ ಮಾಡಲಾದ ಎಲ್ಲಾ ಸರಕು ಹಾಗೂ ಸೇವೆಗಳ ಖರೀದಿ ಮತ್ತು ವ್ಯಕ್ತಿಗಳು, ಸಂಸ್ಥೆಗಳು, ವಿದೇಶಿಯರು ಮತ್ತು ಆಡಳಿತ ಮಂಡಳಿಗಳು ಬಳಸುವ ಸೇವೆಗಳನ್ನು ಒಳಗೊಂಡಿರುತ್ತದೆ. ಅಂತರ ರಾಜ್ಯಗಳಲ್ಲಿರುವ ವ್ಯತ್ಯಾಸಗಳನ್ನು ಹಾಗೂ ಸರ್ಕಾರದ ವಿವಿಧ ವಿಕಾಸ ಕಾರ್ಯಕ್ರಮಗಳನ್ನು ತಿಳಿಯಲು ಈ ಅಂದಾಜುಗಳು ಅಳತೆಗೋಲುಗಳಾಗಿ ಉಪಯುಕ್ತವಾಗುತ್ತವೆ. ಕಾಲ ಕಾಲದಲ್ಲಿ ರಾಜ್ಯದ ಆರ್ಥಿಕ ವ್ಯವಸ್ಥೆಯ ಸಾಮರ್ಥ್ಯ ಹಾಗು ದುರ್ಬಲತೆಗಳನ್ನು ತಿಳಿದುಕೊಳ್ಳಲು ಈ ಸೂಚ್ಯಂಕಗಳು ಸಹಕಾರಿಯಾಗುತ್ತವೆ.

ಒಂದು ರಾಜ್ಯದ ಭೌಗೋಳಿಕ ವ್ಯಾಪ್ತಿಯೊಳಗೆ ಉತ್ಪಾದನೆ ಮಾಡಲಾದ ಎಲ್ಲಾ ಸರಕು ಹಾಗೂ ಸೇವೆಗಳ ಆರ್ಥಿಕ ಮೌಲ್ಯವನ್ನು ಪುನರಾವರ್ತಿಸದೆ ಒಂದು ನಿರ್ದಿಷ್ಟ ಅವಧಿಯಲ್ಲಿ (ಸಾಮಾನ್ಯವಾಗಿ ಹಣಕಾಸು ವರ್ಷ) ಒಟ್ಟು ಗೂಡಿಸುವುದನ್ನು ರಾಜ್ಯದ ಆಂತರಿಕ ಉತ್ಪನ್ನ ಎಂದು ಹೇಳಬಹುದು.

ರಾಜ್ಯಮಟ್ಟದಲ್ಲಿ ರಾಜ್ಯಾದಾಯವನ್ನು ಅಂದಾಜು ಮಾಡಲು ಆದಾಯ ಉತ್ಪನ್ನದ ಮೂಲವನ್ನು ಪರಿಗಣಿಸಲಾಗುವುದು. ರಾಜ್ಯಾದಾಯ ಗಣನೆಗಾಗಿ ಅರ್ಥವ್ಯವಸ್ಥೆಯನ್ನು ಪ್ರಧಾನವಾಗಿ 1) ಪ್ರಾಥಮಿಕ ವಲಯ 2) ದ್ವಿತೀಯ ವಲಯ ಮತ್ತು 3) ತೃತೀಯ ವಲಯ ಎಂದು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ.

ರಾಜ್ಯಾದಾಯ ಅಂದಾಜುಗಳನ್ನು ಪ್ರತಿವರ್ಷವು 4 ಹಂತಗಳಲ್ಲಿ ತಯಾರಿಸಲಾಗುವುದು. 2018–19ನೇ ಸಾಲಿಗೆ ಮುನ್ಸೂಚನಾ ಅಂದಾಜುಗಳು, 2017–18ನೇ ಸಾಲಿಗೆ ಪ್ರಥಮ ಪರಿಷ್ಕೃತ ಅಂದಾಜುಗಳು, 2016–17ನೇ ಸಾಲಿಗೆ ದ್ವಿತೀಯ ಪರಿಷ್ಕೃತ ಅಂದಾಜುಗಳು ಮತ್ತು 2015–16 ಸಾಲುಗಳ ಮರುಹೊಂದಾಣಿಕೆ ಅಂದಾಜುಗಳನ್ನು ತಯಾರಿಸಲಾಯಿತು.

**ಜಿಲ್ಲಾದಾಯ ಅಂದಾಜುಗಳು:**

ಜಿಲ್ಲಾದಾಯ ಅಂದಾಜುಗಳು ರಾಜ್ಯಾದಾಯದ ಅಂದಾಜುಗಳಷ್ಟೇ ಮಹತ್ವವಾದದ್ದು, ರಾಜ್ಯಾದಾಯ ಅಂದಾಜುಗಳನ್ನು ದೇಶದ ವಿವಿಧ ರಾಜ್ಯಗಳ ಮಧ್ಯೆ ಇರುವ ವ್ಯತ್ಯಾಸವನ್ನು ಗುರುತಿಸಲು ಉಪಯೋಗಿಸಿದರೆ, ಜಿಲ್ಲಾದಾಯ ಅಂದಾಜುಗಳನ್ನು ರಾಜ್ಯದ ವಿವಿಧ ಜಿಲ್ಲೆಗಳ ಮಧ್ಯೆ ಇರುವ ಏರುಪೇರುಗಳನ್ನು ಸೂಚಿಸಲು ಬಳಸಬಹುದು. ಇದರಿಂದ ಹಿಂದುಳಿದ ಜಿಲ್ಲೆಗಳಿಗೆ ಆದ್ಯತೆ ನೀಡಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲು ಸಹಕಾರಿಯಾಗುತ್ತದೆ.

ಜಿಲ್ಲಾದಾಯ ಅಂದಾಜುಗಳನ್ನು ರಾಜ್ಯದಾಯ ಅಂದಾಜುಗಳನ್ನು ತಯಾರಿಸುವ ರೀತಿಯಲ್ಲೆ ತಯಾರಿಸಲಾಗುತ್ತಿದೆ. 2016–17ನೇ ಸಾಲಿನ ಜಿಲ್ಲಾದಾಯವನ್ನು ಪ್ರಸಕ್ತ ಹಾಗೂ ಸ್ಥಿರ (2011–12) ಬೆಲೆಗಳ ಆಧಾರದ ಮೇಲೆ ತಯಾರಿಸಲಾಗಿದೆ.

**ರಾಜ್ಯ ಆಂತರಿಕ ಉತ್ಪನ್ನದ ಹೋಲಿಕೆ ಅಂದಾಜುಗಳು:**

ಪ್ರತಿ ವರ್ಷವು ಲೆಕ್ಕದ ವಿವರಗಳು ಲಭ್ಯವಿರುವ ವರ್ಷದ ರಾಜ್ಯಾದಾಯ ಅಂದಾಜುಗಳನ್ನು ಕೇಂದ್ರ ಸಾಂಖ್ಯಿಕ ಸಂಸ್ಥೆಯ ಅಂದಾಜುಗಳೊಂದಿಗೆ ಪರಿಷ್ಕರಿಸಲಾಗುತ್ತಿದೆ. 2018–19ನೇ ಸಾಲಿನಲ್ಲಿ 2016–17 ಮತ್ತು 2017–18ನೇ ಸಾಲುಗಳ ರಾಜ್ಯ ಆಂತರಿಕ ಉತ್ಪನ್ನದ ಅಂದಾಜುಗಳ ಬಗ್ಗೆ ಕೇಂದ್ರ ಸಾಂಖ್ಯಿಕ ಕಚೇರಿಯವರೊಂದಿಗೆ ಚರ್ಚಿಸಲಾಗಿದ್ದು, ಅದರಂತೆ, 2011–12 ರಿಂದ 2018–19 ರ ವರೆಗಿನ ರಾಜ್ಯ ಆಂತರಿಕ ಉತ್ಪನ್ನದ ಅಂದಾಜುಗಳನ್ನು ಪರಿಷ್ಕರಿಸಲಾಗಿದೆ.

**ರಾಜ್ಯ ಆಯವ್ಯಯದ ವಿಶ್ಲೇಷಣೆ:**

ಪ್ರತಿ ವರ್ಷ ರಾಜ್ಯದ ವಿಧಾನಮಂಡಲದಲ್ಲಿ ಮಂಡಿಸುವ ರಾಜ್ಯ ಸರ್ಕಾರದ ಆಯವ್ಯಯವು ರಾಜ್ಯದ ಆಡಳಿತಾತ್ಮಕ, ಆದಾಯ ಮತ್ತು ವೆಚ್ಚದ ವಿವರಗಳನ್ನು ಒಳಗೊಂಡಿರುತ್ತದೆ. ಆಯವ್ಯಯದಲ್ಲಿ ಪ್ರತಿ ಹಣಕಾಸು ವರ್ಷಕ್ಕೆ ಸಂಬಂಧಪಟ್ಟಂತೆ, ಇಲಾಖಾವಾರು ಸ್ವೀಕೃತಿ, ವೆಚ್ಚ ಹಾಗೂ ಇಲಾಖಾ ವ್ಯವಹಾರಗಳಿಗೆ ಸಂಬಂಧಪಟ್ಟ ಹಣಕಾಸಿನ ವಿವರಗಳನ್ನು ನೀಡಲಾಗುತ್ತದೆ. ಆಂತರಿಕ ಉತ್ಪನ್ನದಲ್ಲಿ ಸರ್ಕಾರದ ವಂತಿಕೆ ಹಾಗೂ ಆಯವ್ಯಯದ ವ್ಯವಹಾರಗಳ ಪ್ರಾಮುಖ್ಯತೆಯನ್ನು ತಿಳಿಯಲು ಆಯವ್ಯಯದ ಮರು ವರ್ಗೀಕರಣವು ಅನಿವಾರ್ಯವಾಗುತ್ತದೆ. ಆಯವ್ಯಯದ ಸಂಪನ್ಮೂಲಗಳಿಂದ, ಸರ್ಕಾರದ ಉಳಿತಾಯದಿಂದ ಮತ್ತು ರಾಜ್ಯಾದಾಯಕ್ಕೆ ಸರ್ಕಾರದ ಕೊಡುಗೆ ದೃಷ್ಟಿಯಿಂದ ಆಗುವ ಬಂಡವಾಳ ನಿರ್ಮಾಣವನ್ನು ತಿಳಿದುಕೊಳ್ಳಲು ಈ ಮರು ವರ್ಗೀಕರಣ ಮಾಡಲಾಗುತ್ತದೆ.

ಆಯವ್ಯಯದ ಅಂದಾಜುಗಳಿಗೆ ಅನುಗುಣವಾಗಿಯೇ ಸರ್ಕಾರದ ರಾಜಸ್ವ ಮತ್ತು ವೆಚ್ಚಗಳನ್ನು ಮಾಡಲಾಗುತ್ತದೆ. ಆರ್ಥಿಕ ವರ್ಗೀಕರಣದಲ್ಲಿ ಈ ವ್ಯವಹಾರಗಳನ್ನು ಪುನರ್ವರ್ಗೀಕರಿಸಿ ಪ್ರಮುಖವಾಗಿ ಮೂರು ನಿಶ್ಚಿತ ವರ್ಗಗಳನ್ನಾಗಿ ಮಾಡಲಾಗುತ್ತದೆ.

2018–19ನೇ ಸಾಲಿನಲ್ಲಿ, 2018–19ನೇ ಹಣಕಾಸು ವರ್ಷದ ರಾಜ್ಯ ಆಯವ್ಯಯವನ್ನು ವಿಶ್ಲೇಷಿಸಿ ಆರ್ಥಿಕ ಮತ್ತು ಉದ್ದೇಶಿತ ವರ್ಗೀಕರಣ ಮಾಡಲಾಗಿದೆ. ಇದರ ವಿವರಗಳನ್ನು ರಾಜ್ಯ ಆಂತರಿಕ ಉತ್ಪನ್ನದ ಅಂದಾಜುಗಳಲ್ಲಿ ಬಳಸಲಾಗಿದೆ.

**ಸರ್ಕಾರಿ ಸ್ವಾಮ್ಯ ಸಂಸ್ಥೆಗಳ ವಾರ್ಷಿಕ ಲೆಕ್ಕ ಪತ್ರಗಳು:**

2016–17 ಮತ್ತು 2017–18ನೇ ಸಾಲುಗಳ ಸರ್ಕಾರಿ ಸ್ವಾಮ್ಯ ಸಂಸ್ಥೆಗಳ ವಾರ್ಷಿಕ ಲೆಕ್ಕ ಪತ್ರಗಳನ್ನು ವಿಶ್ಲೇಷಿಸಿ, ಅದರ ವಿವರಗಳನ್ನು ರಾಜ್ಯ ಆಂತರಿಕ ಉತ್ಪನ್ನದ ಅಂದಾಜುಗಳಲ್ಲಿ ಬಳಸಲಾಗಿದೆ.

2011–12 ನೇ ಸಾಲಿನ ಪ್ರಸಕ್ತ ಬೆಲೆಗಳಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ, ನಿವ್ವಳ ಆಂತರಿಕ ಉತ್ಪನ್ನ ಹಾಗೂ ನಿವ್ವಳ ತಲಾದಾಯವು ಕ್ರಮವಾಗಿ ರೂ.6,06,010 ಕೋಟಿಗಳು, ರೂ.5,54,952 ಕೋಟಿಗಳು ಹಾಗೂ ರೂ.90,263 ಗಳಷ್ಟಿದ್ದು, 2018–19ನೇ ಸಾಲಿನಲ್ಲಿ ಇದು ಕ್ರಮವಾಗಿ ರೂ.15,10,250 ರೂ.13,73,218/– ಕೋಟಿಗಳು ಹಾಗೂ ರೂ.2,07,062/-ಗಳಷ್ಟಾಗಿದೆ. ಬೆಲೆಯ ಏರುಪೇರುಗಳನ್ನು ಪರಿಗಣಿಸದೆ ಸ್ಥಿರ (2011–12) ಬೆಲೆಗಳಲ್ಲಿ, ರೂ.10,82,534 ರೂ.9,73,653 ಹಾಗೂ ರೂ.1,46,814 ಕೋಟಿಗಳು ಗಳಷ್ಟಿದೆ. (ಕೋಷ್ಠಕ–1)

**ಕೋಷ್ಟಕ –1 : ಪ್ರಸಕ್ತ ಮತ್ತು ಸ್ಥಿರ (2011–12) ಬೆಲೆಗಳಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ,ನಿವ್ವಳ ಆಂತರಿಕ ಉತ್ಪನ್ನ ಹಾಗೂ ತಲಾದಾಯ**

| ವರ್ಷ | ಒಟ್ಟು ರಾಜ್ಯ ಆಂತರಿಕ ಉತ್ಪನ್ನಮಾರುಕಟ್ಟೆ ಬೆಲೆಗಳಲ್ಲಿ (ಕೋಟಿ ರೂ.ಗಳಲ್ಲಿ) | | ನಿವ್ವಳ ರಾಜ್ಯ ಆಂತರಿಕ ಉತ್ಪನ್ನ ಮಾರುಕಟ್ಟೆ ಬೆಲೆಗಳಲ್ಲಿ (ಕೋಟಿ ರೂ.ಗಳಲ್ಲಿ) | | ನಿವ್ವಳ ತಲಾದಾಯ (ರೂ.ಗಳಲ್ಲಿ) | |
|---|---|---|---|---|---|---|
| | ಪ್ರಸಕ್ತ ಬೆಲೆಗಳಲ್ಲಿ | ಸ್ಥಿರ (2011–12) ಬೆಲೆಗಳಲ್ಲಿ | ಪ್ರಸಕ್ತ ಬೆಲೆಗಳಲ್ಲಿ | ಸ್ಥಿರ (2011–12) ಬೆಲೆಗಳಲ್ಲಿ | ಪ್ರಸಕ್ತ ಬೆಲೆಗಳಲ್ಲಿ | ಸ್ಥಿರ (2011–12) ಬೆಲೆಗಳಲ್ಲಿ |
| 2011–12 | 606010 | 606010 | 554952 | 554952 | 90263 | 90263 |
| 2012–13 | 695413 | 643033 | 635924 | 586552 | 102319 | 94375 |
| 2013–14 | 816666 | 704466 | 746569 | 639940 | 118829 | 101858 |
| 2014–15 | 913923 | 748429 | 825782 | 671283 | 130024 | 105697 |
| 2015–16 | 1045182 | 831449 | 950880 | 750071 | 148110 | 116832 |
| 2016–17 ದ್ವಿ.ಪ.ಅಂ. | 1155912 | 894697 | 1050874 | 804977 | 161922 | 124033 |
| 2017–18 ಪ್ರ.ಪ.ಅಂ. | 1325443 | 987832 | 1205426 | 888640 | 183737 | 135451 |
| 2018–19 ಮು.ಅಂ. | 1510250 | 1082534 | 1373218 | 973653 | 207062 | 146814 |

**ಮು.ಅಂ.: ಮುನ್ಸೂಚನಾ ಅಂದಾಜುಗಳು; ಪ್ರ.ಪ.ಅಂ. : ಪ್ರಥಮ ಪರಿಷ್ಕೃತ ಅಂದಾಜುಗಳು; ದ್ವಿ.ಪ.ಅಂ. : ದ್ವಿತೀಯ ಪರಿಷ್ಕೃತ ಅಂದಾಜುಗಳು.*

2018–19 ರಲ್ಲಿ ಒಟ್ಟು ರಾಜ್ಯ ಆಂತರಿಕ ಉತ್ಪನ್ನದ ಬೆಳವಣಿಗೆಯು 2017–18ರ ಸ್ಥಿರ ಬೆಲೆಗೆ ಹೋಲಿಸಿದಾಗ 9.6 ರಷ್ಟು ಇದೆ. ಪ್ರಾಥಮಿಕ ವಲಯದಲ್ಲಿ ಶೇ. –4.4, ದ್ವಿತೀಯ ವಲಯದಲ್ಲಿ ಶೇ.7.7 ಹಾಗೂ ತೃತೀಯ ವಲಯದಲ್ಲಿ ಶೇ.12.3 ಒಟ್ಟಾರೆ ಬೆಳವಣಿಗೆಯಾಗಿದೆ. ಸಾರ್ವಜನಿಕ ಆಡಳಿತ (21.4%) ಇತರೆ ಸೇವೆಗಳು (14.4%) ಸ್ಥಿರಾಸ್ತಿ, ವೃತ್ತಿ ಪರ ಸೇವೆಗಳು ಮತ್ತು ವಾಸಗೃಹಗಳ ಒಡೆತನ (12.9%), ಸಂಪರ್ಕ (8.1%), ಮತ್ತು ಹಣಕಾಸು ಸೇವೆಗಳು (6.8%) ವಲಯಗಳ ಬೆಳವಣಿಗೆಯು ಸೇವಾವಲಯದ ಈ ಸಾಧನೆಗೆ ಕಾರಣವೆನ್ನಬಹುದಾಗಿದೆ. (ಕೋಷ್ಟಕ–2)

**ಕೋಷ್ಟಕ –2 : ಸ್ಥಿರ (2011–12) ಬೆಲೆಗಳಲ್ಲಿ 2017–18 ಮತ್ತು 2018–19 ನೇ ಸಾಲುಗಳಿಗೆ ಕರ್ನಾಟಕ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆ ದರಗಳು**

| ಕ್ರ ಸಂ | ವಲಯಗಳು | 2017–18 ಪ್ರ.ಪ.ಅಂ. | 2018–19 ಮು.ಅಂ. |
|---|---|---|---|
| 1 | ಕೃಷಿ | 17.6 | –9.3 |
| 2 | ಜಾನುವಾರು | 7.5 | 7.5 |
| 3 | ಅರಣ್ಯ ಮತ್ತು ಮರಗೆಲಸ | –0.8 | –2.1 |
| 4 | ಮೀನುಗಾರಿಕೆ | 22.3 | 4.7 |
| 5 | ಗಣಿ ಮತ್ತು ಕಲ್ಲು ಅಗೆತ | –28.7 | 0.7 |
| | **ಪ್ರಾಥಮಿಕ ವಲಯ** | **8.7** | **–4.4** |
| 6 | ತಯಾರಿಕೆ | 6.9 | 6.8 |
| 7 | ವಿದ್ಯುಚ್ಛಕ್ತಿ, ಅನಿಲ ಮತ್ತು ನೀರು ಸರಬರಾಜು | 6.1 | 12.5 |
| 8 | ನಿರ್ಮಾಣ ಕಾರ್ಯ | 5.2 | 8.8 |
| | **ದ್ವಿತೀಯ ವಲಯ** | **6.4** | **7.7** |
| 9 | ವ್ಯಾಪಾರ ಮತ್ತು ದುರಸ್ಥಿ ಸೇವೆಗಳು | 16.2 | 14.1 |
| 10 | ವಸತಿ ಮತ್ತು ಉಪಹಾರ ಗೃಹಗಳು | 8.6 | 7.7 |
| 11 | ರೈಲ್ವೆ | 8.0 | 6.9 |
| 12 | ರಸ್ತೆ ಸಾರಿಗೆ | 9.1 | 7.3 |
| 13 | ಜಲ ಸಾರಿಗೆ | 12.0 | 4.3 |
| 14 | ವಾಯು ಸಾರಿಗೆ | 12.2 | 8.9 |

| ಕ್ರ ಸಂ | ವಲಯಗಳು | 2017–18 ಪ್ರ.ಪ.ಅಂ. | 2018–19 ಮು.ಅಂ. |
|---|---|---|---|
| 15 | ಸಾರಿಗೆ ಪೂರಕ ಸೇವೆಗಳು | 4.7 | 14.4 |
| 16 | ದಾಸ್ತಾನು | 7.5 | 5.9 |
| 17 | ಸಂಪರ್ಕ | 10.6 | 8.1 |
| 18 | ಹಣಕಾಸು ಸೇವೆಗಳು | 6.6 | 6.8 |
| 19 | ಸ್ಥಿರಾಸ್ತಿ, ವೃತ್ತಿ ಪರ ಸೇವೆಗಳು ಮತ್ತು ವಾಸಗೃಹಗಳ ಒಡೆತನ | 13.4 | 12.9 |
| 20 | ಸಾರ್ವಜನಿಕ ಆಡಳಿತ | 10.4 | 21.4 |
| 21 | ಇತರೆ ಸೇವೆಗಳು | 10.7 | 14.4 |
| | **ತೃತೀಯ/ಸೇವಾ ವಲಯ** | **12.2** | **12.3** |
| | **ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಮೂಲ ಬೆಲೆಯಲ್ಲಿ)** | **10.3** | **9.4** |
| | **ಉತ್ಪನ್ನ ತೆರಿಗೆಗಳು** | **11.2** | **10.8** |
| | **ಉತ್ಪನ್ನ ಸಬ್ಸಿಡಿಗಳು** | **11.5** | **9.1** |
| | **ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಮಾರುಕಟ್ಟೆ ಬೆಲೆಯಲ್ಲಿ)** | **10.4** | **9.6** |

** ಮು.ಅಂ. : ಮುನ್ಸೂಚನಾ ಅಂದಾಜುಗಳು; ಪ್ರ.ಪ.ಅಂ. : ಪ್ರಥಮ ಪರಿಷ್ಕೃತ ಅಂದಾಜುಗಳು*

ರಾಜ್ಯದ ಆದಾಯ ಮೂಲಗಳ ಪೈಕಿ ತೆರಿಗೆ ಆದಾಯವು ಹೆಚ್ಚಿನ ಪಾಲನ್ನು ಹೊಂದಿದ್ದು, ಇದು 2011–12ರಲ್ಲಿ ರೂ.46371 ಕೋಟಿಗಳಿದ್ದು, 2018–19ರ ಆಯವ್ಯಯದ ಅಂದಾಜಿನಂತೆ ಶೇ.142 ರಷ್ಟು ಬೆಳವಣಿಗೆಯೊಂದಿಗೆ ರೂ.112275 ಕೋಟಿಗಳಾಗಬಹುದೆಂದು ಅಂದಾಜಿಸಲಾಗಿದೆ. ಇದೇ ರೀತಿ ರಾಜ್ಯದ ಒಟ್ಟು ವೆಚ್ಚವನ್ನು ಗಮನಿಸಿದಾಗ ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆಗೊಳ್ಳುವ ಅನುದಾನವು ಹೆಚ್ಚಾಗಿರುತ್ತದೆ. ಇದು 2011–12ರಲ್ಲಿ 21823 ಕೋಟಿ ರೂ.ಗಳಿದ್ದು, ಶೇ.107 ರಷ್ಟು ಬೆಳವಣಿಗೆಯೊಂದಿಗೆ 2018–19ರ ಅಂತ್ಯಕ್ಕೆ 45322 ಕೋಟಿ ರೂ.ಗಳಾಗಬಹುದೆಂದು ಅಂದಾಜಿಸಲಾಗಿದೆ. ಸರ್ಕಾರವು ನೌಕರರಿಗೆ ಕೊಡುವ ವೇತನ ಭತ್ಯಗಳು, ಪಿಂಚಣಿ, ಆಸ್ತಿ ನಿರ್ವಹಣೆ ವೆಚ್ಚ ಹಾಗೂ ಇತರೆ ಸೇವಾ ವೆಚ್ಚಗಳನ್ನು ಬಳಕೆ ವೆಚ್ಚವೆಂದು ಪರಿಗಣಿಸಲಾಗಿದೆ. ಇದು 2011–12 ಮತ್ತು 2018–19ರ ಅವಧಿಯಲ್ಲಿ ಶೇ.210 ರಷ್ಟು ಬೆಳವಣಿಗೆಯೊಂದಿಗೆ ರೂ. 14706 ಕೋಟಿಗಳಿಂದ ರೂ.45701 ಕೋಟಿಗಳಾಗಬಹುದೆಂದು ಅಂದಾಜಿಸಲಾಗಿದೆ. **(ಕೋಷ್ಟಕ–3)**

**ಕೋಷ್ಟಕ – 3: ಆಡಳಿತ ಇಲಾಖೆಗಳ ಆದಾಯ ಮತ್ತು ಹಣ ಹೂಡುವ ಖಾತೆ**

ರೂ.ಕೋಟಿಗಳಲ್ಲಿ

| ವೆಚ್ಚ | 2011–12 (ಲೆಕ್ಕ) | 2012–13 (ಲೆಕ್ಕ) | 2013–14 (ಲೆಕ್ಕ) | 2014–15 (ಲೆಕ್ಕ) | 2015–16 (ಲೆಕ್ಕ) | 2016–17 (ಲೆಕ್ಕ) | 2017–18 (ಪ.ಅಂ) | 2018–19 (ಅ.ಅಂ) |
|---|---|---|---|---|---|---|---|---|
| 1. ಒಟ್ಟು ಬಳಕೆಯ ವೆಚ್ಚಗಳು | 14706 | 18759 | 22957 | 27393 | 30438 | 32469 | 39407 | 45701 |
| 2. ನಿವ್ವಳ ಬಡ್ಡಿ ಪಾವತಿ | 6254 | 7984 | 7983 | 9530 | 11970 | 12281 | 14627 | 16685 |
| 3. ಸಹಾಯ ಧನ | 7302 | 9193 | 11222 | 11182 | 13204 | 14184 | 16419 | 18638 |
| 4. ಒಟ್ಟು ಚಾಲ್ತಿ ವರ್ಗಾವಣೆ (ಅಂತರ ರಾಜ್ಯ ಹೊರೆತುಪಡಿಸಿ) | –3454 | –2273 | –593 | –1681 | –8862 | 2198 | 774 | 5549 |
| 5. ಒಟ್ಟು ಅಂತರ–ಸರ್ಕಾರ ವರ್ಗಾವಣೆಗಳು | 21823 | 24678 | 27505 | 32880 | 35356 | 38168 | 42759 | 45322 |
| **6. ಒಟ್ಟು ಪ್ರಸ್ತುತ ವೆಚ್ಚ (1+2+3+4+5)** | **46632** | **58342** | **69074** | **79304** | **82107** | **99300** | **113986** | **131895** |
| **7. ಚಾಲ್ತಿ ಖಾತೆಯ ಹೆಚ್ಚುವರಿ** | 10229 | 5932 | 5271 | 8778 | 11468 | 16689 | 11946 | 11918 |

| ಸ್ವೀಕೃತಿ | 2011–12 (ಲೆಕ್ಕ) | 2012–13 (ಲೆಕ್ಕ) | 2013–14 (ಲೆಕ್ಕ) | 2014–15 (ಲೆಕ್ಕ) | 2015–16 (ಲೆಕ್ಕ) | 2016–17 (ಲೆಕ್ಕ) | 2017–18 (ಪ.ಅಂ) | 2018–19 (ಅ.ಅಂ) |
|---|---|---|---|---|---|---|---|---|
| 1. ಉದ್ಯಮ ಮತ್ತು ಆಸ್ತಿಯಿಂದ ಆದಾಯ | 1836 | 2460 | 2326 | 3008 | 3491 | 3683 | 3956 | 4400 |
| 1.1 ಲಾಭ | | | | | | | | |
| 1.2 ಆಸ್ತಿಯಿಂದ ಆದಾಯ | 1836 | 2460 | 2326 | 3008 | 3491 | 3683 | 3956 | 4400 |
| 1.2.1 ನಿವ್ವಳ ಬಡ್ಡಿ ಸ್ವೀಕೃತಿ | 434 | 778 | 693 | 874 | 1292 | 1199 | 1310 | 1406 |
| 1.2.2 ಇತರೆ ಆಸ್ತಿಯ ಆದಾಯ | 1402 | 1682 | 1633 | 2134 | 2200 | 2483 | 2646 | 2994 |
| 2. ಒಟ್ಟು ತೆರಿಗೆ ಆದಾಯ | 46371 | 53643 | 62499 | 70081 | 75474 | 96032 | 99307 | 112275 |
| 2.1 ಆಮದು ಸುಂಕ | | | | | | | | |
| 2.2 ರಫ್ತು ಸುಂಕ | | | | | | | | |
| 2.3 ಉತ್ಪಾದನ ತೆರಿಗೆ | 5250 | 5486 | 6464 | 7348 | 8571 | 8254 | 9265 | 10583 |
| 2.4 ಉತ್ಪನ್ನ ತೆರಿಗೆ | 41121 | 48156 | 56035 | 62733 | 66903 | 87778 | 90041 | 101692 |
| 2.5 ಇತರೆ ವರ್ಗಾವಣೆ | | | | | | | | |
| 3. ಶುಲ್ಕ ಮತ್ತು ಇತರೆ ಆದಾಯಗಳು | 485 | 362 | 421 | 374 | 681 | 571 | 804 | 960 |
| 4. ಸಾರ್ವಜನಿಕ ಪ್ರಾಧಿಕಾರಗಳಿಂದಾದ ಒಟ್ಟು ವರ್ಗಾವಣೆ | 8168 | 7809 | 9099 | 14619 | 13929 | 15703 | 21866 | 26179 |
| **ಒಟ್ಟು ಸ್ವೀಕೃತಿ** | **56860** | **64274** | **74345** | **88082** | **93575** | **115989** | **125933** | **143814** |

**ಕೈಗಾರಿಕೆ:**

**ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ:**

ಕೈಗಾರಿಕಾ ಉತ್ಪಾದನಾ ಸ್ಥಾನಮಾನವನ್ನು ಅಳೆಯಲು ಕೈಗಾರಿಕಾ ಉತ್ಪಾದನಾ ಸೂಚ್ಯಂಕವು ಪ್ರಮುಖ ಸೂಚಕವಾಗಿರುತ್ತದೆ. ಉತ್ಪಾದನಾ ಮಾಹಿತಿಯನ್ನು ತ್ವರಿತಗತಿಯಲ್ಲಿ ನೀಡುವ ಸಲುವಾಗಿ ಸೂಚ್ಯಂಕವನ್ನು ತ್ರೈಮಾಸಿಕವಾಗಿ ಕಂಡು ಹಿಡಿದು ಇದರ ಕ್ರೋಢೀಕೃತ ವರದಿಯ ಆಧಾರದ ಮೇಲೆ ತಾತ್ಕಾಲಿಕ ವಾರ್ಷಿಕ ಸೂಚ್ಯಂಕವನ್ನು ಮತ್ತು ಕೇಂದ್ರಿಯ ಸಾಂಖ್ಯಿಕ ಕಛೇರಿ, ಕೋಲ್ಕತ್ತಾ ಇವರಿಂದ ವಾರ್ಷಿಕ ಕೈಗಾರಿಕಾ ಸಮೀಕ್ಷೆಯ ಮಾಹಿತಿಯು ಉಪಲಬ್ಧವಾದ ಮೇಲೆ ಅಂತಿಮವಾಗಿ ಸೂಚ್ಯಂಕವನ್ನು ತಯಾರಿಸಲಾಗುತ್ತಿದೆ.

**ಕೈಗಾರಿಕಾ ಉತ್ಪಾದನಾಸೂಚ್ಯಂಕದ ಉತ್ಪಾದನೆಯ ಪ್ರವೃತ್ತಿಗಳು:**

ಕರ್ನಾಟಕದಲ್ಲಿ ಖನಿಜ, ಉತ್ಪಾದನಾ ಹಾಗೂ ವಿದ್ಯುತ್ ವಲಯ ಒಳಗೊಂಡಂತೆ ಕೈಗಾರಿಕಾ ಉತ್ಪಾದನಾ ಸಾಮಾನ್ಯ ಸೂಚ್ಯಂಕವು 2018–19 ರಲ್ಲಿ 201.03 ಆಗಿದೆ. 2017–18 ಹಾಗೂ 2018–19ರಲ್ಲಿಯ ಸೂಚ್ಯಂಕಗಳನ್ನು ಆಧಾರ ವರ್ಷ 2004–05ಕ್ಕೆ ಈ ಕೆಳಕಂಡಂತೆ ನೀಡಲಾಗಿದೆ. ಕರ್ನಾಟಕದ ಸಂಘಟಿತ ಕೈಗಾರಿಕಾ ವಲಯದಲ್ಲಿ ಸಾಮಾನ್ಯ ಸೂಚ್ಯಂಕವು 2017–18ಕ್ಕೆ ಹೋಲಿಸಿದಾಗ 2018–19 ರಲ್ಲಿ ಶೇ. 4.03ರಷ್ಟು ವಾರ್ಷಿಕ ಬೆಳವಣಿಗೆಯನ್ನು ಸಾಧಿಸಿದೆ. ಈ ಸಂಘಟಿತ ಕೈಗಾರಿಕಾ ವಲಯದಲ್ಲಿ ವಿದ್ಯುತ್ ವಲಯ (ಶೇ.11.32)ರಷ್ಟು ಹೆಚ್ಚಿನ ಬೆಳವಣಿಗೆಯನ್ನು ದಾಖಲಿಸಿದ್ದು, ನಂತರದ ಸ್ಥಾನವನ್ನು ಗಣಿ ವಲಯ (ಶೇ.5.89)ರಷ್ಟು ಹಾಗೂ ತಯಾರಿಕಾ ವಲಯವು (ಶೇ.3.01)ರಷ್ಟು ಅತಿಕಡಿಮೆ ಬೆಳವಣಿಗೆ ಹೊಂದಿವೆ. **ಕೋಷ್ಟಕ 4 ರಲ್ಲಿ** ನೀಡಲಾಗಿದೆ.

**ಕೋಷ್ಟಕ 4: ಕೈಗಾರಿಕಾ ಉತ್ಪದನಾ ಸೂಚ್ಯಂಕ 2017–18 ಹಾಗೂ 2018–19**
**ಆಧಾರ ವರ್ಷ 2004–05**

| ವಲಯ | ಪ್ರಮಾಣ | 2017–18 | 2018–19 |
|---|---|---|---|
| 1. ಗಣಿ | 69.8321 | 79.52 (1.81) | 84.20 (5.89) |
| 2. ತಯಾರಿಕೆ* | 811.3591 | 204.34 (2.64) | 210.49 (3.01) |
| 3. ವಿದ್ಯುಚ್ಛಕ್ತಿ | 118.8089 | 184.24 (2.06) | 205.10 (11.32) |
| ಸಾಮಾನ್ಯ ಸೂಚ್ಯಂಕ | 1000.000 | 193.24 (2.55) | 201.03 (4.03) |

**ಟಿಪ್ಪಣಿ: 1) ಆವರಣಗಳಲ್ಲಿರುವ ಸಂಖ್ಯೆಗಳು ಹಿಂದಿನ ವರ್ಷಕ್ಕೆ ಹೋಲಿಸಿದಾಗ ಆದ ಶೇಕಡಾವಾರು ವ್ಯತ್ಯಾಸಗಳನ್ನು ಸೂಚಿಸುತ್ತವೆ**
**2) * ತಾತ್ಕಾಲಿಕ**

2018–19ರ ನಾಲ್ಕು ತ್ರೈಮಾಸಿಕ ಸೂಚ್ಯಂಕ ಹಾಗೂ ಕ್ರೋಢೀಕೃತ ವಾರ್ಷಿಕ ಸೂಚ್ಯಂಕದ ತುಲನಾತ್ಮಕ ಪಟ್ಟಿಯನ್ನು ಹಿಂದಿನ ವರ್ಷದೊಂದಿಗೆ ಹೋಲಿಸಿ **ಕೋಷ್ಟಕ 5**ರಲ್ಲಿ ನೀಡಲಾಗಿದೆ.

**ಕೋಷ್ಟಕ 5 : ಕೈಗಾರಿಕಾ ಉತ್ಪಾದನಾ ಸೂಚ್ಯಂಕದ ತ್ರೈಮಾಸಿಕ ಬೆಳವಣಿಗೆ 2017–18 ಮತ್ತು 2018–19**

ಆಧಾರ ವರ್ಷ : 2004–05

| ಅವಧಿ | ಗಣಿ | ತಯಾರಿಕೆ* | ವಿದ್ಯುಚ್ಛಕ್ತಿ | ಸಾಮಾನ್ಯ |
|---|---|---|---|---|
| **ಪ್ರಮಾಣ** | **69.8321** | **811.3591** | **118.8089** | **1000.0000** |
| **2017–18** | | | | |
| ತ್ರೈ1 ಏಪ್ರಿಲ್17– ಜೂನ್ 17 | 78.29 (9.93) | 186.87 (2.61) | 178.19 (2.15) | 178.26 (2.77) |
| ತ್ರೈ2 ಜುಲೈ 17 – ಸೆಪ್ಟೆಂಬರ್ 17 | 78.83 (–10.09) | 203.02 (2.63) | 163.90 (14.22) | 189.70 (3.28) |
| ತ್ರೈ3 ಅಕ್ಟೋಬರ್ 17– ಡಿಸೆಂಬರ್ 17 | 79.68 (9.71) | 210.32 (2.53) | 182.02 (–10.02) | 197.83 (1.17) |
| ತ್ರೈ4 ಜನೆವರಿ 18– ಮಾರ್ಚ್ 18 | 81.29 (0.37) | 217.59 (2.72) | 217.85 (7.92) | 207.51 (2.98) |
| ಸೂಚ್ಯಂಕ 2017–18 | 79.52 (1.81) | 204.34 (2.64) | 184.24 (2.06) | 193.24 (2.55) |
| **2018–19** | | | | |
| ತ್ರೈ1 ಏಪ್ರಿಲ್ 18– ಜೂನ್ 18 | 82.47 (5.34) | 192.57 (3.05) | 198.98 (11.67) | 185.65 (4.14) |
| ತ್ರೈ2 ಜುಲೈ 18 – ಸೆಪ್ಟೆಂಬರ್ 18 | 89.26 (13.23) | 208.77 (2.83) | 164.46 (0.34) | 195.16 (2.88) |
| ತ್ರೈ3 ಅಕ್ಟೋಬರ್ 18– ಡಿಸೆಂಬರ್ 18 | 82.59 (3.65) | 216.48 (2.93) | 227.11 (24.77) | 208.39 (2.34) |
| ತ್ರೈ4 ಜನೆವರಿ 19– ಮಾರ್ಚ್ 19 | 82.50 (1.49) | 224.55 (3.20) | 229.86 (5.51) | 215.26 (3.73) |
| ಸೂಚ್ಯಂಕ 2018–19 | 84.20 (5.89) | 210.49 (3.01) | 205.10 (11.32) | 201.03 (4.03) |

**1. * ತಾತ್ಕಾಲಿಕ**
**2. ಆವರಣಗಳಲ್ಲಿರುವ ಸಂಖ್ಯೆಗಳು ಹಿಂದಿನ ವರ್ಷಕ್ಕೆ ಹೋಲಿಸಿದಾಗ ಆದ ಶೇಕಡವಾರು ವ್ಯತ್ಯಾಸಗಳನ್ನು ಸೂಚಿಸುತ್ತವೆ.**

ಈಗಾಗಲೇ 2018–19ರ ಮೊದಲ ಎರಡು ತ್ರೈಮಾಸಿಕಗಳ ತಾತ್ಕಾಲಿಕ ಕೈಗಾರಿಕಾ ಉತ್ಪಾದನಾ ಸೂಚ್ಯಂಕಗಳನ್ನು ಆರ್ಥಿಕ ಸಮೀಕ್ಷೆ 2018–19ರ "ಕೈಗಾರಿಕಾ" ಅಧ್ಯಾಯದಲ್ಲಿ ಅಳವಡಿಸಲಾಗಿದೆ.

**ಕೈಗಾರಿಕಾ ವಾರ್ಷಿಕ ಸಮೀಕ್ಷೆ ವರದಿ:**

1948ರ ಕಾರ್ಖಾನೆಗಳ ಅಧಿನಿಯಮದಡಿಯಲ್ಲಿ ನೋಂದಣಿಯಾದ ಕೈಗಾರಿಕಾ ಘಟಕಗಳ ಸಮೀಕ್ಷೆಯನ್ನು ಭಾರತ ಸರ್ಕಾರವು ಕೇಂದ್ರ ಸಾಂಖ್ಯಿಕ ಕಚೇರಿ ಯವರ ಮೂಲಕ ಪ್ರತಿ ವರ್ಷ ಕೈಗೊಳ್ಳುತ್ತಿದ್ದು, ಇವರಿಂದ ಪಡೆದ ರಾಜ್ಯದ ಅಂಕಿ ಅಂಶಗಳ ಆಧಾರದ ಮೇಲೆ ಕೈಗಾರಿಕಾ ವಾರ್ಷಿಕ ಸಮೀಕ್ಷೆಯ ವರದಿಯನ್ನು ತಯಾರಿಸಲಾಗುತ್ತಿದೆ. ಇದರಲ್ಲಿ ಕೈಗಾರಿಕೆಗೆ ಸಂಬಂಧಿಸಿದಂತೆ ಒಟ್ಟು ನೋಂದಣಿಯಾದ ಕೈಗಾರಿಕಾ ಘಟಕಗಳಲ್ಲಿ ಬಂಡವಾಳ ಹೂಡಿಕೆಗೆ ಸಂಬಂಧಿಸಿದಂತೆ ನೋಂದಣಿಯಾದ ಕಾರ್ಖಾನೆಗಳು, ಮೂಲ ಬಂಡವಾಳ, ಕಾರ್ಯಶೀಲ ಬಂಡವಾಳ ಸಾಲ, ಮರು ಪಾವತಿಸಿದ ಬಡ್ಡಿ, ಒಟ್ಟು ಮೌಲ್ಯ, ಒಟ್ಟು ಹೂಡುವಳಿ ಹಾಗೂ ಹುಟ್ಟುವಳಿ, ಸವಕಳಿ ಮುಂತಾದ ಒಟ್ಟು 27 ಅಂಶಗಳ ಬಗ್ಗೆ ವಿವರಗಳು, ಉದ್ಯೋಗವಕಾಶ ಹಾಗೂ ವರಮಾನಗಳು, ಉಪಯೋಗಿಸಲ್ಪಟ್ಟ ಇಂಧನ ಇವುಗಳ ಬಗ್ಗೆ ಮಾಹಿತಿ ರಾಷ್ಟ್ರೀಯ ಕೈಗಾರಿಕಾ ಸಂಕೇತ 2008ರ ಅನುಸಾರವಾಗಿ ನೀಡಲಾಗಿದೆ. 2010–11ರಿಂದ ಜಿಲ್ಲಾದಾಯದ ತಯಾರಿಕೆಗಾಗಿ ಜಿಲ್ಲಾ ಮಾದರಿಗಳನ್ನು ಹೆಚ್ಚಿಸುವ ಸಲುವಾಗಿ ಕೈಗಾರಿಕಾ ವಾರ್ಷಿಕ ಸಮೀಕ್ಷೆಯಡಿ ಉಳಿಕೆ ಘಟಕಗಳ ರಾಜ್ಯ ಮಾದರಿ ಸಮೀಕ್ಷೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. 2010–11, 2011–12, 2012–13 ಹಾಗೂ 2013–14 ರಾಜ್ಯ ಮತ್ತು ಕೇಂದ್ರದ ಮಾಹಿತಿಗಳನ್ನು ಒಗ್ಗೂಡಿಸಿ ಕೈಗಾರಿಕಾ ವಾರ್ಷಿಕ ಸಮೀಕ್ಷೆಯ ವರದಿಗಳನ್ನು ಪ್ರಕಟಿಸಲಾಗಿದೆ. 2014–15 ರ ವರದಿಯ ನಮೂನೆಗಳ ಪರಿಶೀಲನೆ ಕಾರ್ಯ ಮತ್ತು ಗಣಕೀಕರಣಗೊಳಿಸಿದ ದತ್ತಾಂಶಗಳ ಪರಿಶೀಲನೆ ಕಾರ್ಯ ಹಾಗೂ ಕೋಷ್ಠಕಗಳ ತಯಾರಿಕಾ ಕಾರ್ಯ ಪೂರ್ಣಗೊಳಿಸಿದ್ದು, ವರದಿಯ ವಿಶ್ಲೇಷಣಾ ಭಾಗವನ್ನು ತಯಾರಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. 2015–16 ರ ನಮೂನೆಗಳ ಪರಿಶೀಲನೆ ಕಾರ್ಯ ಮತ್ತು ಗಣಕೀಕರಣಗೊಳಿಸಿದ ದತ್ತಾಂಶಗಳ ಪರಿಶೀಲನೆ ಕಾರ್ಯ ಪ್ರಗತಿಯಲ್ಲಿರುತ್ತದೆ. 2016–17ರ ಕ್ಷೇತ್ರ ಕಾರ್ಯಾಚರಣೆ ಕಾರ್ಯ ಪ್ರಗತಿಯಲ್ಲಿರುತ್ತದೆ.

ಕೈಗಾರಿಕಾ ವಾರ್ಷಿಕ ಸಮೀಕ್ಷೆಯು ಸಂಘಟಿತ ಕೈಗಾರಿಕಾ ವಲಯದ ಅಂಕಿ ಅಂಶಗಳನ್ನು ಗಣಿವಲಯ ಹೊರತುಪಡಿಸಿ, ತಯಾರಿಕೆ ಹಾಗೂ ವಿದ್ಯುತ್ ವಲಯಗಳಿಗೆ ನೀಡುತ್ತದೆ. 2015–16 ಹಾಗೂ 2016–17ರಲ್ಲಿ ನೋಂದಣಿಯಾದ ಕೈಗಾರಿಕೆಗಳ ವಾರ್ಷಿಕ ಸಮೀಕ್ಷೆಯ ವಿವರಣೆಯನ್ನು ಈ ಕೆಳಕಂಡಂತೆ ಕೋಷ್ಠಕದಲ್ಲಿ ನೀಡಲಾಗಿದೆ. 2015–16 ಮತ್ತು 2016–17ನೇ ಸಾಲಿಗೆ ಭಾರತದಲ್ಲಿ ಒಟ್ಟು ನೊಂದಣಿಯಾದ ಕೈಗಾರಿಕಾ ಘಟಕಗಳ ಶೇ.5.57 ಹಾಗೂ ಶೇ.5.68 ರಷ್ಟು ಭಾಗ ಕರ್ನಾಟಕದ್ದಾಗಿದೆ. ಸದರಿ ಸಾಲಿನಲ್ಲಿ ನೊಂದಣಿಯಾದ ಈ ಕೈಗಾರಿಕಾ ಘಟಕಗಳು ಶೇ. 5.68 ರಷ್ಟು ಸ್ಥಿರ ಬಂಡವಾಳದಲ್ಲಿ, ಶೇ.6.90ರಷ್ಟು ಒಟ್ಟು ಹುಟ್ಟುವಳಿಯಲ್ಲಿ ಹಾಗೂ ಶೇ.7.11 ರಷ್ಟು ಒಟ್ಟು ಮೌಲ್ಯವರ್ಧಿತ (ಉಗಿಂ) ಕೊಡುಗೆಯನ್ನು 2016–17ರಲ್ಲಿ ನೀಡಿರುತ್ತವೆ. 2015–16ಕ್ಕೆ ಹೋಲಿಸಿದಾಗ 2016–17ರಲ್ಲಿ ನೊಂದಣಿಯಾದ ಕೈಗಾರಿಕಾ ಘಟಕಗಳು, ಕಾರ್ಯಚರಣೆ ಬಂಡವಾಳ, ಒಟ್ಟು ಹುಟ್ಟುವಳಿ, ಒಟ್ಟು ಹೂಡುವಳಿ, ಒಟ್ಟು ಮತ್ತು ನಿವ್ವಳ ಮೌಲ್ಯ, ಲಾಭದಲ್ಲಿ ಅಲ್ಪ ಪ್ರಮಾಣದಲ್ಲಿ ಅಲ್ಪ ಪ್ರಮಾಣದಲ್ಲಿ ಹೆಚ್ಚಾಗಿರುವುದು ಕಂಡು ಬಂದಿದೆ ಹಾಗೂ ಸ್ಥಿರ ಬಂಡವಾಳದಲ್ಲಿ ಅಲ್ಪ ಪ್ರಮಾಣದಲ್ಲಿ ಕಡಿಮೆಯಾಗಿರುವುದು ಕಂಡು ಬಂದಿದೆ.

**ಕೋಷ್ಟಕ –6: ಭಾರತ ಹಾಗೂ ಕರ್ನಾಟಕದಲ್ಲಿ ನೊಂದಣಿಯಾದ ಕೈಗಾರಿಕೆಗಳ ಆಯ್ದ ಕೆಲವು ಸೂಚಕಗಳು**

(ಲಕ್ಷ. ರೂಗಳಲ್ಲಿ)

| ವಿವರಗಳು | 2015–16 | | | 2016–17 | | |
|---|---|---|---|---|---|---|
| | ಕರ್ನಾಟಕ | ಭಾರತ | % ಪಾಲು | ಕರ್ನಾಟಕ | ಭಾರತ | % ಪಾಲು |
| ಕೈಗಾರಿಕೆಗಳು (ಸಂಖ್ಯೆ) | 12973 | 233116 | 5.57 | 13344 | 234865 | 5.68 |
| ಸ್ಥಿರ ಬಂಡವಾಳ | 173736 | 2809647 | 6.18 | 181221 | 3190386 | 5.68 |
| ಕಾರ್ಯಚರಣೆ ಬಂಡವಾಳ | 51846 | 740530 | 7.00 | 59009 | 663083 | 8.90 |
| ಒಟ್ಟು ಹುಟ್ಟುವಳಿ | 437723 | 6862354 | 6.38 | 501647 | 7265514 | 6.90 |
| ಒಟ್ಟು ಹೂಡುವಳಿ | 359037 | 5589074 | 6.42 | 404355 | 5897464 | 6.86 |
| ಒಟ್ಟು ಮೌಲ್ಯ | 78685 | 1273280 | 6.18 | 97292 | 1368050 | 7.11 |
| ನಿವ್ವಳ ಮೌಲ್ಯ | 64265 | 1072485 | 5.99 | 82766 | 1145919 | 7.22 |
| **ಲಾಭ** | **26660** | **513193** | **5.19** | **39995** | **539353** | **7.42** |

**ಮೂಲ: ಕೇಂದ್ರ ಸಾಂಖ್ಯಿಕ ಕಚೇರಿ, ಭಾರತ ಸರ್ಕಾರ**

ಭಾರತ ಹಾಗೂ ಕರ್ನಾಟಕದಲ್ಲಿಯ ತಲಾ ಕೆಲಸಗಾರರ ಆಧಾರಿತ ಕೆಲವು ಅಯ್ದ ಆರ್ಥಿಕ ಸೂಚಕಗಳ ಹೋಲಿಕೆಯನ್ನು ಈ ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ. 2015–16 ಮತ್ತು 2016–17ರಲ್ಲಿ ಭಾರತಕ್ಕೆ ಹೋಲಿಸಿದಾಗ ಕರ್ನಾಟಕದಲ್ಲಿ ನಿವ್ವಳ ಮೌಲ್ಯ ತಲಾ ಕೆಲಸಗಾರರ ಒಟ್ಟು ಹೂಡುವಳಿ, ತಲಾ ಕೆಲಸಗಾರರ ಒಟ್ಟು ಹುಟ್ಟುವಳಿಯಲ್ಲಿ ಕಡಿಮೆಯಾಗಿದೆ ಆದರೆ ತಲಾ ಕೆಲಸಗಾರರ ವಾರ್ಷಿಕ ಆದಾಯವು ಹೆಚ್ಚಿಗೆ ಇರುವುದು ಕಂಡು ಬಂದಿದೆ.

**ಕೋಷ್ಟಕ – 7: ಕೈಗಾರಿಕೆಗಳ ಆಯ್ದ ಆರ್ಥಿಕ ಸೂಚಕಗಳು 2009–10 ರಿಂದ 2016–17ರ ವರೆಗೆ**

| ವರ್ಷ | ಕಾರ್ಮಿಕ ಉತ್ಪನ್ನ (ತಲಾ ಸಂಬಳಕ್ಕೆ ನಿವ್ವಳ ಮೌಲ್ಯ) (ರೂ.) | | ತಲಾ ಕೆಲಸಗಾರರ ಒಟ್ಟು ಹೂಡುವಳಿ (ರೂ. ಲಕ್ಷ) | | ತಲಾ ಕೆಲಸಗಾರರ ಒಟ್ಟು ಹುಟ್ಟುವಳಿ (ರೂ.ಲಕ್ಷ) | | ತಲಾ ಕೆಲಸಗಾರರ ವಾರ್ಷಿಕ ಆದಾಯ (ರೂ.) | |
|---|---|---|---|---|---|---|---|---|
| | ಕರ್ನಾಟಕ | ಭಾರತ | ಕರ್ನಾಟಕ | ಭಾರತ | ಕರ್ನಾಟಕ | ಭಾರತ | ಕರ್ನಾಟಕ | ಭಾರತ |
| 2009–10 | 7.70 | 8.40 | 32.50 | 33.10 | 40.10 | 40.60 | 83,218 | 75,277 |
| 2010–11 | 6.99 | 8.23 | 31.00 | 38.8 | 37.56 | 47.2 | 1,01,146 | 86,493 |
| 2011–12 | 15.49 | 8.38 | 32.93 | 36.90 | 46.59 | 44.80 | 1,03,145 | 95,662 |
| 2012–13 | 6.79 | 7.68 | 45.20 | 49.93 | 54.71 | 59.95 | 1,19,409 | 1,10,327 |
| 2013–14 | 5.68 | 7.08 | 53.41 | 52.57 | 62.99 | 62.76 | 1,37,892 | 1,21,114 |
| 2014–15 | 5.25 | 6.94 | 52.12 | 53.17 | 61.72 | 64.00 | 1,44,963 | 1,30,619 |
| 2015–16 | 5.27 | 6.87 | 46.70 | 50.19 | 56.94 | 61.62 | 1,58,744 | 1,40,086 |
| 2016–17 | 5.66 | 6.60 | 48.85 | 50.57 | 60.61 | 62.30 | 1,76,598 | 1,48,794 |

**ಮೂಲ: ಕೇಂದ್ರ ಸಾಂಖ್ಯಿಕ ಕಚೇರಿ, ಭಾರತ ಸರ್ಕಾರ**

**ಬೆಲೆಗಳು :**

ಬೆಲೆ ಅಂಕಿ ಅಂಶಗಳು ದೇಶದ ಹಾಗೂ ರಾಜ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಮಹತ್ವವಾದ ಪಾತ್ರವನ್ನು ವಹಿಸುತ್ತಿವೆ. ಬೆಲೆಗಳು ಉತ್ಪಾದಕರು ಹಾಗೂ ಗ್ರಾಹಕರ ಮೇಲೆ ಪರಿಣಾಮ ಬೀರುತ್ತವೆ. ಬೆಲೆ

ಪ್ರವೃತ್ತಿಯು ಮುಖ್ಯವಾಗಿ ಬೇಡಿಕೆ ಮತ್ತು ಪೂರೈಕೆ ಕಾರ್ಯದ ಮೇಲೆ ಆಧಾರವಾಗಿದೆ. ಬೆಲೆಯು ಕೊಳ್ಳುವ ಸಾಮರ್ಥ್ಯವನ್ನು ನಿರ್ಧರಿಸುವ ಅಳತೆಗೋಲಾಗಿರುತ್ತದೆ. ಬೆಲೆಗಳಲ್ಲಿ ಆಗುವ ವ್ಯತ್ಯಾಸಗಳನ್ನು ಹಲವಾರು ವಿಧಾನಗಳಿಂದ ಅಂದಾಜಿಸಬಹುದಾಗಿದೆ. ಅವುಗಳಲ್ಲಿ ಪ್ರಮುಖವಾಗಿ ಉಪಯೋಗಿಸುವ ಎರಡು ವಿಧಾನಗಳಲ್ಲಿ ಸಗಟು ಬೆಲೆ ಸೂಚ್ಯಂಕ ಹಾಗೂ ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕವಾಗಿರುತ್ತದೆ. ಸರ್ಕಾರ, ಔದ್ಯಮಿಕ ಉದ್ದಿಮೆಗಳು ಹಾಗು ಇನ್ನಿತರ ಖಾಸಗಿ ಉದ್ದಿಮೆಗಳ ಉಪಯೋಗಕ್ಕಾಗಿ ಕರ್ನಾಟಕದಲ್ಲಿ ಹಲವಾರು ಪದಾರ್ಥಗಳ ಬೆಲೆಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗುತ್ತಿದೆ.

ಬೆಲೆಗಳ ಮಾಹಿತಿಯನ್ನು ವಾರಕ್ಕೆ ಅನುಗುಣವಾಗಿ, ಪಾಕ್ಷಿಕವಾಗಿ, ಮಾಹೆವಾರು ಹಾಗೂ ಋತುವಾರು ಸಂಗ್ರಹಿಸಲಾಗುತ್ತಿದೆ. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಬೆಲೆ ಅಂಕಿ ಅಂಶಗಳ ಮಾಹಿತಿಯ ಮುಖ್ಯ ಪೂರೈಕೆದಾರರಾಗಿರುತ್ತಾರೆ. ಈ ಮೇಲೆ ನಮೂದಿಸಿರುವ ಬೆಲೆಗಳನ್ನು ಉಪಯೋಗಿಸಿಕೊಂಡು ಕೆಳಕಂಡ ಸೂಚ್ಯಂಕಗಳನ್ನು ರಚಿಸಲಾಗುತ್ತಿದೆ.

**33 ಕೃಷಿ ಉತ್ಪನ್ನಗಳ ಸಗಟು ಬೆಲೆ ಸೂಚ್ಯಂಕ: (ಆಧಾರಿತ ವರ್ಷ 1981–82=100)**

ಈ ಸೂಚ್ಯಂಕವನ್ನು ಆಯ್ದ 33 ಕೃಷಿ ಪದಾರ್ಥಗಳಿಗೆ, ಕೃಷಿ ಮಾರಾಟ ಇಲಾಖೆಯ ಆಯ್ದ 40 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಂದ ಪ್ರತಿ ವಾರ ಹಾಗೂ ನಾಲ್ಕು ಮಂಡಳಿಗಳು ಎಂದರೆ, ಮಸಾಲೆ ಮಂಡಳಿ, ಸಕ್ಕರೆ ನಿರ್ದೇಶನಾಲಯ, ತಂಬಾಕು ಮಂಡಳಿ ಹಾಗೂ ಕಾಫಿ ಮಂಡಳಿಗಳಿಂದ ಪ್ರತಿ ಮಾಹೆ ಪಡೆಯುತ್ತಿರುವ ಸಗಟು ಬೆಲೆಗಳ ಮಾಹಿತಿಯ ಸಂಗ್ರಹಣೆಯ ಆಧಾರದ ಮೇಲೆ ರಚಿಸಲಾಗುತ್ತಿದೆ. **"**ಸಗಟು ಬೆಲೆ**"** ಎಂದರೆ ಮಾರಾಟಗಾರರಿಗೆ ಅಥವಾ ಸಂಸ್ಕರಣಕ್ಕಾಗಿ ಮಾರಿದ ಪದಾರ್ಥದ ಬೆಲೆಯಾಗಿರುತ್ತದೆ. ಈ ಸಗಟು ಬೆಲೆಯು ಬೆಲೆಯಲ್ಲಿ ದೊಡ್ಡ ಪ್ರಮಾಣದ ವ್ಯವಹಾರವಾಗಿರುವ ಮಾದರಿ ಬೆಲೆಯಾಗಿರುತ್ತದೆ. ಈ ಸೂಚ್ಯಂಕಗಳನ್ನು ರಾಜ್ಯಾದಾಯದ ಅಂದಾಜುಗಳನ್ನು ತಯಾರಿಸಲು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ವಿಶ್ಲೇಷಣೆಗಾಗಿ ಉಪಯೋಗಿಸುತ್ತಾರೆ.

2018–19ನೇ ಸಾಲಿನಲ್ಲಿ ಏಪ್ರಿಲ್ 2019 ರವರೆಗೆ 33 ಕೃಷಿ ಪದಾರ್ಥಗಳ ಸಗಟು ಬೆಲೆ ಸೂಚ್ಯಂಕವನ್ನು ರಚಿಸಲಾಗಿದೆ. ಏಪ್ರಿಲ್ 2018ರಲ್ಲಿ ಸಗಟು ಬೆಲೆ ಸೂಚ್ಯಂಕವು 1217 ಅಂಶಗಳಾಗಿದ್ದು, ಇದು ಮಾರ್ಚ್ 2019ರಲ್ಲಿ 1261ಕ್ಕೆ ಏರಿದ್ದು, ಶೇಕಡ 3.62ರಷ್ಟು ಏರಿಕೆಯನ್ನು ಹೊಂದಿರುತ್ತದೆ. ಪ್ರಸ್ತುತ 2017–18ನೇ ಸಾಲಿನಲ್ಲಿ ಸರಾಸರಿ ಸಗಟು ಬೆಲೆ ಸೂಚ್ಯಂಕವು 1205 ಆಗಿದ್ದು, 2016–17ರ ಇದೇ ಅವಧಿಗೆ(1198) ಹೋಲಿಸಿದರೆ ಶೇಕಡ 0.58ರಷ್ಟು ಏರಿಕೆಯಾಗಿರುತ್ತದೆ. ಅಲ್ಲದೆ 2018–19ನೇ ಸಾಲಿನಲ್ಲಿ ಗುಂಪುವಾರು ಸೂಚ್ಯಂಕದಲ್ಲಿ ಏಕದಳ ಧಾನ್ಯಗಳು ಗುಂಪಿನಲ್ಲಿ ಅತಿ ಹೆಚ್ಚಿನ ಏರಿಕೆಯಾಗಿದ್ದು ಮತ್ತು ಇತರೆ ಪದಾರ್ಥಗಳು ಗುಂಪಿನ ಸೂಚ್ಯಂಕದಲ್ಲಿ ಅತಿ ಹೆಚ್ಚಿನ ಇಳಿಕೆಯನ್ನು ಹೊಂದಿರುತ್ತದೆ. 2018–19ನೇ ಸಾಲಿನ ಗುಂಪುವಾರು ಕೃಷಿ ಉತ್ಪನ್ನ ಸಗಟು ಬೆಲೆ ಸೂಚ್ಯಂಕದ ವಿವರಗಳನ್ನು **ಕೋಷ್ಟಕ – 8** ರಲ್ಲಿ ನೀಡಲಾಗಿದೆ.

**ಕೋಷ್ಟಕ –8 : ಕರ್ನಾಟಕ ರಾಜ್ಯದ ಕೃಷಿ ಪದಾರ್ಥಗಳ ಗುಂಪುವಾರು ಸಗಟು ಬೆಲೆಗಳ ಸಮೂಹವಾರು ಸೂಚ್ಯಂಕ**

**ಆಧಾರಿತ ವರ್ಷ: 1981–82=100**

| ಕ್ರ.ಸಂ. | ಪದಾರ್ಥಗಳ ಸಮೂಹ | ತೂಕ | 2017–18 | | ಏಪ್ರಿಲ್‌ಗೆ ಹೋಲಿಸಿದಾಗ ಮಾರ್ಚ್ ಮಾಹೆಯಲ್ಲಿಯ ಶೇಕಡವಾರು ಬದಲಾವಣೆ |
|---|---|---|---|---|---|
| | | | ಏಪ್ರಿಲ್ 2018 | ಮಾರ್ಚ್ 2019 | |
| 1 | ಏಕದಳ ಧಾನ್ಯಗಳು | 29.89 | 1260 | 1473 | 16.90 |
| 2 | ದ್ವಿದಳ ಧಾನ್ಯಗಳು | 4.92 | 1177 | 1371 | 16.48 |
| 3 | ಎಣ್ಣೆ ಬೀಜಗಳು | 17.31 | 957 | 1113 | 16.30 |
| 4 | ಸಕ್ಕರೆ ಮತ್ತು ಬೆಲ್ಲ | 14.56 | 752 | 713 | -5.19 |

| | | | | | |
|---|---|---|---|---|---|
| 5 | ನಾರು | 9.64 | 812 | 787 | -3.08 |
| 6 | ಮಸಾಲೆ ಮತ್ತು ಸಾಂಬಾರ ಪದಾರ್ಥಗಳು | 2.27 | 921 | 990 | 7.49 |
| 7 | ಇತರೆ ಪದಾರ್ಥಗಳು* | 21.41 | 1905 | 1674 | -12.13 |
| **ಎಲ್ಲಾ ಪದಾರ್ಥಗಳು** | | **100.00** | **1217** | **1261** | **3.62** |

* ಇತರೆ ಪದಾರ್ಥಗಳಲ್ಲಿ ಕಾಫಿ, ಈರುಳ್ಳಿ, ಆಲೂಗೆಡ್ಡೆ, ತಂಬಾಕು, ಹುಣಸೇಹಣ್ಣು, ತೆಂಗಿನಕಾಯಿ ಮತ್ತು ಅಡಿಕೆ ಒಳಗೊಂಡಿರುತ್ತದೆ.

**ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕ:**

ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕವು, ಒಂದು ನಿರ್ದಿಷ್ಟ ಸ್ಥಳದ, ಒಂದು ನಿರ್ದಿಷ್ಟ ಗುಂಪಿನ ಸಾಮಾನ್ಯ ಕುಟುಂಬವು ಉಪಯೋಗಿಸುವ, ಗೊತ್ತು ಪಡಿಸಿದ ಪದಾರ್ಥಗಳು ಹಾಗೂ ಸೇವೆಗಳ ಚಿಲ್ಲರೆ ಬೆಲೆಗಳನ್ನು ಆಧಾರಿತ ವರ್ಷಕ್ಕೆ ಹೋಲಿಸಿದಾಗ ಆಗುವ ಬದಲಾವಣೆಯ ಪರಿಮಾಣವನ್ನು ತಿಳಿಯಲು ವಿನ್ಯಾಸಗೊಳಿಸಲಾಗಿದೆ.

ವಿವಿಧ ಕಾರ್ಮಿಕ ಸಂಘ ಸಂಸ್ಥೆಗಳು, ಇಲಾಖೆಗಳು, ಖಾಸಗಿ ವಲಯದ ಸಣ್ಣ ಹಾಗೂ ದೊಡ್ಡ ಪ್ರಮಾಣದ ಉದ್ಯಮಗಳು ತನ್ನ ಉದ್ಯೋಗಿಗಳಿಗೆ ನೀಡುವ ತುಟ್ಟಿ ಭತ್ಯೆಯನ್ನು ನಿರ್ಧರಿಸಲು ಹಾಗೂ ವೇತನವನ್ನು ಹೆಚ್ಚಿಸಲು ಉಪಯೋಗಿಸುತ್ತಾರೆ.

ಗ್ರಾಹಕ ಬೆಲೆ ಸೂಚ್ಯಂಕ ರಚಿಸಲು 16 ಕೇಂದ್ರಗಳನ್ನು ಆಯ್ಕೆ ಮಾಡಲಾಗಿದೆ. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕಗಳನ್ನು 11 ಕೇಂದ್ರಗಳಿಗೆ (ಆಧಾರಿತ ವರ್ಷ 1987–88=100) ಪ್ರತಿ ವಾರ ಪಡೆಯುತ್ತಿರುವ ಬೆಲೆಗಳ ಮಾಹಿತಿಯ ಆಧಾರದ ಮೇಲೆ ರಚಿಸಲಾಗುತ್ತಿದ್ದು, ಉಳಿದ 5 ಕೇಂದ್ರಗಳಿಗೆ (ಆಧಾರಿತ ವರ್ಷ 2001=100) ಬೆಲೆಗಳನ್ನು ಮಾತ್ರ ಸಂಗ್ರಹಿಸಿ ಕಾರ್ಮಿಕ ಕಾರ್ಯಾಲಯ, ಶಿಮ್ಲಾ ಇವರಿಗೆ ಕಳುಹಿಸಲಾಗುತ್ತಿದ್ದು ಅಲ್ಲೇ ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕ ತಯಾರಿಸಲಾಗುತ್ತಿದೆ.

ಪ್ರಸ್ತುತ ಸಾಲಿನಲ್ಲಿ, ರಾಜ್ಯ ಸರಣಿಯ 11 ಕೇಂದ್ರಗಳಿಗೆ ಸಂಬಂಧಿಸಿದಂತೆ ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕವನ್ನು 2019ನೇ ಜೂನ್ ಮಾಹೆವರೆಗೆ ರಚಿಸಲಾಗಿದೆ. 2018–19ನೇ ಸಾಲಿನಲ್ಲಿ ಕೇಂದ್ರ ಸರಣಿಯ 5 ಕೇಂದ್ರಗಳ (ಆಧಾರ ವರ್ಷ2001=100) ಸೂಚ್ಯಂಕಗಳಲ್ಲಿ ಹುಬ್ಬಳ್ಳಿ–ಧಾರವಾಡ ಕೇಂದ್ರವು ಏಪ್ರಿಲ್ 2018ರಿಂದ ಮಾರ್ಚ್2019ರ ಅವಧಿಯಲ್ಲಿ ಅತಿ ಹೆಚ್ಚಿನ ಅಂದರೆ ಶೇಕಡ 4.49ರಷ್ಟು ಏರಿಕೆಯನ್ನು ತೋರಿಸುತ್ತಿದೆ. ಈ ಕೇಂದ್ರದ ಸಾಮಾನ್ಯ ಸೂಚ್ಯಂಕದ ಸರಾಸರಿಯು 318 ಅಂಶಗಳಾಗಿದ್ದು ಕಳೆದ ಸಾಲಿನ ಇದೇ ಅವಧಿಗೆ (304) ಹೋಲಿಸಿದಾಗ, ಶೇಕಡ 4.77ರಷ್ಟು ಏರಿಕೆಯಾಗಿದೆ. ರಾಜ್ಯ ಸರಣಿಯ 11 ಕೇಂದ್ರಗಳಲ್ಲಿ, ಹರಿಹರ ಕೇಂದ್ರವು 2018–19ನೇ ಸಾಲಿನಲ್ಲಿ ಏಪ್ರಿಲ್ 2018ರ ಮಾಹೆಯಲ್ಲಿ 779 ಅಂಶಗಳಷ್ಟಿದ್ದ ಸೂಚ್ಯಂಕವು, ಮಾರ್ಚ್2019ರ ಮಾಹೆಯಲ್ಲಿ 834 ಅಂಶಗಳಿಗೆ ಏರಿಕೆಯಾಗಿದ್ದು ಶೇಕಡ 7.06ರಷ್ಟು ಹೆಚ್ಚಳವನ್ನು ದಾಖಲಿಸಿದೆ. ಏಪ್ರಿಲ್ 2018ರಿಂದ ಮಾರ್ಚ್2018ರ (806) ಅವಧಿಗೆ ಈ ಕೇಂದ್ರದ ಸಾಮಾನ್ಯ ಸೂಚ್ಯಂಕದ ಸರಾಸರಿಯು ಕಳೆದ ಸಾಲಿನ ಇದೇ ಅವಧಿಗೆ (772) ಹೋಲಿಸಿದರೆ ಶೇಕಡ 4ರಷ್ಟು ಏರಿಕೆಯಾಗಿದೆ. 2018–19ನೇ ಸಾಲಿನ ಔದ್ಯಮಿಕ ಕಾರ್ಮಿಕ ಗ್ರಾಹಕ ಬೆಲೆ ಸೂಚ್ಯಂಕದ ವಿವರಗಳನ್ನು **ಕೋಷ್ಟಕ – 9**ರಲ್ಲಿ ನೀಡಲಾಗಿದೆ.

**ಕೋಷ್ಟಕ –9 : ಕರ್ನಾಟಕ ರಾಜ್ಯದ ಔದ್ಯಮಿಕ ಕಾರ್ಮಿಕ ಗ್ರಾಹಕ ಬೆಲೆ ಸೂಚ್ಯಂಕ**

| ಕ್ರ.ಸಂ. | ಕೇಂದ್ರಗಳು | 2018–19 | | ಏಪ್ರಿಲ್–17ಕ್ಕೆ ಹೋಲಿಸಿದಾಗ ಮಾರ್ಚ್–19 ಮಾಹೆಯಲ್ಲಿಯ ಶೇಕಡವಾರು ಬದಲಾವಣೆ |
|---|---|---|---|---|
| | | ಏಪ್ರಿಲ್ 2018 | ಮಾರ್ಚ್2019 | |
| **ಕೇಂದ್ರ ಸರಣಿ : (ಆಧಾರಿತ ವರ್ಷ: 2001=100)** | | | | |
| 1 | ಬೆಂಗಳೂರು | 288 | 295 | 2.43 |
| 2 | ಬೆಳಗಾವಿ | 295 | 306 | 3.73 |
| 3 | ಹುಬ್ಬಳ್ಳಿ–ಧಾರವಾಡ | 312 | 326 | 4.49 |
| 4 | ಮಡಿಕೇರಿ | 297 | 306 | 3.03 |
| 5 | ಮೈಸೂರು | 297 | 308 | 3.70 |
| **ರಾಜ್ಯ ಸರಣಿ : (ಆಧಾರಿತ ವರ್ಷ: 1987–88=100)** | | | | |
| 6 | ಬಳ್ಳಾರಿ | 777 | 829 | 6.69 |
| 7 | ಭದ್ರಾವತಿ | 816 | 861 | 5.51 |
| 8 | ದಾವಣಗೆರೆ | 885 | 936 | 5.76 |
| 9 | ದಾಂಡೇಲಿ | 818 | 866 | 5.87 |
| 10 | ಕಲಬುರಗಿ | 760 | 807 | 6.18 |
| 11 | ಹರಿಹರ | 779 | 834 | 7.06 |
| 12 | ಹಾಸನ | 835 | 885 | 5.99 |
| 13 | ಮಂಡ್ಯ | 868 | 913 | 5.18 |
| 14 | ಮಂಗಳೂರು | 754 | 801 | 6.23 |
| 15 | ರಾಯಚೂರು | 879 | 926 | 5.35 |
| 16 | ತುಮಕೂರು | 717 | 761 | 6.14 |

**ಮೂಲ: ಕಾರ್ಮಿಕ ಸಂಸ್ಥೆ, ಶಿಮ್ಲಾ ಭಾರತ ಸರ್ಕಾರ (ಕೇಂದ್ರ ಸರಣಿ).**

2018ನೇ ಸಾಲಿನ ರಾಜ್ಯದ 16 ಕೇಂದ್ರಗಳ ವಾರ್ಷಿಕ ಸರಾಸರಿಯನ್ನು ಹೊರಡಿಸಲಾಗಿದೆ.

**ಕೃಷಿ ಉತ್ಪನ್ನ ಸುಗ್ಗಿಕಾಲದ ಧಾರಣೆ ವರದಿ:**

ಸುಗ್ಗಿಕಾಲದ ಬೆಲೆಯು, ಸಾಗುವಳಿದಾರನು(ಕೃಷಿಕ) ಯಾವ ಬೆಲೆಗೆ ತನ್ನ ಉತ್ಪಾದನೆಯನ್ನು ನೇರವಾಗಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಾನೆ ಎಂಬ ಅಂಶವನ್ನು ಸೂಚಿಸುತ್ತದೆ. ರೈತನಿಗೆ ಸಾಗುವಳಿಯ ವೆಚ್ಚಕ್ಕೆ ಹೋಲಿಸಿದಾಗ, ಲಾಭದಾಯಕ ಬೆಲೆಯು ಸಿಗುತ್ತಿದೆಯೆ? ಎಂಬುದರ ಬಗ್ಗೆ ಅಧ್ಯಯನವನ್ನು ಕೈಗೊಳ್ಳಲು ಸಹಕಾರಿಯಾಗುತ್ತದೆ. ಸುಗ್ಗಿ ಕಾಲದ ಬೆಲೆಯು ಕಟಾವಿನ ಅವಧಿಯಲ್ಲಿ ಸರಕನ್ನು ವಿಲೇವಾರು ಮಾಡುವ ಸಗಟುಬೆಲೆಯ ಸರಾಸರಿಯಾಗಿರುತ್ತದೆ. ಈ ಬೆಲೆಗಳ ಮಾಹಿತಿಯನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಂದ ಪ್ರತಿ ಋತುವಿನಲ್ಲೂ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಸಂಗ್ರಹಿಸಿ ಕಳುಹಿಸುತ್ತಿದ್ದಾರೆ.

2015–16ನೇ ಸಾಲಿನ ಕೃಷಿ ಉತ್ಪನ್ನ ಸುಗ್ಗಿಕಾಲದ ಸರಾಸರಿ ಧಾರಣೆಯ ವರದಿಯನ್ನು ತಯಾರಿಸಲಾಗಿದೆ.

**110 ಪದಾರ್ಥಗಳ ಸಗಟು ಮತ್ತು ಚಿಲ್ಲರೆ ಬೆಲೆಗಳು:**

110 ಪ್ರಮುಖ ಪದಾರ್ಥಗಳ ಸಗಟು ಮತ್ತು ಚಿಲ್ಲರೆ ಬೆಲೆಗಳ ಪಾಕ್ಷಿಕ ವರದಿಯನ್ನು ಜಿಲ್ಲಾ ಸಂಗ್ರಹಣಾಧಿಕಾರಿಗಳಿಂದ ಪಡೆಯಲಾಗುತ್ತಿದೆ. ಈ ಮಾಹಿತಿಯು ರಾಜ್ಯಮಟ್ಟದಲ್ಲಿ ಕಾಲಶ್ರೇಣಿ ಮಾಹಿತಿಯನ್ನು ತಯಾರಿಸಲು ಉಪಯೋಗವಾಗುತ್ತದೆ. ಈ ಮಾಹಿತಿಯನ್ನು ಸಂಶೋಧನಾಕಾರರು ವಿಶ್ಲೇಷಣೆಗಾಗಿ ಉಪಯೋಗಿಸುತ್ತಾರೆ.

2017ನೇ ಸಾಲಿನ 110 ಪದಾರ್ಥಗಳ ಸಗಟು ಮತ್ತು ಚಿಲ್ಲರೆ ಬೆಲೆಗಳ ವರದಿಯನ್ನು ತಯಾರಿಸಲಾಗಿದೆ.

**ಗ್ರಾಮಾಂತರ ಪ್ರದೇಶಗಳ ಚಿಲ್ಲರೆ ಬೆಲೆ ಸೂಚ್ಯಂಕ: (ಆಧಾರಿತ ವರ್ಷ 1970=100)**

ಗ್ರಾಮಾಂತರ ಪ್ರದೇಶಗಳಲ್ಲಿ 29 ಅಗತ್ಯ ವಸ್ತುಗಳ ಚಿಲ್ಲರೆ ಬೆಲೆಗಳ ಮಾಹಿತಿಯನ್ನು ಪ್ರತಿ ತಾಲ್ಲೂಕಿನ 2 ಗ್ರಾಮಗಳಲ್ಲಿ ಆಯ್ಕೆಯಾದ ತಲಾ 2 ಅಂಗಡಿಗಳಿಂದ ಪ್ರತಿ ಮಾಹೆಯು ಸಂಗ್ರಹಿಸಲಾಗುತ್ತಿದೆ. ನಿಯತಕಾಲಿಕವನ್ನು ತಯಾರಿಸಲು ಹಾಗೂ ಗ್ರಾಮಾಂತರ ಪ್ರದೇಶಗಳ ಚಿಲ್ಲರೆ ಬೆಲೆ ಸೂಚ್ಯಂಕಗಳನ್ನು ಪ್ರತಿ ಮಾಹೆ ತಯಾರಿಸಲು ಈ ಮಾಹಿತಿಯನ್ನು ಉಪಯೋಗಿಸಲಾಗುತ್ತಿದೆ.

ರಾಜ್ಯದ ಗ್ರಾಮಾಂತರ ಪ್ರದೇಶಗಳ ಚಿಲ್ಲರೆ ಬೆಲೆ ಸೂಚ್ಯಂಕವನ್ನು ಏಪ್ರಿಲ್ 2019ರವರೆಗೆ ತಯಾರಿಸಲಾಗಿದೆ.

**ಕೃಷಿ ಕೂಲಿ:**

"ಕೂಲಿ"ಯು ಕೃಷಿಕೂಲಿ ಕೆಲಸ ಮಾಡುವವರ ಆದಾಯ ಗಳಿಕೆಯ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತದೆ. ಕಾಲಕಾಲಕ್ಕೆ ಸರ್ಕಾರವು ಅಸಂಘಟಿತ ವಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೃಷಿ ಕಾರ್ಮಿಕರಿಗೆ ಸಂಬಂಧಿಸಿದಂತೆ, ಕನಿಷ್ಟ ಕೂಲಿ ದರವನ್ನು ನಿಗದಿಪಡಿಸುತ್ತದೆ. ಕೃಷಿ ಕಾರ್ಮಿಕರಿಗೆ ಕೊಡುವ ಕೂಲಿ ದರ ಮಾಹಿತಿಯನ್ನು ಆಯ್ಕೆ ಮಾಡಿರುವ ರಾಜ್ಯದ ಪ್ರತಿ ತಾಲ್ಲೂಕಿನ 4 ಹಳ್ಳಿಗಳಿಂದ ಪ್ರತಿ ಮಾಹೆ ಸಂಗ್ರಹಿಸಲಾಗುತ್ತಿದೆ.

ಕೃಷಿ ಕೂಲಿದರಗಳನ್ನು ಖುಷ್ಕಿ ಭೂಮಿ, ತರಿಭೂಮಿ ಹಾಗೂ ತೋಟದ ಭೂಮಿಗೆ ಪ್ರತ್ಯೇಕವಾಗಿ ಹಾಗು ಪ್ರತಿ ಭೂಮಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೃಷಿ ಕಾರ್ಮಿಕರ ನಾಲ್ಕು ಗುಂಪುಗಳಿಗೆ ಕೂಲಿ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಈ ನಾಲ್ಕು ಗುಂಪುಗಳ ವರ್ಗೀಕರಣ ಅಂದರೆ ಭೂಮಿ ಉಳುವ, ಅಗೆಯುವ, ಬಿತ್ತುವ, ನೀರುಣಿಸುವ ಕೃಷಿ ಕಾರ್ಮಿಕರನ್ನು 'ಎ' ವರ್ಗ ಎಂದು; ಗೊಬ್ಬರ ಕೊಡುವ, ಕಳೆ ತೆಗೆಯುವ, ನಾಟಿ ಮಾಡುವರನ್ನು 'ಬಿ' ವರ್ಗ ಎಂದು; ದನಕರುಗಳನ್ನು, ಕುರಿ, ಮೇಕೆ, ಆಡುಗಳನ್ನು ಮೇಯಿಸುವವರನ್ನು 'ಸಿ' ವರ್ಗಎಂದು: ಅಡಿಕೆ, ತೆಂಗು ಕೊಯ್ಲು, ಅವುಗಳ ಸಿಪ್ಪೆ ತೆಗೆಯುವ ಕೆಲಸ, ಅವುಗಳಿಗೆ ಔಷದ ಸಿಂಪಡಿಸುವ ಇತ್ಯಾದಿ ಕೆಲಸಗಳಲ್ಲಿ ತೊಡಗಿರುವ ಕಾರ್ಮಿಕರನ್ನು 'ಡಿ' ವರ್ಗ ಎಂದು ವರ್ಗೀಕರಿಸಲಾಗಿದೆ. ಇದರೊಂದಿಗೆ ಕುಶಲ ಕರ್ಮಿಗಳಾದ ಬಡಿಗ, ಅಕ್ಕಸಾಲಿಗ ಹಾಗೂ ಮೋಚಿ ಇವರಿಗೆ ಕೊಡುವ ಕೂಲಿ ದರಗಳ ಬಗ್ಗೆ ಮಾಹಿತಿಯನ್ನು ಸಹ ಸಂಗ್ರಹಿಸಲಾಗುತ್ತದೆ.

2017ರ ಜಿಲ್ಲಾ ಹಾಗು ತಾಲ್ಲೂಕವಾರು ಕೃಷಿ ಕೂಲಿ ಅಂಕಿ ಅಂಶಗಳ ವರದಿಯನ್ನು ತಯಾರಿಸಲಾಗಿದೆ.

**ಕರ್ನಾಟಕದಲ್ಲಿ ಬೆಲೆ ಪ್ರವೃತ್ತಿ**

ಈ ಪ್ರಕಟಣೆಯು ವಿವಿಧ ಅಂಕಿ ಅಂಶಗಳ ಮಾಹಿತಿಯನ್ನು ಒಳಗೊಂಡಿರುತ್ತದೆ. ಈ ನಿರ್ದೇಶನಾಲಯವು ಬೆಲೆ ಸಂಗ್ರಹಣೆ ಕಾರ್ಯವನ್ನು ವಾರಕ್ಕೆ ಅನುಗುಣವಾಗಿ, ಪಾಕ್ಷಿಕವಾಗಿ, ಮಾಹೆವಾರು ಹಾಗೂ ಋತುವಾರು ಸಂಗ್ರಹಿಸಲಾಗುತ್ತಿದೆ. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಬೆಲೆ ಅಂಕಿ ಅಂಶಗಳ ಮಾಹಿತಿಯು ಮುಖ್ಯ ಪೂರೈಕದಾರರಾಗಿರುತ್ತಾರೆ ಕರ್ನಾಟಕದಲ್ಲಿ ಬೆಲೆ ಪ್ರವೃತ್ತಿ – 2017 ರ ವರದಿಯ ಪ್ರತಿಯನ್ನು ತಯಾರಿಸಲಾಗಿದೆ.

**ಸುದ್ದಿ ಪತ್ರಿಕೆ:**

ಬೆಲೆ ಅಂಕಿ ಅಂಶಗಳು ದೇಶದ ಹಾಗೂ ರಾಜ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಮಹತ್ವವಾದ ಪಾತ್ರವನ್ನು ವಹಿಸುತ್ತಿವೆ. ಬೆಲೆಗಳಲ್ಲಿ ಆಗುವ ವ್ಯತ್ಯಾಸಗಳನ್ನು ಹಲವಾರು ವಿಧಾನಗಳಿಂದ ಅಂದಾಜಿಸಬಹುದಾಗಿದೆ. ಅವುಗಳಲ್ಲಿ ಪ್ರಮುಖವಾಗಿ ಉಪಯೋಗಿಸುವ ಎರಡು ವಿಧಾನಗಳಲ್ಲಿ ಸಗಟು ಬೆಲೆ ಸೂಚ್ಯಂಕ ಹಾಗೂ ಔದ್ಯಮಿಕ ಕಾರ್ಮಿಕ ಗ್ರಾಹಕ ಬೆಲೆ ಸೂಚ್ಯಂಕವಾಗಿರುತ್ತದೆ. ಸರ್ಕಾರ, ಔದ್ಯಮಿಕ

ಉದ್ದಿಮೆಗಳು ಹಾಗೂ ಇನ್ನಿತರ ಖಾಸಗಿ ಉದ್ದಿಮೆಗಳ ಉಪಯೋಗಕ್ಕಾಗಿ ಕರ್ನಾಟಕದಲ್ಲಿ ಹಲವಾರು ಪದಾರ್ಥಗಳ ಬೆಲೆಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗುತ್ತಿದೆ. ಈ ಸುದ್ಧಿ ಪತ್ರಿಕೆಯು ಬೆಲೆ ಸೂಚ್ಯಂಕಗಳ ಹಾಗೂ ರಾಜ್ಯಆದಾಯ ಇತರೆ ವಿಷಯಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಬೆಲೆಗಳು ಹಾಗೂ ರಾಜ್ಯಾದಾಯ ಆಧಾರಿತ 19ನೇ ಆವೃತ್ತಿಯ ಸುದ್ಧಿ ಪತ್ರಿಕೆಯು ಪ್ರಕಟಣೆಗೊಂಡಿರುತ್ತದೆ.

## ನಾಗರೀಕ ನೋಂದಣಿ ಪದ್ದತಿ, ರಾಷ್ಟೀಯ ಮಾದರಿ ಸಂಸ್ಥೆ ಮತ್ತು ಸ್ಥಳಿಯ ಅಂಕಿ–ಅಂಶಗಳು

**ಆಯವ್ಯಯ ಲೆಕ್ಕಶೀರ್ಷಿಕೆ:** 3454–02–111–0–00

ಜನನ, ಮರಣಗಳ ನೋಂದಣಿ ಅಧಿನಿಯಮ, 1969 ರಡಿಯಲ್ಲಿರುವ ನೋಂದಣಿ ದಾಖಲೆಗಳು ಎರಡು ಉದ್ದೇಶಗಳಿಗೆ ಉಪಯೋಗವಾಗುತ್ತವೆ. ಮೊದಲನೆಯದಾಗಿ ಕಾನೂನು ದಸ್ತಾವೇಜುಗಳ ಉಪಯೋಗಕ್ಕೆ ಹಾಗೂ ಎರಡನೆಯದಾಗಿ ಈ ಅಧಿನಿಯಮದಲ್ಲಿ ಹೊರತರುವ ವಾರ್ಷಿಕ ವರದಿಗೆ ಬೇಕಾಗುವ ಪ್ರಮುಖ ಅಂಕಿಅಂಶಗಳನ್ನು ನೀಡುವ ಮೂಲವಾಗಿದೆ. ಜನನ, ಮರಣಗಳ ನೋಂದಣಿಯು ಗ್ರಾಮೀಣ ಪ್ರದೇಶದಲ್ಲಿ 31613 ಹಾಗೂ ನಗರ ಪ್ರದೇಶದಲ್ಲಿ 809 ಘಟಕಗಳಲ್ಲಿ ನೋಂದಣಿಯಾಗಿರುತ್ತದೆ.

ಲಿಂಗವಾರು, ಉದ್ಯೋಗವಾರು, ಧರ್ಮವಾರು, ಜನನ ಕಾಲದಲ್ಲಿ ತಂದೆ ಮತ್ತು ತಾಯಿಯ ವಿದ್ಯಾರ್ಹತೆ ಮಟ್ಟ, ಜನನ ದರ, ಪ್ರಸವ ಸಮಯದಲ್ಲಿನ ಆರೈಕೆ ಮತ್ತು ವಿಧಾನ, ಗರ್ಭಧಾರಣೆಯ ಕಾಲಾವಧಿ, ಜನಿಸಿದಾಗ ತೂಕ, ಮರಣ ದರ, ಮರಣದ ವಾಸ್ತವಿಕ ಕಾರಣ, ವಿವಿಧ ಚಟಗಳಿಂದಾದ ಮರಣ, ಶಿಶು ಮರಣ, ತಾಯಂದಿರ ಮರಣ, ಮರಣ ಕಾಲದಲ್ಲಿನ ಆರೈಕೆ ಹಾಗೂ ನಿರ್ಜೀವ ಜನನದ ಅಂಕಿಅಂಶಗಳನ್ನು ಕ್ರೋಢೀಕರಿಸಲಾಗುವುದು.

2017–18ನೇ ಸಾಲಿಗೆ ರೂ 32.00ಲಕ್ಷಗಳನ್ನು ನಿಗದಿಪಡಿಸಲಾಗಿದ್ದು ಇದರಲ್ಲಿ ರೂ 18.35ಲಕ್ಷಗಳನ್ನು ವೆಚ್ಚಮಾಡಲಾಗಿದೆ. ಹಣಕಾಸು ವಿವರಣೆಯನ್ನು ಈ ಕೆಳಗೆ ನೀಡಲಾಗಿದೆ.

| ಬಂಡವಾಳ2016-17 | ರಾಜಸ್ವ 2017-18 | ವೆಚ್ಚ 2018-19 | |
|---|---|---|---|
| (1) | (2) | (3) | (4) |
| ಅಂದಾಜು | ವೆಚ್ಚ | ಅಂದಾಜು | ವೆಚ್ಚ |
| 47.00 | 12.00 | 32.00 | 18.35 |

**ಭೌತಿಕ ಸಾಧನೆಗಳು: (ಯೂನಿಟ್‌ಗಳು– ಸಾಂಖ್ಯಿಕ ವರದಿಗಳ ಗಣಕೀಕರಣ):**

- 2017ರ ಡಿಸೆಂಬರ್‌ಅಂತ್ಯಕ್ಕೆ 31613 ಗ್ರಾಮಾಂತರ ಹಾಗೂ 809 ನಗರ ಪ್ರದೇಶಗಳ ನೋಂದಣಿ ಘಟಕಗಳು
- ಜನನ, ಮರಣ ನೋಂದಣಿಯ ಅಧಿನಿಯಮ, 1969ರ 2017ನೇ ಸಾಲಿನ ವಾರ್ಷಿಕ ವರದಿ ಪ್ರಕಟಿಸಲಾಗಿದೆ.
- 2018ನೇ ಸಾಲಿನ ಜನನ, ಮರಣ ನೋಂದಣಿಯ ಅಧಿನಿಯಮ, 1969ರ ವರದಿ ತಯಾರಿಕೆಯು ಪ್ರಗತಿಯಲ್ಲಿದೆ.
- ಇ–ಜನ್ಮ ತಂತ್ರಾಂಶದಲ್ಲಿ ಜನನ ಮರಣ ನೋಂದಣಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಸ್ವೀಕೃತವಾಗುವ ದೂರುಗಳಿಗೆ ಸ್ಪಷ್ಟೀಕರಣ ನೀಡಲು ಸಹಾಯವಾಣಿಯನ್ನು ನಿರ್ವಹಿಸಲಾಗಿದೆ.

- 2017ನೇ ಸಾಲಿನ ಮರಣಕಾರಣ ವೈದ್ಯಕೀಯ ಪ್ರಮಾಣಪತ್ರ ವಾರ್ಷಿಕ ವರದಿಗಳನ್ನು ಹೊರತರಲಾಗಿದೆ.

**2015ರಿಂದ 2017ರ ವರೆಗಿನ ಜನನ, ಮರಣ ಮತ್ತು ನಿರ್ಜೀವ ಜನನ ಘಟನೆಗಳ ನೋಂದಣಿ ವಿವರ**

| ವರ್ಷ | ಜನನ | ಮರಣ | ನಿರ್ಜೀವ ಜನನ |
|---|---|---|---|
| **2015** | 1053248 | 393731 | 5067 |
| **2016** | 1107258 | 420774 | 4477 |
| **2017** | 1099019 | 481747 | 3781 |

## ರಾಷ್ಟ್ರೀಯ ಮಾದರಿ ಸಮೀಕ್ಷೆ:

1. ರಾಷ್ಟ್ರೀಯ ಮಾದರಿ ಸಮೀಕ್ಷೆಯ 73ನೇ ಸುತ್ತಿನ ಮಾಹಿತಿ ಸಂಸ್ಕರಣೆ ಕಾರ್ಯ ಪ್ರಗತಿಯಲ್ಲಿದೆ.
2. ರಾಷ್ಟ್ರೀಯ ಮಾದರಿ ಸಮೀಕ್ಷೆಯ 75ನೇ ಸುತ್ತಿನ ಗಣಕೀಕರಣ ಮತ್ತು ಸಂಸ್ಕರಣೆ ಕಾರ್ಯ ಪ್ರಗತಿಯಲ್ಲಿರುತ್ತದೆ.
3. ರಾಷ್ಟ್ರೀಯ ಮಾದರಿ ಸಮೀಕ್ಷೆಯ 71ನೇ ಸುತ್ತಿನ ಕೇಂದ್ರ ಮತ್ತು ರಾಜ್ಯ ಮಾದರಿಗಳನ್ನು ಸಂಯೋಜಿಸಿ, " ಕರ್ನಾಟಕದಲ್ಲಿ ಕುಟುಂಬಗಳ ಆರೋಗ್ಯ ಸ್ಥಿತಿ ಮತ್ತು ವೆಚ್ಚ " ವರದಿಯನ್ನು ಸಿದ್ಧಪಡಿಸಲಾಗಿದೆ.

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ನೌಕರರ ಪ್ರಾತಿನಿಧ್ಯತೆಯ ವರದಿ:

ರಾಜ್ಯ ಸರ್ಕಾರಿ ಸೇವೆಯಲ್ಲಿ ದಿನಾಂಕ 31.3.2018 ರಲ್ಲಿದ್ದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರ ಪ್ರಾತಿನಿಧ್ಯದ ವರದಿಯನ್ನು ಪ್ರಕಟಿಸಲಾಗಿದೆ.

## ರಾಷ್ಟ್ರೀಯ ಕಟ್ಟಡ ನಿರ್ಮಾಣ ಸಂಸ್ಥೆ (NBO):

ರಾಷ್ಟ್ರೀಯ ಕಟ್ಟಡ ನಿರ್ಮಾಣ ಸಂಸ್ಥೆ ರಾಜ್ಯದಲ್ಲಿ ಗುರುತಿಸಿರುವ 17 ನಗರ ಪ್ರದೇಶಗಳ ವಸತಿ ಕಟ್ಟಡ ನಿರ್ಮಾಣಕ್ಕೆ ನೀಡಲಾಗಿರುವ ಅನುಮತಿಯ ಮಾಹಿತಿಯನ್ನು ಹಾಗೂ ಕಟ್ಟಡ ನಿರ್ಮಾಣ ಸಾಮಗ್ರಿಗಳ ಮಾರುಕಟ್ಟೆ ದರ, ಕಾರ್ಮಿಕರ ಕೂಲಿ ದರ, ವಸತಿ ಕಟ್ಟಡ ನಿವೇಶನದ ವೃತ್ತದರ, ನಿವೇಶನ ಮತ್ತು ಕಟ್ಟಡ ಮಾರುಕಟ್ಟೆ ದರ ಮತ್ತು ಬಾಡಿಗೆ ದರಗಳ ಮಾಹಿತಿಗಳನ್ನು ಪ್ರತೀ ತ್ರೈಮಾಸಿಕದಲ್ಲೂ ಸಂಗ್ರಹಿಸಿ ಆನ್‌ಲೈನ್ ಮುಖಾಂತರ NBO ರವರಿಗೆ BRIKS (Building Related Information Knowledge System) ತಂತ್ರಾಂಶದಲ್ಲಿ ರವಾನಿಸುವ ಜವಾಬ್ದಾರಿಯನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ನಿರ್ವಹಿಸುತ್ತಿದೆ. 2018–19ನೇ ಸಾಲಿನ ಎಲ್ಲಾ ತ್ರೈಮಾಸಿಕಗಳ ಮಾಹಿತಿ ಸಂಗ್ರಹಣೆ ಹಾಗೂ ಗಣಕೀಕರಣ ಕಾರ್ಯ ಪೂರ್ಣಗೊಂಡಿದೆ.

## ಪ್ರಕಟಣೆ, ತರಬೇತಿ ಮತ್ತು ಸಮನ್ವಯ ವಿಭಾಗ (ಪಿಟಿಸಿ ವಿಭಾಗ) :–

ಈ ವಿಭಾಗದಲ್ಲಿ ಒಟ್ಟು 2 ಶಾಖೆಗಳನ್ನು ಹೊಂದಿರುತ್ತವೆ ಅವುಗಳು ಪ್ರಕಟಣಾ ಶಾಖೆ, ತರಬೇತಿ ಮತ್ತು ಸಮನ್ವಯ ಶಾಖೆ, ವಿವಿಧ ಸಾಮಾಜಿಕ–ಆರ್ಥಿಕ ವಿಷಯಗಳ ಅಂಕಿ ಅಂಶಗಳ ಸಂಗ್ರಹಣೆ, ವರ್ಗೀಕರಣ, ಕೋಷ್ಟಕೀಕರಣ, ವಿಶ್ಲೇಷಣೆ ಹಾಗೂ ಮಂಡನೆಯನ್ನು ನಿಯತಕಾಲಿಕ ಪ್ರಕಟಣೆ ಮತ್ತು ವರದಿಗಳ ಮೂಲಕ ಹೊರತರುವುದು. ಈ ಶಾಖೆಯ ಪ್ರಮುಖ ಕಾರ್ಯವಾಗಿರುತ್ತದೆ.

ಈ ವಿಭಾಗದಿಂದ 2018–19ನೇ ಸಾಲಿಗೆ ಈ ಕೆಳಕಂಡ ಪ್ರಕಟಣೆಗಳನ್ನು ಹೊರತರಲಾಗಿದೆ.

1) ಕರ್ನಾಟಕ ಅಂಕಿ ಅಂಶಗಳ ನೋಟ
2) ಕರ್ನಾಟಕ ಅಂಕಿ ಅಂಶಗಳ ಘೋಷ್ವಾರೆ, 2017–18ನೇ ಸಾಲಿನ ವರದಿ
3) ಕರ್ನಾಟಕದಲ್ಲಿ ಪುರುಷ ಮತ್ತು ಮಹಿಳೆ 2017–18ನೇ ಸಾಲಿನ ವರದಿ
4) 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ

**ಕರ್ನಾಟಕ ಅಂಕಿ ಅಂಶಗಳ ನೋಟ**

ಕರ್ನಾಟಕ ಅಂಕಿ ಅಂಶಗಳ ನೋಟ ಒಂದು ವಾರ್ಷಿಕ ಪ್ರಕಟಣೆಯಾಗಿದ್ದು, ವಿವಿಧ ಇಲಾಖೆಗಳ ಆರ್ಥಿಕ ಮತ್ತು ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದಂತೆ ಜಿಲ್ಲಾವಾರು ಮಾಹಿತಿಗಳನ್ನು ಅಳವಡಿಸಲಾಗುತ್ತದೆ. ಪ್ರಮುಖವಾಗಿ ವಿಸ್ತೀರ್ಣ ಮತ್ತು ಜನಸಂಖ್ಯೆ, ಕೃಷಿ, ಪಶುಸಂಗೋಪನೆ, ಕೈಗಾರಿಕೆ, ಬ್ಯಾಂಕಿಂಗ್, ಸಹಕಾರ ಮತ್ತು ಕೃಷಿ ಮಾರಾಟ, ಸಾರಿಗೆ ಮತ್ತು ಸಂಪರ್ಕ, ಶಿಕ್ಷಣ, ಆರೋಗ್ಯ, ವಿದ್ಯಾರ್ಥಿ ನಿಲಯಗಳು ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಂದ ಸಂಗ್ರಹಿಸಿ, ಗಣಕೀಕರಿಸಿ, ಪ್ರಕಟಣೆಯನ್ನು ಸಿದ್ಧಪಡಿಸಲಾಗುತ್ತದೆ. 2017–18ನೇ ಸಾಲಿಗೆ **ಕರ್ನಾಟಕ ಅಂಕಿ ಅಂಶಗಳ ನೋಟ** ಸಿದ್ದಪಡಿಸಿ ಮುದ್ರಣಾಲಯಕ್ಕೆ ಮುದ್ರಿಸಲು ಕಳುಹಿಸಲಾಗಿದೆ.

**ಕರ್ನಾಟಕ ಅಂಕಿ ಅಂಶಗಳ ಘೋಷ್ವಾರೆ**

ಕರ್ನಾಟಕ ಅಂಕಿ ಅಂಶಗಳ ಘೋಷ್ವಾರೆ ಪ್ರಕಟಣೆಯು ವಾರ್ಷಿಕ ಪ್ರಕಟಣೆಯಾಗಿದ್ದು, ಇದರ ಮೂಲ ಉದ್ದೇಶ ಪ್ರತಿಯೊಂದು ವಿಷಯಕ್ಕೂ 3 ವರ್ಷಗಳ ಮಾಹಿತಿಯನ್ನು (Time series data) ಕ್ರೋಢೀಕರಿಸಿ ಪ್ರಸ್ತುತ ವರ್ಷಕ್ಕೆ ಜಿಲ್ಲಾವಾರು ಮಾಹಿತಿಯನ್ನು ಅಳವಡಿಸಿ ಪ್ರಕಟಿಸಲಾಗುತ್ತದೆ. ಇದರಿಂದ ಸಂಬಂಧಪಟ್ಟ ವಿಷಯದ ಬಗ್ಗೆ ವಿಶ್ಲೇಷಣೆ ಮಾಡಲು ಅನುಕೂಲವಾಗುತ್ತದೆ. ಈ ಪ್ರಕಟಣೆಯಲ್ಲಿ ರಾಜ್ಯದ ಭೂ ವಿಸ್ತರಣೆ, ಜನಸಂಖ್ಯೆ, ಮಳೆ, ಅರಣ್ಯ, ವ್ಯವಸಾಯ, ಪಶುಸಂಗೋಪನೆ, ಮೀನುಗಾರಿಕೆ, ನೀರಾವರಿ, ಖನಿಜ ಸಂಪತ್ತು, ಇಂಧನ ಉತ್ಪತ್ತಿ, ಕೈಗಾರಿಕೆ, ಬ್ಯಾಂಕ್‌ಗಳು, ಸಹಕಾರ ಮತ್ತು ನಿಯಂತ್ರಿತ ಮಾರುಕಟ್ಟೆ, ವ್ಯಾಪಾರ, ಸಾರಿಗೆ ಮತ್ತು ಸಂಪರ್ಕ, ಉದ್ಯೋಗ ಮತ್ತು ಮಾನವ ಜನಶಕ್ತಿ, ಕಾರ್ಮಿಕ ಮಾಹಿತಿ, ಬೆಲೆಗಳು, ರಾಜ್ಯಾದ್ಯಾಯ, ರಾಜ್ಯ ಹಣಕಾಸು, ಆಡಳಿತ–ಸಾಂಸ್ಥಿಕ ಮಾಹಿತಿ, ಶಿಕ್ಷಣ, ಸಾರ್ವಜನಿಕ ಜನಾರೋಗ್ಯ, ಸಮಾಜ ಕಲ್ಯಾಣ, ವಸತಿ ಮತ್ತು ಉಗ್ರಾಣ ಹಾಗೂ ಇತರೆ ಮಾಹಿತಿಗಳು ಮತ್ತು ಭಾರತದ ಭೂ ವಿಸ್ತೀರ್ಣ, ಜನಸಂಖ್ಯೆ, ಮಳೆ ಬೆಲೆಗಳು ಹಾಗೂ ಇತರೆ ಮಾಹಿತಿ ಒಳಗೊಂಡಿರುತ್ತದೆ. 2017–18ನೇ ಸಾಲಿಗೆ **ಕರ್ನಾಟಕ ಅಂಕಿ ಅಂಶಗಳ ಘೋಷ್ವಾರೆ** ಸಿದ್ದಪಡಿಸಿ ಮುದ್ರಣಾಲಯಕ್ಕೆ ಮುದ್ರಿಸಲು ಕಳುಹಿಸಲಾಗಿದೆ.

**ಕರ್ನಾಟಕದಲ್ಲಿ ಪುರುಷರು ಮತ್ತು ಮಹಿಳೆಯರು (2017–18):**

ಕರ್ನಾಟಕದಲ್ಲಿ ಪುರುಷರು ಮತ್ತು ಮಹಿಳೆಯರು ಒಂದು ವಾರ್ಷಿಕ ವರದಿಯಾಗಿದ್ದು, ಪುರುಷರು ಮತ್ತು ಮಹಿಳೆಯರ ಜನಸಂಖ್ಯೆ, ಸಾಕ್ಷರತೆ, ಶಿಕ್ಷಣ, ಆರೋಗ್ಯ, ಮಹಿಳೆಯರ ಸಾಂವಿಧಾನಿಕ ಹಕ್ಕುಗಳು, ಮಹಿಳೆಯರು ಆರ್ಥಿಕವಾಗಿ, ರಾಜಕೀಯವಾಗಿ ಪಾಲ್ಗೊಳ್ಳುವಿಕೆ, ಮಹಿಳಾ ಸಬಲೀಕರಣ ಹಾಗೂ ಮಹಿಳೆಯರ ದೌರ್ಜನ್ಯದ ಬಗೆಗಿನ ಮಾಹಿತಿ ಒಳಗೊಂಡಿರುತ್ತದೆ ಮತ್ತು ಮಹಿಳೆಯರಿಗೆ ಸಂಬಂಧಿಸಿದ ಇನ್ನಿತರ ಮಾಹಿತಿಗಳು ಕೂಡ ಸೇರಿರುತ್ತದೆ.

**ತರಬೇತಿ:**

- 2018–19ನೇ ಸಾಲಿನಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ 93 ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಸಂಗ್ರಹಣೆ, ಸಂಕಲನ ಮತ್ತು ಆಡಳಿತ ತರಬೇತಿ ಸಂಸ್ಥೆ, ಮೈಸೂರು, ವಿತ್ತೀಯ ಕಾರ್ಯನೀತಿ ಸಂಸ್ಥೆ, ಬೆಂಗಳೂರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು ಜಿಲ್ಲಾ ತರಬೇತಿ ಕೇಂದ್ರ, ಬೆಂಗಳೂರು ಇಲ್ಲಿ ಅಂಕಿ ಅಂಶಗಳ ವಿಶ್ಲೇಷಣೆ ತರಬೇತಿಯನ್ನು ಹೊಂದಿರುತ್ತಾರೆ.
- 2018–19ನೇ ಸಾಲಿನಲ್ಲಿ 05 ಪ್ರೊಬೇಷನರ್ಸ್ ಸಹಾಯಕ ನಿರ್ದೇಶಕರುಗಳು ತರಬೇತಿ ಹೊಂದಿರುತ್ತಾರೆ.
- 61 ವಿದ್ಯಾರ್ಥಿಗಳು ಧಾರವಾಡ ಕೃಷಿ ವಿಶ್ವವಿದ್ಯಾಲಯಿಂದ ಕೃಷಿ ಅಂಕಿ ಅಂಶಗಳ ಬಗ್ಗೆ ತರಬೇತಿಯನ್ನು ಪಡೆದಿರುತ್ತಾರೆ.

# ಅಧ್ಯಾಯ – 3

## ಸಾರ್ವಜನಿಕ ಸಂಸ್ಥೆಗಳು, ಸಂಘಗಳು ಮತ್ತು ಎಸ್‌ಪಿವಿ (Special Purpose Vehicle) ಗಳ ಕಾರ್ಯನಿರ್ವಹಣೆ

### ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ(ಕೆಎಸ್‌ಎಸ್‌ಡಿಎ)

ಕರ್ನಾಟಕ ಸರ್ಕಾರವು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಮತ್ತು ಇತರೆ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳ ಸದಸ್ಯತ್ವದೊಂದಿಗೆ "ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ"ಯನ್ನು ಸರ್ಕಾರದ ಆದೇಶ ಸಂಖ್ಯೆ:ಪಿಡಿ/64/ ಎಸ್‌ಎಂಪಿ/2008, ದಿನಾಂಕ 25.03.2009ರ ಮೂಲಕ ಸ್ಥಾಪಿಸಲಾಗಿದೆ. ಸದರಿ ಸಂಸ್ಥೆಯನ್ನು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರಡಿ ದಿನಾಂಕ 20.04.2009ರಂದು ನೋಂದಾಯಿಸಲಾಗಿದೆ.

ರಾಜ್ಯ ಸಾಂಖ್ಯಿಕ ವ್ಯವಸ್ಥೆಯನ್ನು ಸುಧಾರಿಸಲು ಭಾರತೀಯ ಸಾಂಖ್ಯಿಕ ಬಲವರ್ಧನೆ ಯೋಜನೆಯಡಿ ತಯಾರಿಸಿದ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯನ್ನು ರೂಪಿಸುವುದು ಮತ್ತು ಅನುಷ್ಠಾನಗೊಳಿಸುವುದು.

ಈ ಸಂಸ್ಥೆಯು 1ನೇ ಅಕ್ಟೋಬರ್ 2010 ರಿಂದ ಕಾರ್ಯನಿರ್ವಹಿಸುತ್ತಿದೆ. ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ನಡುವಿನ ಪರಿಷ್ಕೃತ ಒಡಂಬಡಿಕೆಗೆ 23ನೇ ಜನವರಿ 2017 ರಂದು ಸಹಿ ಹಾಕಲಾಗಿದೆ. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ಆಡಳಿತ ಪರಿಷತ್ತಿನ ನಿರ್ಣಯಗಳನ್ನು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯ ಯೋಜನಾ ನಿರ್ದೇಶಕರು ಅನುಷ್ಠಾನಿಸುವರು.

ಸರ್ಕಾರದ ಆದೇಶ ಸಂಖ್ಯೆ: ಪಿಡಿ 42 ಎಸ್‌ಎಂಪಿ 2009, ದಿನಾಂಕ 11.08.2009ರಲ್ಲಿ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ(ಕೆಎಸ್‌ಎಸ್‌ಡಿಎ)ಯಡಿ ಸೃಜಿಸಲಾಗಿರುವ ಹುದ್ದೆಗಳು ಕೆಳಗಿನಂತಿದೆ:

| ಕ್ರ. ಸಂ. | ಹುದ್ದೆ | ಹುದ್ದೆಗಳ ಸಂಖ್ಯೆ | 31.03.2019 ಕ್ಕೆ ಇದ್ದಂತೆ ಕಾರ್ಯನಿರತ/ ಖಾಲಿ |
|---|---|---|---|
| 1 | ಯೋಜನಾ ನಿರ್ದೇಶಕರು | 1 | ಕಾರ್ಯನಿರತ |
| 2 | ಉಪ ನಿರ್ದೇಶಕರು | 1 | ಕಾರ್ಯನಿರತ |
| 3 | ಸಹಾಯಕ ಸಾಂಖ್ಯಿಕ ಅಧಿಕಾರಿ | 2 | ಕಾರ್ಯನಿರತ |
| 4 | ಅಧೀಕ್ಷಕರು | 1 | ಕಾರ್ಯನಿರತ |
| 5 | ಪ್ರಥಮ ದರ್ಜೆ ಸಹಾಯಕ | 1 | ಪ್ರಥಮ ದರ್ಜೆ ಸಹಾಯಕರ ಬದಲಿಗೆ ದ್ವಿತೀಯ ದರ್ಜೆ ಸಹಾಯಕರು ಕಾರ್ಯನಿರತ |
| 6 | ಶೀಘ್ರಲಿಪಿಗಾರರು/ ಬೆರಳಚ್ಚುಗಾರರು ಕಮ್ ಕಿರಿಯ ಸಹಾಯಕ | 2 | ಇಬ್ಬರು ಕಂಪ್ಯೂಟರ್ ಅಪರೇಟರ್‌ಗಳು ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರತ |
| 7 | ಗ್ರೂಪ್ ಡಿ | 2 | ಇಬ್ಬರು ಗ್ರೂಪ್ ಡಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರತ |
| | **ಒಟ್ಟು** | **10** | **10** |

ಹೊರಗುತ್ತಿಗೆ ಆಧಾರದ ಮೇಲೆ ಇಬ್ಬರು ಕಂಪ್ಯೂಟರ್ ಆಪರೇಟರನ್ನು ಹಾಗೂ ಇಬ್ಬರು ಗ್ರೂಪ್ ಡಿ ಗಳ ಸೇವೆಯನ್ನು ಕಿಯೋನಿಕ್ಸ್, ಬೆಂಗಳೂರು ಇವರಿಂದ ಪಡೆಯಲಾಗಿದೆ.

# ಅಧ್ಯಾಯ – 4
# ಮೌಲ್ಯಮಾಪನದ ಅಧ್ಯಯನಗಳು

**17ನೇ ಸುತ್ತಿನ ಮಾದರಿ ಸಮೀಕ್ಷೆ 2017–18:**

- ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿ ಊಟದ ಯೋಜನೆ
- ವಿಕಲಚೇತನರು ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಗೆ ಒಳಪಡುವ ಸಂಸ್ಥೆಗಳಿಗೆ ಒದಗಿಸುತ್ತಿರುವ ಸೌಲಭ್ಯಗಳ ಯೋಜನೆ
- ಪ್ರವಾಸೋದ್ಯಮ ಇಲಾಖೆಯಿಂದ ಪ್ರವಾಸಿ ತಾಣಗಳಲ್ಲಿ ಒದಗಿಸಿರುವ ಮೂಲಭೂತ ಸೌಲಭ್ಯಗಳ ಯೋಜನೆ
- ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ – ಇತರೆ ಉಪಚಾರಗಳು.

ಈ ಮೇಲ್ಕಂಡ 4 ಯೋಜನೆಗಳ ಮಾದರಿ ಸಮೀಕ್ಷೆಯ ಅಧ್ಯಯನವನ್ನು ಪೂರ್ಣಗೊಳಿಸಿ, ವರದಿಯನ್ನು ತಯಾರಿಸಿ ಸಂಬಂಧಪಟ್ಟ ಇಲಾಖೆಗಳಿಗೆ ಸೂಕ್ತ ಕ್ರಮ ಹಾಗೂ ಅನುಷ್ಠಾನಕ್ಕಾಗಿ ಕಳುಹಿಸಿಕೊಡಲಾಗಿದೆ.

**18ನೇ ಸುತ್ತಿನ ಮಾದರಿ ಸಮೀಕ್ಷೆ 2018–19:**

- 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್ ವಿತರಣೆ
- ಪಶುಭಾಗ್ಯ ಯೋಜನೆ
- ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ
- ವಿಕಲಚೇತನರ ಮಾಸಾಶನ

ಈ ಮೇಲ್ಕಂಡ 4 ಯೋಜನೆಗಳ ಮಾದರಿ ಸಮೀಕ್ಷೆಯ ಅಧ್ಯಯನವನ್ನು ಪೂರ್ಣಗೊಳಿಸಿ, ವರದಿಯನ್ನು ತಯಾರಿಸಿ ಸಂಬಂಧಪಟ್ಟ ಇಲಾಖೆಗಳಿಗೆ ಸೂಕ್ತ ಕ್ರಮ ಹಾಗೂ ಅನುಷ್ಠಾನಕ್ಕಾಗಿ ಕಳುಹಿಸಿಕೊಡಲಾಗಿದೆ.

**ಪ್ರಕಟಣೆಗಳು/ವರದಿಗಳು:**

2017–18 ಮತ್ತು 2018–19 ರಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಿಂದ ಹೊರತರಲಾಗಿರುವ ನಿಯತಕಾಲಿಕ ವರದಿ/ಪ್ರಕಟಣೆಗಳನ್ನು ಅನುಬಂಧ 2 ಮತ್ತು ಅನುಬಂಧ 3 ರಲ್ಲಿ ಕ್ರಮವಾಗಿ ನೀಡಲಾಗಿದೆ.

**ಆರ್ಥಿಕ ಸಮೀಕ್ಷೆ 2018–19**

2018–19ನೇ ಸಾಲಿನ ಆರ್ಥಿಕ ಸಮೀಕ್ಷೆಯ ವರದಿಯನ್ನು ಸಿದ್ದಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಯಿತು.

# ಅಧ್ಯಾಯ – 5

## ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಆಡಳಿತಾತ್ಮಕ ಚಟುವಟಿಕೆಗಳಲ್ಲಿ ಸಾಧನೆ

**ಅ) ಸಿಬ್ಬಂದಿ:**

ನಿರ್ದೇಶನಾಲಯ, ಅಧೀನ ಕಚೇರಿಗಳು ಮತ್ತು ನಿಯೋಜನೆ ಮೇಲೆ ಇತರೆ ಇಲಾಖೆಗಳಲ್ಲಿರುವ ವೃಂದವಾರು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಧಿಕಾರಿ ಮತ್ತು ಸಿಬ್ಬಂದಿಯ ಮಂಜೂರಾದ, ಭರ್ತಿಯಾದ, ಖಾಲಿಯಿರುವ ಹುದ್ದೆಗಳ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

**ಆ) ನಿವೃತ್ತಿ:**

ಪ್ರಸ್ತುತ ವರ್ಷದಲ್ಲಿ ನಿವೃತ್ತಿ ಹೊಂದಿರುವ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

| ಕ್ರ. ಸಂ | ಗ್ರೂಪ್ | ನಿವೃತ್ತಿ ಹೊಂದಿದವರ ಸಂಖ್ಯೆ 2018–19 |
|---|---|---|
| 1 | ಎ | 19 |
| 2 | ಬಿ | 11 |
| 3 | ಸಿ | 19 |
| 4 | ಡಿ | 3 |
| ಒಟ್ಟು | | 52 |

**ಇ) ಹೊರಗುತ್ತಿಗೆ:**

ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಪಡೆದ ವ್ಯಕ್ತಿಗಳ ಸಂಖ್ಯೆ ಈ ಕೆಳಗೆ ನೀಡಲಾಗಿದೆ.

| ಕ್ರ.ಸಂ | ಹುದ್ದೆ | ಸಂಖ್ಯೆ |
|---|---|---|
| 1 | ಸಾಂಖ್ಯಿಕ ನಿರೀಕ್ಷಕರು | 97 |
| 2 | ಬೆರಳಚ್ಚುಗಾರರು | 34 |
| 3 | ವಾಹನ ಚಾಲಕರು | 02 |
| 4 | ಗ್ರೂಪ್ ಡಿ | 33 |
| ಒಟ್ಟು | | 166 |

**ಈ) ನೂತನ ಆಡಳಿತಾತ್ಮಕ ಕ್ರಮಗಳು:**

ಇಲಾಖೆಯ ಸಾಮರ್ಥ್ಯವನ್ನು ಹೆಚ್ಚಿಸಲು ಈ ಕೆಳಗಿನ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗಿದೆ.

i) ಈ ಕೆಳಕಂಡ ಹುದ್ದೆಗಳಿಗೆ ನೇಮಕಾತಿಯನ್ನು ಅನುಕಂಪದ ಆಧಾರದ ಮೇಲೆ ಮಾಡಲಾಗಿದೆ.

| | |
|---|---|
| 1. ಗಣತಿದಾರರು | 01 |
| ಒಟ್ಟು | 01 |

ii) 2018–19 ನೇ ಸಾಲಿನಲ್ಲಿ ಈ ಕೆಳಗಿನ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ದವರಿಗೆ ಬಡ್ತಿ ನೀಡಲಾಗಿದೆ.

| ಕ್ರ.ಸಂ | ಬಡ್ತಿ | |
|---|---|---|
| 1 | ಜಂಟಿ ನಿರ್ದೇಶಕರು | 05 |
| 2 | ಉಪ ನಿರ್ದೇಶಕರು | 38 |
| 3 | ಸಹಾಯಕ ನಿರ್ದೇಶಕರು | – |
| 4 | ಸಹಾಯಕ ಸಾಂಖ್ಯಿಕ ಅಧಿಕಾರಿ | – |
| 5 | ಸಾಂಖ್ಯಿಕ ನಿರೀಕ್ಷಕರು | – |
| 6 | ಪತ್ರಾಂಕಿತ ವ್ಯವಸ್ಥಾಪಕರು | – |
| 7 | ಅಧೀಕ್ಷಕರು | – |
| 8 | ಪ್ರಥಮ ದರ್ಜೆ ಸಹಾಯಕರು | – |
| 9 | ದ್ವಿತೀಯ ದರ್ಜೆ ಸಹಾಯಕರು | – |
| 10 | ಹಿರಿಯ ಬೆರಳಚ್ಚುಗಾರರು | – |
| 11 | ಶೀಘ್ರಲಿಪಿಗಾರರು | – |
| 12 | ಗಣತಿದಾರರು | – |
| 13 | ಗುಂಪು ಡಿ ನೌಕರರು | – |
| ಒಟ್ಟು | | 43 |

**ಉ) ರಾಜ್ಯ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಕೈಗೊಂಡ ತಪಾಸಣೆಗಳು:**

ಕೇಂದ್ರ ಕಛೇರಿಯ ತಪಾಸಣಾ ತಂಡ, ಆಸಾಂನಿ ಕೈಗೊಂಡಿರುವ ಆಡಳಿತ/ಲೆಕ್ಕ/ತಾಂತ್ರಿಕ ತಪಾಸಣೆಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

1. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಬೆಂಗಳೂರು ನಗರ
2. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಹಾಸನ
3. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಮೈಸೂರು
4. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ರಾಮನಗರ
5. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಕಲಬುರಗಿ

ಜಿಲ್ಲಾ ಸಂಖ್ಯಾಸಂಗ್ರಣಾಧಿಕಾರಿಗಳು ತಾಲ್ಲೂಕ ಕಛೇರಿಗಳಲ್ಲಿರುವ ಸಾಂಖ್ಯಿಕ ನಿರೀಕ್ಷರ ದಪ್ತರಗಳ ತಪಾಸಣೆಗಳನ್ನು ನಿಯತವಾಗಿ ಕೈಗೊಳ್ಳುತ್ತಿದ್ದಾರೆ.

# ಅಧ್ಯಾಯ – 6

## ಲೆಕ್ಕ ಪರಿಶೋಧನೆಯ ಆಕ್ಷೇಪಣೆಗಳು, ವ್ಯಾಜ್ಯಗಳು, ವಿಧಾನ ಸಭೆ/ ವಿಧಾನ ಪರಿಷತ್ತಿನ ಪ್ರಶ್ನೆಗಳು

### 1) ಲೆಕ್ಕ ಪರಿಶೋಧನೆ:

2018–19ನೇ ಸಾಲಿಗೆ ಸಂಬಂಧಿಸಿದಂತೆ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಲೆಕ್ಕ ಪರಿಶೋಧನೆಯನ್ನು ಕರ್ನಾಟಕದ ಮಹಾಲೇಖಪಾಲರವರು ಇನ್ನು ಕೈಗೊಂಡಿರುವುದಿಲ್ಲ.

### 2) ನ್ಯಾಯಾಲಯ ಮತ್ತು ನ್ಯಾಯ ಮಂಡಳಿಗಳಲ್ಲಿ ಬಾಕಿ ಪ್ರಕರಣಗಳು:

ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಬಾಕಿಯಿರುವ ಪ್ರಕರಣಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

**ನ್ಯಾಯಾಲಯ/ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಪ್ರಕರಣಗಳು**

| ಹುದ್ದೆಯ ಹೆಸರು | ಬಾಕಿ ಇರುವ ಪ್ರಕರಣಗಳು |
|---|---|
| 1. ಉಪ ನಿರ್ದೇಶಕರು | 04 |
| 2. ಸಹಾಯಕ ನಿರ್ದೇಶಕರು | 01 |
| 3. ಸಹಾಯಕ ಸಾಂಖ್ಯಿಕ ಅಧಿಕಾರಿಗಳು | 08 |
| 4. ಸಾಂಖ್ಯಿಕ ನಿರೀಕ್ಷಕರು | 01 |
| 5. ಗಣತಿದಾರರು | 03 |
| 6. ದ್ವಿತೀಯ ದರ್ಜೆ ಸಹಾಯಕರು | 01 |
| **ಒಟ್ಟು:** | **18** |

### 3) ಮಾಹಿತಿ ಹಕ್ಕು:

ಮಾಹಿತಿ ಹಕ್ಕು ಅಧಿನಿಯಮದ ವಿವರಗಳನ್ನು ಇಲಾಖೆಯ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲಾಗಿದೆ. ಸ್ವೀಕೃತಿಯಾದ, ಉತ್ತರಿಸಲಾಗಿರುವ, ತಿರಸ್ಕೃತವಾದ ಮತ್ತು ಬಾಕಿ ಇರುವ ಮೇಲ್ಮನವಿ ಅರ್ಜಿಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

**ಮಾಹಿತಿ ಹಕ್ಕು ಅಧಿನಿಯಮದ ಪ್ರಕರಣಗಳು;**

| ಕ್ರ. ಸಂ | ಅರ್ಜಿಗಳು | ಸಂಖ್ಯೆ |
|---|---|---|
| 1 | ಸ್ವೀಕೃತಿಯಾದವು | 64 |
| 2 | ಉತ್ತರಿಸಲಾಗಿರುವವು | 62 |
| 3 | ತಿರಸ್ಕೃತವಾದವುಗಳು | 02 |
| 4 | ಬಾಕಿ ಇರುವ ಮೇಲ್ಮನವಿ ಪ್ರಕರಣಗಳು | 00 |

**4) ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಪ್ರಶ್ನೆಗಳು:**
ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಪ್ರಶ್ನೆಗಳ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ.

ವಿಧಾನ ಸಭೆ ಪ್ರಶ್ನೆಗಳು

| ಕ್ರಮ ಸಂಖ್ಯೆ | ಪ್ರಶ್ನೆಗಳು | ಸಂಖ್ಯೆ |
|---|---|---|
| 1 | ಸ್ವೀಕೃತವಾದವು | 10 |
| 2 | ಉತ್ತರಿಸಿದವು | 10 |
| 3 | ಬಾಕಿ ಇರುವಂತಹವು | ಇಲ್ಲ |

ವಿಧಾನ ಪರಿಷತ್ತಿನ ಪ್ರಶ್ನೆಗಳು

| ಕ್ರಮ ಸಂಖ್ಯೆ | ಪ್ರಶ್ನೆಗಳು | ಸಂಖ್ಯೆ |
|---|---|---|
| 1 | ಸ್ವೀಕೃತವಾದವು | 12 |
| 2 | ಉತ್ತರಿಸಿದವು | 12 |
| 3 | ಬಾಕಿ ಇರುವಂತಹವು | ಇಲ್ಲ |


5) **ಲೋಕಾಯುಕ್ತ/ಇಲಾಖಾ ವಿಚಾರಣೆ:** ಈ ವಿವರಗಳನ್ನು ಕೆಳಗೆ ಕೊಡಲಾಗಿದೆ.

**ಲೋಕಾಯುಕ್ತ/ಇಲಾಖಾ ವಿಚಾರಣಾ ಪ್ರಕರಣಗಳು**

| ಹುದ್ದೆಯ ಹೆಸರು | ಚಾಲ್ತಿಯಲ್ಲಿರುವ ಪ್ರಕರಣಗಳು | ಮುಕ್ತಾಯಗೊಳಿಸಿರುವ ಪ್ರಕರಣಗಳು | ಬಾಕಿ ಇರುವ ಪ್ರಕರಣಗಳು |
|---|---|---|---|
| ಸಹಾಯಕ ಸಾಂಖ್ಯಿಕ ಅಧಿಕಾರಿ | 09 | – | 09 |
| ಸಾಂಖ್ಯಿಕ ನಿರೀಕ್ಷಕರು | 03 | 01 | 02 |
| ಗಣತಿದಾರರು | 01 | – | 01 |
| **ಒಟ್ಟು** | **13** | **01** | **12** |

# ಅನುಬಂಧ – 1

## ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕಾರ್ಯವ್ಯವಸ್ಥೆಯ ನಕ್ಷೆ




| | |
|---|---|
| ಆಡಳಿತ | – ಆಡಳಿತ ಮತ್ತು ಲೆಕ್ಕ |
| ಎಜಿಎಸ್ | – ಕೃಷಿ ಅಂಕಿ ಅಂಶಗಳು |
| ಸಿಐಎಸ್ | – ಬೆಳೆ ವಿಮಾ ಯೋಜನೆ |
| ಎಆರ್‌ಸಿ | – ಕೃಷಿ ಗಣತಿ, ಮಳೆ ಮತ್ತು ಗಣಕಕೇಂದ್ರ |
| ಸಿಪ್ | – ರಾಜ್ಯಾದಾಯ, ಕೈಗಾರಿಕೆ, ಬೆಲೆ, ಕಂಬಳ ಮತ್ತು ಸೂಚ್ಯಾಂಕ |
| ಪಿ ಟಿ ಸಿ | – ಪ್ರಕಟಣೆ, ತರಬೇತಿ ಮತ್ತು ಸಮನ್ವಯ |
| ಸಿಎನ್‌ಎಲ್ | – ನಾಗರಿಕ ನೋಂದಣಿ, ರಾಷ್ಟ್ರೀಯ ಮಾದರಿ ಸಮೀಕ್ಷೆ ಮತ್ತು ಸ್ಥಳೀಯ ಸಂಸ್ಥೆಗಳು |

## ಅನುಬಂಧ – 2

**2017–18 ನೇ ಸಾಲಿನ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಿಂದ ಹೊರತರಲಾಗುತ್ತಿರುವ ಪ್ರಕಟಣೆಗಳು ವಿವರಗಳು.**

| ಕ್ರಮ. ಸಂಖ್ಯೆ | ಪ್ರಕಟಣೆಗಳ ಹೆಸರು |
|---|---|
| 1 | ವಾರ್ಷಿಕ ಮಳೆ ವರದಿ 2017 |
| 2 | ಬೆಳೆ ಅಂಕಿ–ಅಂಶಗಳ ಅಭಿವೃದ್ಧಿ ಯೋಜನೆ ಕೃಷಿ ಉತ್ಪನ್ನಗಳ ಅಂದಾಜು ಸ್ಥಿತಿಗತಿಗಳ ವರದಿ 2015–16 |
| 3 | 2013–14 ನೇ ಸಾಲಿನ ಕರ್ನಾಟಕ ರಾಜ್ಯದ ಕೃಷಿ ಬೆಳೆಗಳ ಕ್ಷೇತ್ರ, ಉತ್ಪಾದನೆ, ಇಳುವರಿ ಮತ್ತು ಬೆಲೆಗಳ ವರದಿ |
| 4 | ಜನನ ಮರಣ ನೋಂದಣಿಯ ಅಧಿನಿಯಮ 1969 ರ ಪ್ರಕಾರ ಜನನ ಮರಣ ನೋಂದಣಿಯ ವಾರ್ಷಿಕ ವರದಿ 2016 |
| 5 | ನೈರುತ್ಯ ಮುಂಗಾರು ಕುರಿತು ವರದಿ – 2017 |
| 6 | 2016–17 ನೇ ಸಾಲಿನ ಕರ್ನಾಟಕದಲ್ಲಿ ಬೆಲೆಗಳ ಪ್ರವೃತ್ತಿ |
| 7 | 2016–17 ನೇ ಸಾಲಿನ ಕರ್ನಾಟಕ ರಾಜ್ಯ ಮತ್ತು ಜಿಲ್ಲಾ ಆಂತರಿಕ ಉತ್ಪನ್ನ |
| 8 | ಕರ್ನಾಟಕ ರಾಜ್ಯದ ಆಯವ್ಯಯ ಆರ್ಥಿಕ ಮತ್ತು ಉದ್ದೇಶಿತ ವರ್ಗೀಕರಣ 2011–12 ರಿಂದ 2017––2018 |
| 9 | 2016 ನೇ ಸಾಲಿನ ಮರಣ ಕಾರಣ ವೈದ್ಯಕೀಯ ಪ್ರಮಾಣ ಪತ್ರ ವಾರ್ಷಿಕ ವರದಿ |
| 10 | ವಾರ್ಷಿಕ ಋತುವಾರು ಮಳೆ ಮತ್ತು ಬೆಳೆ ಕುರಿತು ವರದಿ – 2017 |
| 11 | ಕರ್ನಾಟಕದಲ್ಲಿ ಪುರುಷ ಮತ್ತು ಮಹಿಳೆ ವರದಿ 2016–17 |

## ಅನುಬಂಧ – 3

### 2018–19 ನೇ ಸಾಲಿನ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಿಂದ ಹೊರತರಲಾಗುತ್ತಿರುವ ಪ್ರಕಟಣೆಗಳು ವಿವರಗಳು.

| ಕ್ರಮ. ಸಂಖ್ಯೆ | ಪ್ರಕಟಣೆಗಳ ಹೆಸರು |
|---|---|
| 1 | ಕರ್ನಾಟಕ ರಾಜ್ಯದ ಮುಖ್ಯ ಬೆಳೆಗಳ ವರದಿ ಯೋಜನೆಯ ಅಂದಾಜು ವರದಿ 2016–17 |
| 2 | ಕೈಗಾರಕಾ ವಾರ್ಷಿಕ ಸಮೀಕ್ಷೆ –2013–14 ರಾಜ್ಯ ಮತ್ತು ಕೇಂದ್ರ ಮಾಹಿತಿ ಒಗ್ಗೂಡಿಸಿದ ವರದಿ |
| 3 | 2016–17ನೇ ಸಾಲಿನ ವಾರ್ಷಿಕ ಆಡಳಿತ ವರದಿ |
| 4 | ವಾರ್ಷಿಕ ಮಳೆ ವರದಿ – 2017 |
| 5 | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ರಾಜ್ಯ ಸರ್ಕಾರಿ ಸೇವೆಯಲ್ಲಿ ದಿನಾಂಕ 31/03/2017 ರಲ್ಲಿದ್ದಂತೆ ದೊರೆತಿರುವ ಪ್ರತಿನಿಧ್ಯದ ವರದಿ |
| 6 | ಕರ್ನಾಟಕ ಅಂಕಿ–ಅಂಶಗಳ ನೋಟ – 2016–17 |
| 7 | 2016–17 ನೇ ಸಾಲಿನ ಕರ್ನಾಟಕ ಅಂಕಿ–ಅಂಶಗಳ ಘೋಷ್ವಾರೆ |
| 8 | ಕೃಷಿ ಉತ್ಪನ್ನಗಳ ಅಂದಾಜು ಸ್ಥಿತಿಗತಿಗಳ ವರದಿ 2016–17 |
| 9 | ನೈರುತ್ಯ ಮುಂಗಾರು ಕುರಿತು ವರದಿ – 2018 |
| 10 | ರಾಷ್ಟ್ರೀಯ ಮಾದರಿ ಸಮೀಕ್ಷೆಯ 69ನೇ ಸುತ್ತಿನ ವರದಿ |
| 11 | ಬೆಳೆ ಕಟಾವು ಪ್ರಯೋಗಗಳನ್ನು ಮೊಬೈಲ್ ಆ್ಯಪ್ ತಂತ್ರಾಂಶದಲ್ಲಿ ಕೈಗೊಳ್ಳುವ ಕುರಿತು ಕೈಪಿಡಿ 2018–19 |
| 12 | 2017ನೇ ಸಾಲಿನ ಮರಣ ಕಾರಣ ವೈದ್ಯಕೀಯ ಪ್ರಮಾಣ ಪತ್ರ ವಾರ್ಷಿಕ ವರದಿ |
| 13 | ಜನನ ಮರಣ ನೋಂದಣಿಯ ಅಧಿನಿಯಮ 1969 ರ ಪ್ರಕಾರ ಜನನ ಮರಣ ನೋಂದಣಿಯ ವಾರ್ಷಿಕ ವರದಿ 2017 |
| 14 | ಕರ್ನಾಟಕ ರಾಜ್ಯದ ಆಯವ್ಯಯ ಆರ್ಥಿಕ ಮತ್ತು ಉದ್ದೇಶಿತ ವರ್ಗೀಕರಣ 2011–2012 ರಿಂದ 2018–2019 |
| 15 | ಕರ್ನಾಟಕ ರಾಜ್ಯ ಮತ್ತು ಜಿಲ್ಲಾ ಆಂತರಿಕ ಉತ್ಪನ್ನ 2017–18 |
| 16 | ಕರ್ನಾಟಕ ರಾಜ್ಯದ ಮುಖ್ಯ ಬೆಳೆಗಳ ಸಕಾಲಿಕ ವರದಿ ಯೋಜನೆಯ ವಿಸ್ತೀರ್ಣ ಅಂದಾಜು ವರದಿ – 2017–18 |
| 17 | 2017–18ನೇ ಸಾಲಿನ ವಾರ್ಷಿಕ ಆಡಳಿತ ವರದಿ |
| 18 | ವಾರ್ಷಿಕ ಋತುವಾರು ಮಳೆ ಮತ್ತು ಬೆಳೆ ಕುರಿತು ವರದಿ – 2018 |
| 19 | ಕರ್ನಾಟಕ ರಾಜ್ಯದ ಹಣ್ಣು, ತರಕಾರಿ ಮತ್ತು ಉಪ ಬೆಳೆಗಳ ಅಂದಾಜು ಸಮೀಕ್ಷೆ ವರದಿ –2014–15 |

# ಅನುಬಂಧ-1

## ನಿರ್ದೇಶನಾಲಯ, ಅಧೀನ ಕಚೇರಿಗಳು ಮತ್ತು ನಿಯೋಜನೆ ಮೇಲೆ ಇತರೆ ಇಲಾಖೆಗಳಲ್ಲಿರುವ ವೃಂದವಾರು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಧಿಕಾರಿ ಮತ್ತು ಸಿಬ್ಬಂದಿಯ ಮಂಜೂರಾದ, ಭರ್ತಿಯಾದ, ಖಾಲಿಯಿರುವ ಹುದ್ದೆಗಳ ವಿವರಗಳು 31.03.2019ರಲ್ಲಿದ್ದಂತೆ

| ಕ್ರ.ಸಂ | ವೃಂದ | ಮಂಜೂರಾದ ಹುದ್ದೆಗಳ ವಿವರ | | | ಭರ್ತಿಯಾದ ಹುದ್ದೆಗಳ ವಿವರ | | | ಖಾಲಿಯಿರುವ ಹುದ್ದೆಗಳ ವಿವರ | | |
|---|---|---|---|---|---|---|---|---|---|---|
| | | ಆಸಾಂನಿ | ನಿಯೋಜನೆ | ಒಟ್ಟು | ಆಸಾಂನಿ | ನಿಯೋಜನೆ | ಒಟ್ಟು | ಆಸಾಂನಿ | ನಿಯೋಜನೆ | ಒಟ್ಟು |
| <1> | <2> | <3> | <4> | <5> | <6> | <7> | <8> | <9> | <10> | <11> |
| 1 | ನಿರ್ದೇಶಕರು | 1 | 0 | 1 | 1 | 0 | 1 | 0 | 0 | 0 |
| 2 | ಅಪರ ನಿರ್ದೇಶಕರು | 1 | 0 | 1 | 1 | 0 | 1 | 0 | 0 | 0 |
| 3 | ಜಂಟಿ ನಿರ್ದೇಶಕರು | 6 | 41 | 47 | 3 | 21 | 24 | 3 | 20 | 23 |
| 4 | ಜಂಟಿ ನಿರ್ದೇಶಕರು (ಆಡಳಿತ) | 1 | 0 | 1 | 1 | 0 | 1 | 0 | 0 | 0 |
| 5 | ಉಪ ನಿರ್ದೇಶಕರು | 35 | 71 | 106 | 29 | 59 | 88 | 6 | 12 | 18 |
| 6 | ಸಹಾಯಕ ನಿರ್ದೇಶಕರು | 36 | 193 | 229 | 26 | 101 | 127 | 10 | 92 | 102 |
| 7 | ಪತ್ರಾಂಕಿತ ವ್ಯವಸ್ಥಾಪಕರು | 2 | 0 | 2 | 1 | 0 | 1 | 1 | 0 | 1 |
| 8 | ಸಹಾಯಕ ಸಾಂಖ್ಯಿಕ ಅಧಿಕಾರಿಗಳು | 158 | 412 | 570 | 143 | 281 | 424 | 15 | 131 | 146 |
| 9 | ಸಾಂಖ್ಯಿಕ ನಿರೀಕ್ಷಕರು | 283 | 284 | 567 | 143 | 58 | 201 | 140 | 226 | 366 |
| 10 | ಗಣತಿದಾರರು | 196 | 0 | 196 | 67 | 0 | 67 | 129 | 0 | 129 |
| 11 | ಅಧೀಕ್ಷಕರು | 38 | 0 | 38 | 29 | 0 | 29 | 9 | 0 | 9 |

| ಕ್ರ.ಸಂ | ವೃಂದ | ಮಂಜೂರಾದ ಹುದ್ದೆಗಳ ವಿವರ | | | ಭರ್ತಿಯಾದ ಹುದ್ದೆಗಳ ವಿವರ | | | ಖಾಲಿಯಿರುವ ಹುದ್ದೆಗಳ ವಿವರ | | |
|---|---|---|---|---|---|---|---|---|---|---|
| | | ಆಸಾಂನಿ | ನಿಯೋಜನೆ | ಒಟ್ಟು | ಆಸಾಂನಿ | ನಿಯೋಜನೆ | ಒಟ್ಟು | ಆಸಾಂನಿ | ನಿಯೋಜನೆ | ಒಟ್ಟು |
| 12 | ಶೀಘ್ರಲಿಪಿಗಾರರು | 5 | 0 | 5 | 4 | 0 | 4 | 1 | 0 | 1 |
| 13 | ಪ್ರಥಮ ದರ್ಜೆ ಸಹಾಯಕರು | 43 | 0 | 43 | 31 | 0 | 31 | 12 | 0 | 12 |
| 14 | ಹಿರಿಯ ಬೆರಳಚ್ಚುಗಾರರು | 14 | 0 | 14 | 7 | 0 | 7 | 7 | 0 | 7 |
| 15 | ದ್ವಿತೀಯ ದರ್ಜೆ ಸಹಾಯಕರು | 39 | 0 | 39 | 32 | 0 | 32 | 7 | 0 | 7 |
| 16 | ಬೆರಳಚ್ಚುಗಾರರು | 58 | 1 | 59 | 11 | 0 | 11 | 47 | 1 | 48 |
| 17 | ಹಿರಿಯ ವಾಹನ ಚಾಲಕರು | 7 | 0 | 7 | 3 | 0 | 3 | 4 | 0 | 4 |
| 18 | ವಾಹನ ಚಾಲಕರು | 24 | 0 | 24 | 16 | 0 | 16 | 8 | 0 | 8 |
| 19 | ದಫೇದಾರ್ | 1 | 0 | 1 | 0 | 0 | 0 | 1 | 0 | 1 |
| 20 | ಅಟೆಂಡರ್ | 6 | 0 | 6 | 3 | 0 | 3 | 3 | 0 | 3 |
| 21 | ಸಮೂಹ ಡಿ ನೌಕರರು | 70 | 0 | 70 | 36 | 0 | 36 | 34 | 0 | 34 |
| 22 | ರಾತ್ರಿ ಕಾವಲುಗಾರರು | 2 | 0 | 2 | 1 | 0 | 1 | 1 | 0 | 1 |
| | **ಒಟ್ಟು** | **1026** | **1002** | **2028** | **588** | **520** | **1108** | **438** | **482** | **920** |

**ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಜಂಟಿ ನಿರ್ದೇಶಕರ ಹುದ್ದೆಗಳು ಯೋಜನಾ ಇಲಾಖೆಯಲ್ಲಿ ಮಂಜೂರಾಗಿರುವ 11 ನಿರ್ದೇಶಕರ/ಜಂಟಿ ನಿರ್ದೇಶಕರ ಹುದ್ದೆಗಳು ಜಂಟಿ ನಿರ್ದೇಶಕರ ಹುದ್ದೆಗೆ ಸಮಾನಾಂತರವಾಗಿದ್ದು, ಇವುಗಳನ್ನು ಎಕ್ಸ್-ಕೇಡರ್ ಎಂದು ಪರಿಗಣಿಸಲಾಗಿರುತ್ತದೆ.**